ಸಂಪುಟ 15
ಸಂಚಿಕೆ 43

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ರೂ. 2.00
31 ಅಕ್ಟೋಬರ್ 1993

ಕಾಂಗ್ರೈ ಜಾಫರ್ ಪರಿವಾರದ ಭೂ ಹಗರಣ

ಭಾರತದ ಬಂಡವಾಳಗಾರರ ಪ್ರಮುಖ ರಾಜಕೀಯ ಪಕ್ಷವಾದ ಕಾಂಗ್ರೈ ನಾಯಕರು, ಮಂತ್ರಿಗಳು ಭೂಮಿಯನ್ನು ಕಬಳಿಸುವುದರಲ್ಲಿ, ಆಸ್ತಿ ಮಾಡುವುದರಲ್ಲಿ ನಿಸ್ಸೀಮರು. ಕಾಂಗ್ರೆಸ್(ಐ) ಪಕ್ಷದಲ್ಲಿ ಭಿನ್ನಮತ, ಒಳಜಗಳ ತೀವ್ರವಾಗುವಾಗ ಅಂತಹ ಪ್ರಕರಣಗಳು ಒಂದೊಂದಾಗಿ ದಿನ ಪತ್ರಿಕೆಗಳ ಮೂಲಕ ಬೆಳಕಿಗೆ ಬರುತ್ತವೆ. ಒಂದು ವಾರದಿಂದೀಚೆಗೆ ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದಿದ ಆರಿಸಿ ಹೋಗಿ ಕೇಂದ್ರ ಸರ್ಕಾರದಲ್ಲಿ ರೈಲ್ವೆ ಸಚಿವರಾಗಿರುವ ಸಿ.ಕೆ. ಜಾಫರ್ ಷರೀಫರ ಹೆಸರು ಭೂ ಹಗರಣದಲ್ಲಿ ರಾರಾಜಿಸುತ್ತಿದೆ. ಕಾಂಗ್ರೈ ಶಾಸಕಾಂಗ ಪಕ್ಷದಲ್ಲಿ ಭಿನ್ನಮತೀಯರು ಷರೀಫರು, ಅವರ ಕುಟುಂಬದವರು ಅಕ್ರಮವಾಗಿ ಭೂಮಿಯನ್ನು ಪಡೆದಿರುವ ಆರೋಪ ಮಾಡಿ, ಈ ಬಗ್ಗೆ ತನಿಖೆ ನಡೆಸಬೇಕೆಂದು ಒತ್ತಾಯಿಸಿದರು. ಈಗ ದಿನಪತ್ರಿಕೆಗಳು ಷರೀಫರ ಕುಟುಂಬದವರು ಭೂಮಿಯನ್ನು ಆಕ್ರಮಿಸಿಕೊಂಡಿರುವ ಕುರಿತು ಸರ್ವೆ ನಂ. ಸಹಿತ ಸುದ್ದಿಗಳನ್ನು ಪ್ರಕಟಿಸಿವೆ. ತಮ್ಮ ಕುಟುಂಬದ ಭವಿಷ್ಯದ ದೃಷ್ಟಿಯಿಂದ ಯಲಹಂಕದ ಬಳಿ 19 ಎಕರೆ ಭೂಮಿಯನ್ನು ಕುಟುಂಬದವರು ಖರೀದಿ ಮಾಡಿರುವುದಾಗಿ ಷರೀಫರೇ ಹೇಳಿದ್ದಾರೆ.

ಕಾಂಗ್ರೆಸ್ಸಿನೊಳಗಿನ ಗುಂಪುಕಾಳಗದಲ್ಲಿ ಷರೀಫರ ಪಾತ್ರವೇನೂ ಚಿಕ್ಕದಲ್ಲ. 1969 ರಲ್ಲಿ ಕಾಂಗ್ರೆಸ್ ಒಡೆಯುವ ಮುನ್ನ ಅಂದಿನ ಕಾಂಗ್ರೆಸ್ ಮುಖಂಡರಾದ ಅಧ್ಯಕ್ಷ ಎಸ್. ನಿಜಲಿಂಗಪ್ಪ, ಕಾಮರಾಜನಾಡರ್, ಅತುಲ್ಯ ಘೋಷ್, ಎಸ್.ಕೆ. ಪಾಟೀಲ, ಎನ್. ಸಂಜೀವ ರೆಡ್ಡಿ ಮೊದಲಾದವರು ಬೆಂಗಳೂರಿನ ಕಾಂಗ್ರೆಸ್ ಭವನದಲ್ಲಿ ಮುಂಬರುವ ರಾಷ್ಟ್ರಾಧ್ಯಕ್ಷರ ಚುನಾವಣೆಯ ಬಗ್ಗೆ ನಡೆಸುತ್ತಿದ್ದ ಚರ್ಚೆಯನ್ನು ಅಲ್ಲಿ ಅವರ ಚಾಕರಿ ಮಾಡುತ್ತಿದ್ದ ಜಾಫರ್ ಷರೀಫ್ ಕೇಳಿಸಿಕೊಂಡು ನವದೆಹಲಿಯಲ್ಲಿದ್ದ ಇಂದಿರಾ ಗಾಂಧಿಯವರಿಗೆ ಫೋನ್ ಮಾಡಿ ನಡೆಯುತ್ತಿದ್ದ ಚರ್ಚೆಯನ್ನು ವರದಿ ಮಾಡಿ ಅವರ ಪ್ರೀತಿ ಪಾತ್ರರಾದರು. ಬೆಂಗಳೂರಿನಲ್ಲಿ ಆಗ ನಡೆದ ಕಾಂಗ್ರೆಸ್ ಸಭೆಯಲ್ಲಿ ಕಾಂಗ್ರೆಸ್ ಒಡೆಯಿತು. 1971 ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ (ಆರ್) ಟಿಕೆಟ್ ಸಿಕ್ಕಿ ಕನಕಪುರ ಕ್ಷೇತ್ರದಿಂದ ಸ್ಪರ್ಧಿಸಿ ಷರೀಫ್ ಗೆದ್ದರು.

ನೆಹರು ಕುಟುಂಬದ ಭಂಟರಾದ ಷರೀಫರು 1990 ರಲ್ಲಿ ರಾಜೀವ್‌ಗಾಂಧಿಯವರ ಇಂಗಿತದ ಮೇರೆಗೆ ಆಗ ಕರ್ನಾಟಕದ ಕಾಂಗ್ರೆಸ್(ಐ) ಸರ್ಕಾರದ ಮುಖ್ಯಮಂತ್ರಿಯಾಗಿದ್ದ ವೀರೇಂದ್ರ ಪಾಟೀಲರ ಆಡಳಿತದ ಮೇಲೆ ಕಿಡಿ ಕಾರಿದರು. ವೀರೇಂದ್ರ ಪಾಟೀಲರು ತಮ್ಮ ಮುಖ್ಯಮಂತ್ರಿಸ್ಥಾನವನ್ನು ಕಳೆದುಕೊಂಡರು.

ಈ ಘಟನೆಗಳನ್ನು ನೋಡಿದರೆ ಕಾಂಗ್ರೆಸ್ ಗುಂಪುಗಾರಿಕೆಯಲ್ಲಿ ಜಾಫರ್ ಷರೀಫರು ಎಂತಹ ಬಲಿಷ್ಠ ಕುಳ ಎಂಬುದು ವೇದ್ಯವಾಗುವುದು.

ಈಗ ಅವರು ಭೂ ಆಕ್ರಮಣ ಮಾಡಿರುವುದು ಬಹಿರಂಗವಾಗಿದೆ. ಕಂದಾಯ ಸಚಿವ ರಾಜಶೇಖರ ಮೂರ್ತಿಯವರು ಷರೀಫ್ ಅವರು ತಮ್ಮ ಕುಟುಂಬದವರು ಹಾಗೂ ಬಂಧುಗಳ ಹೆಸರಿನಲ್ಲಿ ಬೇನಾಮಿಯಾಗಿ ಭೂಮಿ ಖರೀದಿಸಿದ್ದಾರೆ ಎಂದು ಹೇಳಲಾಗಿರುವ ಈ ಖರೀದಿ ವ್ಯವಹಾರದಲ್ಲಿ ಭೂ ಕಂದಾಯ, ಭೂಸುಧಾರಣೆ, ಇನಾಂ ರದ್ದತಿ, ಭೂಸ್ವಾಧೀನ ಕಾನೂನುಗಳ ಉಲ್ಲಂಘನೆಯಾಗಿದೆಯೇ ಎಂಬುದನ್ನು ಪರಿಶೀಲಿಸಲು ಬೆಂಗಳೂರು ವಿಭಾಗಾಧಿಕಾರಿಗಳಿಗೆ ಆದೇಶಿಸಿದ್ದರು. ಈ ನಿರ್ಧಾರವಾದ ಕೇವಲ 24 ಗಂಟೆಗಳಲ್ಲಿ ಬೆಂಗಳೂರು ವಿಭಾಗಾಧಿಕಾರಿ ವೀಣಾ ಶ್ರೀರಾಮರ ಎತ್ತಂಗಡಿಯಾಯಿತು. ಷರೀಫರು ರಾಜಶೇಖರ ಮೂರ್ತಿ ಬಿಜೆಪಿ ಸೇರಲಿದ್ದಾರೆಂದು ಆರೋಪಿಸಿದರು. ಕಂದಾಯ ಸಚಿವರು ನಡೆಸುವ ವಿಚಾರಣೆಯಲ್ಲಿ ತಮಗೆ ನ್ಯಾಯ ಸಿಕ್ಕುವುದಿಲ್ಲವೆಂಬ ಷರೀಫರ ಹೇಳಿಕೆಯನ್ನು ಪರಿಶೀಲಿಸಿದ ವೀರಪ್ಪ ಮೊಯಿಲಿಯವರ ಸಚಿವ ಸಂಪುಟವು ಭೂ ಆಕ್ರಮಣದ ಆರೋಪದ ಕುರಿತು ಮಾಹಿತಿ ಸಂಗ್ರಹಿಸಿ ಸಚಿವ ಸಂಪುಟಕ್ಕೆ ವರದಿ ಮಾಡುವ ಜವಾಬ್ದಾರಿಯನ್ನು ಮುಖ್ಯ ಕಾರ್ಯದರ್ಶಿ ಜೆ.ಸಿ. ಲಿನ್‌ರಿಗೆ ವಹಿಸಿ, ಭಿನ್ನಮತೀಯರಿಗೆ ಮುಖಭಂಗ ಮಾಡಿದೆ.

ಕಳೆದ ಒಂದು ವಾರದಲ್ಲಿ ರಾಜ್ಯದಲ್ಲಿ ಅತಿವೃಷ್ಟಿಯು ಮುಂದುವರೆದಿದ್ದು ರಾಜ್ಯದ ಜನರು ಹೇಳಲಾಗದ ಕಷ್ಟಗಳಿಗೆ ಗುರಿಯಾಗಿದ್ದಾರೆ. 21 ರಂದು ಮಂಗಳೂರಲ್ಲಿ ಭಾರಿ ಮಳೆಯಿಂದ ಮೂವರು ಸತ್ತಿದ್ದಾರೆ. ಮಳೆಯಲ್ಲಿ ಮನೆಗಳನ್ನು ಕಳೆದು ಕೊಂಡಿರುವ ಸಹಸ್ರಾರು ಕುಟುಂಬಗಳು ತಲೆಯ ಮೇಲೊಂದು ಸೂರಿಗಾಗಿ ಬವಣೆ ಪಡುತ್ತಿದ್ದಾರೆ. ಮೊಯಿಲಿಯವರ ಸಚಿವ ಸಂಪುಟ ಕೇಂದ್ರದಿಂದ ನೆರವನ್ನು ನಿರೀಕ್ಷಿಸುತ್ತಿದೆ.

ಈ ಕಷ್ಟಗಳ ಪರಿಹಾರಕ್ಕೆ ಯುದ್ಧೋಪಾದಿಯಲ್ಲಿ ಕ್ರಮವಹಿಸುವ ಬದಲು ಜಾಫರ್ ಷರೀಫರು, ಮೊಯಿಲಿ, ಮೂರ್ತಿ ಮುಂತಾದ ಕಾಂಗ್ರೆಸ್(ಐ) ಮುಖಂಡರು ಗುಂಪು ಕಾಳಗದಲ್ಲಿ ತಲ್ಲೀನರಾಗಿದ್ದಾರೆ. 1989 ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್(ಐ) ಪಕ್ಷವನ್ನು ದೊಡ್ಡ ಬಹುಮತದಿಂದ ಅಧಿಕಾರದ ಗದ್ದುಗೆಗೇರಿಸಿದ ಕರ್ನಾಟಕದ ಮತದಾರರು ಈ ಸ್ಥಿತಿಯನ್ನು ಎಲ್ಲಿಯವರೆಗೆ ಸಹಿಸುವರು ಎಂಬುದೇ ಪ್ರಶ್ನೆ.

ಲಕ್ಷಾಂತರ ಜನರಿಗೆ ರಾಜ್ಯದಲ್ಲಿ, ನಗರಗಳಲ್ಲಿ ವಾಸಕ್ಕೆ ಮನೆ ಕಟ್ಟಲು ನಿವೇಶನಗಳು ಇಲ್ಲದಿರುವಾಗ ಜಾಫರ್ ಷರೀಫ್‌ರಂತಹ ಕಾಂಗ್ರೈ ಖದೀಮರು ಕಾನೂನನ್ನು ಧಿಕ್ಕರಿಸಿ ಭೂಮಿಯನ್ನು ಕಬಳಿಸಿರುವುದು ಅಕ್ಷಮ್ಯ ಅಪರಾಧ. ಷರೀಫರ ಕುಟುಂಬದ ಮೇಲಿರುವ ಭೂ ಆಕ್ರಮಣದ ಆರೋಪಗಳ ಮೇಲೆ ಸರಿಯಾದ ತನಿಖೆಯಾಗಲೇ ಬೇಕು.•

ಪಾಶ್ಚಿಮಾತ್ಯ ಪ್ರಸಾರ ಮಾಧ್ಯಮವು ಮಾಸ್ಕೋ ಜನಸಮುದಾಯದ ಪಾತ್ರವನ್ನು ಮರೆಮಾಚಿದ್ದು ಯಾಕೆ?

(ಪಿ.ಡಿ. ಸಂಪಾದಕೀಯ)

ಮಾಸ್ಕೋದಲ್ಲಿ "ವೈಟ್‌ಹೌಸ್" ಅನ್ನು ಧ್ವಂಸ ಮಾಡುವ ಗದ್ದಲದ ನಂತರ ಯೆಲ್ಟ್‌ಸಿನ್ ಮತ್ತು ಪಾಶ್ಚಿಮಾತ್ಯ ಪ್ರಸಾರ ಮಾಧ್ಯಮದ ಬಹುಭಾಗ ಮಾಸ್ಕೋದಲ್ಲಿ ಪಾರ್ಲಿಮೆಂಟನ್ನು ಯೆಲ್ಟ್‌ಸಿನ್ ಕರೆಯ ಮೇರೆಗೆ ಸೈನ್ಯದ ತುಕಡಿಗಳು ಸುತ್ತುವರಿದಾಗ ಮಾಸ್ಕೋದ ಜನ ಸಮುದಾಯವು ಸ್ವಯಂ ಪ್ರೇರಣೆಯಿಂದ ವಹಿಸಿದ ಪಾತ್ರವನ್ನು ಉದ್ದೇಶ ಪೂರ್ವಕವಾಗಿ ಕಡೆಗಣಿಸಿವೆ. ಈಗ ಪಾರ್ಲಿಮೆಂಟೇನ್ನಿಯರು ಆಡಳಿತಕ್ಕೆ ತೋರಿಸುತ್ತಿದ್ದ ವಿರೋಧವನ್ನು ಸದೆಬಡಿದ ತರುವಾಯ ವಿವಿಧ ಮೂಲಗಳಿಂದ ಬರುತ್ತಿರುವ ವರದಿಗಳು ಆ ದಿವಸಗಳಲ್ಲಿ ಏನೆಲ್ಲಾ ನಡೆಯಿತೆಂಬುದರ ಬಗ್ಗೆ ಬೆಳಕನ್ನು ಚೆಲ್ಲುತ್ತಿವೆ.

ವೈಟ್ ಹೌಸ್‌ನ ಮೇಲೆ ಟ್ಯಾಂಕುಗಳು ದಾಳಿ ಮಾಡುತ್ತಿದ್ದಾಗ ಇಟಲಿಯ ಇಬ್ಬರು ಪತ್ರಿಕಾ ಪ್ರತಿನಿಧಿಗಳು ಆ ಕಟ್ಟಡದ ಮೇಲೆ ರುತ್ಸಕೋಯಿ ಅವರನ್ನು ಭೇಟಿ ಮಾಡಿದ ಕುರಿತು ಲಂಡನ್‌ನ "ಇಂಡಿಪೆಂಡಂಟ್" ವರದಿ ಮಾಡಿದೆ. ಈ ಪತ್ರಿಕಾ ಪ್ರತಿನಿಧಿಗಳು ಕೇಳಿದ ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ ಹೊರಗಿದ್ದ ಪಡೆಗಳ ಮೇಲೆ ವೈಟ್ ಹೌಸ್‌ನಿಂದ ಮೊದಲು ಗುಂಡು ಹಾರಿಸಲಿಲ್ಲವೆಂದು ರುತ್ಸ್‌ಕೋಯಿ ಖಡಾಖಂಡಿತವಾಗಿ ಹೇಳಿದ್ದಾರೆ. ಅವರಾಗಲಿ ಅಥವಾ ಆ ಕಟ್ಟಡದಲ್ಲಿದ್ದ ಯಾರೇ ಆಗಲೀ ಪಾರ್ಲಿಮೆಂಟನ್ನು ರಕ್ಷಿಸಲು ಹೊರಗೆ ನೆರೆದಿದ್ದ ಜನ ಸಮೂದಾಯಕ್ಕೆ ಟಿ.ವಿ. ಕೇಂದ್ರವನ್ನು ಆಕ್ರಮಿಸಿಕೊಳ್ಳಲಾಗಲೀ ಅಥವಾ ಕ್ರೆಮ್ಲಿನನ್ನು ಆಕ್ರಮಿಸಿಕೊಳ್ಳಲಾಗಲೀ ಕರೆ ಕೊಡಲಿಲ್ಲವೆಂದು ಸ್ಪಷ್ಟವಾಗಿ ಹೇಳಿದರು. ಘಟನೆಗಳಿಗೆ ಪಾರ್ಲಿಮೆಂಟೇರಿಯನ್ಸರನ್ನೇ ಹೊಣೆಗಾರರನ್ನಾಗಿ ಮಾಡಲು ಪ್ರಸಾರ ಮಾಧ್ಯಮವು ಈ ಕಪೋಲಕಲ್ಪಿತ ಕಥೆಗಳನ್ನು ವರದಿಮಾಡಿತ್ತು.

ಟಿ.ವಿ. ಕೇಂದ್ರವನ್ನು ಹಿಡಿಯಲು ಜನಸಮುದಾಯಕ್ಕೆ ಯಾರು ಆಜ್ಞೆಯನ್ನು ಕೊಟ್ಟರು ಎಂಬ ಪ್ರಶ್ನೆ ಹಾಗೆಯೇ ಉಳಿಯುತ್ತದೆ. ಆ ಭೀಕರ ಕಾಳಗದಲ್ಲಿ ಅನೇಕರು ಮೃತರಾದರು. ವೈಟ್ ಹೌಸ್‌ನ ಮೇಲೆ ಪಾಶವೀದಾಳಿ ನಡೆಯುತ್ತಿದ್ದಾಗ ಪಾರ್ಲಿಮೆಂಟ್ ಕಟ್ಟಡದ ಮೇಲೆ ನಡೆಯುತ್ತಿದ್ದ ಆ ಭೀಕರ ದಾಳಿಯನ್ನು ಅಲ್ಲಿ ನೆರೆದಿದ್ದ ಹತ್ತರಿಂದ ಹದಿನೈದು ಸಾವಿರದಷ್ಟಿದ್ದ ಜನಸಮುದಾಯವು ನೋಡುತ್ತಿತ್ತೆಂಬುದು ಈಗ ಸ್ಪಷ್ಟವಾಗುತ್ತಿದೆ. ಯೆಲ್ಟ್‌ಸಿನ್ನರ ಟಿ.ವಿ. ನಡೆಸುತ್ತಿದ್ದ ಕೀಳು ಮಟ್ಟದ ಪ್ರಚಾರವನ್ನು ಕಡೆಗಣಿಸಲು ಆ ಜನ ಸಮೂಹವು ತಾನಾಗಿಯೇ ಟಿ.ವಿ. ಕೇಂದ್ರದತ್ತ ನುಗ್ಗಿತ್ತು. ಜನ ಸಮೂಹದ ಮಧ್ಯ ಪ್ರವೇಶವು ಪೂರ್ತಿಯಾಗಿ ಸ್ವಯಂ ಪ್ರೇರಣೆಯಿಂದ ಕೂಡಿತ್ತು.

ಪುಟ 6ನೋಡಿ

ಡಿ. 6, 1993 ರಂದು ರಾಷ್ಟ್ರವ್ಯಾಪಿ ಧರಣಿ

ಕಾರ್ಮಿಕ ಸಂಘಗಳ ಪ್ರಾಯೋಜಕ ಸಮಿತಿಯ ಕರೆ

ಕಾರ್ಮಿಕ ಸಂಘಗಳ ಪ್ರಾಯೋಜಕ ಸಮಿತಿಯು ಇತ್ತೀಚೆಗೆ ದೆಹಲಿಯಲ್ಲಿ ಸಭೆ ಸೇರಿ ಹಿಂದಿನ ನಿರ್ಣಯಗಳ ಜಾರಿ ಹಾಗೂ ಮುಂದಿನ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದರ ಬಗ್ಗೆ ಚರ್ಚಿಸಿತು.

ಈ ಸಭೆಯು ಸೆ. 9 ರ ಭಾರತ್ ಬಂದ್‌ಗೆ ತಮ್ಮ ಅಭೂತಪೂರ್ವ ಬೆಂಬಲ ನೀಡಿದ ಎಲ್ಲ ಕಾರ್ಮಿಕರಿಗೂ ಜನರಿಗೂ ತನ್ನ ಅಭಿನಂದನೆಯನ್ನು ಸಲ್ಲಿಸಿತು. ಹಾಗೆಯೇ ಇನ್ನು ಮುಂದುವರೆಯುವ ಸಮರಧೀರ ಚಳುವಳಿಗೆ ಇಳಿದು ಕಾಂಗ್ರೈ ಸರಕಾರದ ಹೊಸ ನೀತಿಗಳನ್ನು ಸಮರ್ಥವಾಗಿ ವಿರೋಧಿಸುವ ತನ್ನ ನಿರ್ಣಯವನ್ನು ಪುನರುಚ್ಚರಿಸಿತು.

ಇತ್ತೀಚೆಗೆ ಭಾರತದಲ್ಲಿ ಹಿಂದೆಂದೂ ಸಂಭವಿಸದ ಭೂಕಂಪದಿಂದ ಸತ್ತವರಿಗೆ ತನ್ನ ಹಾರ್ದಿಕ ಸಂತಾಪವನ್ನು ಸಲ್ಲಿಸಿತು. ಹಾಗೆಯೇ ಇತ್ತೀಚೆಗೆ ನಿಧನರಾದ ಕಾರ್ಮಿಕ ಮುಂದಾಳುಗಳಾದ ನಾನಿ ಭಟ್ಟಾಚಾರ್ಯ, ಗೋಪಾಲ್ ಹಲ್‌ದಾರ್ ಮತ್ತು ವಿ. ಸುಬ್ಬಯ್ಯ ಇವರುಗಳಿಗೆ ತನ್ನ ತೀವ್ರ ಸಂತಾಪವನ್ನು ಸಲ್ಲಿಸಿತು. ಭೂಕಂಪ ಪರಿಹಾರ ನಿಧಿಗೆ ಉದಾರವಾಗಿ ಸಹಾಯ ಮಾಡಲು ಕಾರ್ಮಿಕ ವರ್ಗಕ್ಕೆ ಕರೆ ನೀಡಿತು.

ಪ್ರಾಯೋಜಕ ಸಮಿತಿಯ ಸಭೆಯು ಕೇಂದ್ರ ಸರಕಾರದ ಆರ್ಥಿಕ ನೀತಿಗಳಿಗೆ ಪರ್ಯಾಯ ನೀತಿಯೊಂದನ್ನು ತಯಾರಿಸಲು ನಿರ್ಧರಿಸಿ ಈ ಮೂಲಕ ಆರ್ಥಿಕ ನೀತಿಗಳ ವಿರುದ್ಧದ ತನ್ನ ಚಳುವಳಿಯನ್ನು ತೀವ್ರಗೊಳಿಸಲು ತೀರ್ಮಾನಿಸಿತು. ರೋಗಗ್ರಸ್ಥ ಕಾರ್ಖಾನೆಗಳೆಂದು ಘೋಷಿತವಾದ ಕಾರ್ಖಾನೆಗಳನ್ನು ಉಳಿಸಲು ಕಾರ್ಖಾನೆಗಳ ರೋಗಗ್ರಸ್ತತೆ ಕುರಿತು ಅಖಿಲ ಭಾರತ ವಿಚಾರ ಸಂಕಿರಣವನ್ನು ಏರ್ಪಡಿಸುವ ತನ್ನ ನಿಲುವನ್ನು ಪುನರುಚ್ಚರಿಸಿ ಕೇಂದ್ರದ ಖಾಸಗೀಕರಣದ ನೀತಿಯನ್ನು ಹಿಮ್ಮೆಟ್ಟಿಸಲು ತೀರ್ಮಾನಿಸಿತು. ಈ ದಿಕ್ಕಿನಲ್ಲಿ ನಡೆಸುವ ಹೋರಾಟದ ಕಣಕ್ಕೆ ಧುಮುಕಲು ಪ್ರಾಯೋಜಕ ಸಮಿತಿಯಿಂದ ಹೊರಗಿರುವ ಕಾರ್ಮಿಕ ಸಂಘಗಳಿಗೆ ಕರೆ ಕೊಟ್ಟಿದೆ.

ಐ.ಎಂ.ಎಫ್.-ವಿಶ್ವಬ್ಯಾಂಕ್ ಪ್ರೇರಿತ ಹೊಸ ಆರ್ಥಿಕ ನೀತಿಯನ್ನು ಕೇಂದ್ರ ಸರಕಾರ ಹೇರುವುದರ ವಿರುದ್ಧ ರಾಷ್ಟ್ರವ್ಯಾಪಿ ಧರಣಿಗಳನ್ನು ಆಯಾ ರಾಜ್ಯಗಳ ರಾಜ

ಪುಟ 6ನೋಡಿ

ಪಾಕಿಸ್ತಾನದಲ್ಲಿನ ಚುನಾವಣೆಯಲ್ಲಿ ಹೊಸ ಬೆಳವಣಿಗೆಗಳು

ಇದೇ ಅಕ್ಟೋಬರ್ ಆರರಂದು ಪಾಕಿಸ್ತಾನದಲ್ಲಿ ಹೊಸ ಸಂಸತ್ತಿಗೆ ಚುನಾವಣೆಗಳು ನಡೆದವು. ಹಲವು ದಶಕಗಳಲ್ಲಿ ಪಾಕಿಸ್ತಾನದಲ್ಲಿ ನಡೆದ ಅತ್ಯಂತ ಮುಕ್ತ ಮತ್ತು ನ್ಯಾಯಯುತ ಚುನಾವಣೆ ಇದೆಂದು ಹೇಳಲಾಗುತ್ತಿದೆ. ಬೆನಜಿರ್ ಭುಟ್ಟೋರ ಪಾಕಿಸ್ತಾನ ಪೀಪಲ್ಸ್ ಪಾರ್ಟಿ (ಪಿಪಿಪಿ) 86 ಸ್ಥಾನಗಳನ್ನು ಪಡೆದರೆ ನವಾಜ್ ಶರೀಫರ ಪಾಕಿಸ್ತಾನ ಮುಸ್ಲಿಂ ಲೀಗ್ 73 ಸ್ಥಾನಗಳಲ್ಲಿ ಗೆದ್ದಿದೆ. ಸಂಸತ್ತಿನಲ್ಲಿ ಒಟ್ಟು ಸ್ಥಾನಗಳು 217. ಇವುಗಳಲ್ಲಿ 201ಕ್ಕೆ ಚುನಾವಣೆ ನಡೆದವು. ಇದರಲ್ಲಿ ಹತ್ತು ಸ್ಥಾನಗಳು ಅಲ್ಪಸಂಖ್ಯಾತರಿಗೆ ಮೀಸಲಾದವು. ಐದು ಸ್ಥಾನಗಳಲ್ಲಿ ಚುನಾವಣೆಗಳು ಮುಂದೂಡಲ್ಪಟ್ಟವು. ಉಳಿದ ಸ್ಥಾನಗಳನ್ನು ಸ್ವತಂತ್ರ ಅಭ್ಯರ್ಥಿಗಳು ಸಣ್ಣ ಪುಟ್ಟ ಪಕ್ಷಗಳು ಪಡೆದವು.

ಈ ಚುನಾವಣೆಯಲ್ಲಿ ಕೆಲವು ಅಸಮಾನ್ಯ ಬೆಳವಣಿಗೆಗಳು ಕಂಡು ಬಂದವು. ಉತ್ತರ ಭಾರತದ ನಿರಾಶ್ರಿತರ ಮೊಹಜಿರ್ ಖ್ವಾಮಿ ಚಳುವಳಿ ರಾಷ್ಟ್ರೀಯ ಸಂಸತ್ತಿನ ಚುನಾವಣೆಗಳನ್ನು ಬಹಿಷ್ಕರಿಸಿತ್ತು. ಆದರೆ ಅದು ಅಕ್ಟೋಬರ್ 9 ರಂದು ನಡೆದ ಪ್ರಾದೇಶಿಕ ಚುನಾವಣೆಗಳಲ್ಲಿ ಭಾಗವಹಿಸಿತ್ತು. ಚುನಾವಣೆಯ ನಂತರ ನಾಲ್ಕು ತಿಂಗಳ ಕಾಲ ಪಕ್ಷಾಂತರವನ್ನು ನಿಷೇಧಿಸಿದ್ದು ಮುಖ್ಯ ಬೆಳವಣಿಗೆ. ಸೇನೆಯ ನಿಷ್ಪಕ್ಷಪಾತಿ ಮತ್ತು ನಿಷ್ಠುರ ಮೇಲ್ವಿಚಾರಣೆ ಪಾಕಿಸ್ತಾನದ ಇತಿಹಾಸದಲ್ಲೇ ಮುಖ್ಯ ಬೆಳವಣಿಗೆ.

ಚುನಾವಣಾ ಪರಿಣಾಮಗಳು ವಿಶಿಷ್ಟವಾಗಿವೆ. ನವಾಜ್ ಶರೀಫ್ ಪ್ರಬಲರಾಗಿದ್ದ ಪಂಜಾಬಿನಲ್ಲಿ ಭುಟ್ಟೋರ ಪಕ್ಷ 111 ರಲ್ಲಿ 45 ಸ್ಥಾನಗಳನ್ನು ಗೆದ್ದಿದ್ದಾರೆ. ಆದರೆ ಇದೆಲ್ಲಕ್ಕಿಂತ ಮುಖ್ಯವಾದದ್ದೆಂದರೆ ಮೂಲಭೂತವಾದಿಗಳು ಸೋಲು ತಿಂದದ್ದು. ಜನಕ್ಕೆ ಈ ಮೂಲಭೂತವಾದಿಗಳ ಬಗ್ಗೆ ನಿರಾಶೆಯಾಗಿರುವುದು ಸ್ಪಷ್ಟ. ಇದು ಸ್ವಾಗತಾರ್ಹ ಬೆಳವಣಿಗೆ ಭಾರತ ಪಾಕಿಸ್ತಾನ ವಿಭಜನೆಯಾದದ್ದೇ ಹಿಂದು- ಮುಸ್ಲಿಂ ಧರ್ಮಗಳ ಆಧಾರದ ಮೇಲೆ ಆದರೆ ಈ ಚುನಾವಣಾ ಪರಿಣಾಮಗಳು ಹಿಂದಿನ ರಾಷ್ಟ್ರೀಯತೆಯ ಬಗ್ಗೆ ಇರಿಸಿಕೊಂಡಿರುವ ಈ ತರ

ಪುಟ 8ನೋಡಿ

ಅಣ್ವಸ್ತ್ರ ತಂತ್ರಜ್ಞಾನ ಭಯೋತ್ಪಾದಕರ ಕೈಗೆ ಸಿಕ್ಕಿದ್ದು ಹೇಗೆ?

ಆರ್‌ಡಿಎಕ್ಸ್-ಮುಂಬಯಿ ಸ್ಫೋಟಕ್ಕೂ-ಸೋವಿಯೆತ್ ವಿಘಟನೆಗೂ ಸಂಬಂಧವಿದೆಯೇ?

ಆರ್.ಡಿ.ಎಕ್ಸ್-ಮುಂಬಯಿ, ದೆಹಲಿ, ಸಿಕಂದರಾಬಾದಿನ ಭಾರಿ ಆಸ್ಫೋಟಗಳಲ್ಲಿ ಉಪಯೋಗಿಸಲಾದ ಆಸ್ಫೋಟಕ. ಆರ್.ಡಿ.ಎಕ್ಸ್ ಪ್ಲಾಸ್ಟಿಕ್‌ನಂತೆ ಮಣಿಯಬಲ್ಲ ರಾಸಾಯನಿಕವೇ? ಅಲ್ಲ ಎನ್ನುತ್ತಾರೆ ಕೆಲವು ವಿಜ್ಞಾನಿಗಳು. ಇದು ಅಣ್ವಸ್ತ್ರಗಳಲ್ಲಿ ಬಳಸುವ ವಿಕಿರಣಕಾರಿ ವಸ್ತು. ಇವರಿಂದ ಚಿಕ್ಕಬಾಂಬುಗಳನ್ನು ಮಾಡುವ ತಂತ್ರಜ್ಞಾನ ಅಮೇರಿಕದಲ್ಲಿ ಪ್ರಕಟಿಸಿದ ಪುಸ್ತಕವೊಂದರಲ್ಲಿ ಬಹಿರಂಗವಾಗಿಯೇ ಸಿಗುತ್ತದೆ. ಸೋವಿಯೆತ್ ವಿಘಟನೆಯ ನಂತರ ಉಂಟಾಗಿರುವ ಅರಾಜಕತೆ, ಅಣು ಘಟಕಗಳ ಮುಚ್ಚುವಿಕೆಯಿಂದ ನಿರುದ್ಯೋಗಿಗಳಾಗಿದ್ದು 'ಜೀವನೋಪಾಯಕ್ಕಾಗಿ' ಅಣುವಿಕಿರಣ ವಸ್ತುಗಳನ್ನು ಮಾರಿಕೊಳ್ಳುತ್ತಿರುವುದು ಭಯೋತ್ಪಾದಕರಿಗೆ ಅನುಕೂಲಕರವಾಗಿದೆ. ಭಯೋತ್ಪಾದಕರಿಗೆ ಒಂದು ಕಡೆ ತಂತ್ರಜ್ಞಾನ, ಇನ್ನೊಂದು ಕಡೆ ಸುಲಭವಾಗಿ ದುರ್ಲಭ ವಸ್ತು ಸಿಗುತ್ತಿದ್ದು ಆರ್.ಡಿ.ಎಕ್ಸ್ ಹಲವು ಕಡೆ ಬಳಕೆಯಾಗಲಾರಂಭಿಸಿದೆ. ಕಾನೂನು ಹಾಗೂ ವ್ಯವಸ್ಥೆಗೆ ತಂತ್ರಜ್ಞಾನ ಪ್ರಸಾರದ ಬಗ್ಗೆ ಭಾರಿ ಕಾಳಜಿ ತೋರಿಸುವ ಏಕಮಾತ್ರ ಸೂಪರ್ ಪವರ್ ಅಮೇರಿಕಾನೇ ಆರ್.ಡಿ.ಎಕ್ಸ್ ಆತಂಕದ ಪ್ರಸಾರಕ್ಕೆ ನೇರ ಹಾಗೂ ಪರೋಕ್ಷ ಕಾರಣ.

1991ರಲ್ಲಿ ಕೊಲ್ಲಿಯುದ್ಧ ಒಂದು ಕಡೆ, ಸೋವಿಯೆತ್ ವಿಘಟನೆ ಇನ್ನೊಂದು ಕಡೆ ಶೀತ ಸಮರ ಮುಗಿಯಿತು. ಇನ್ನು ಜಗತ್ತಿನಲ್ಲಿ ಶಾಂತಿ ಆವರಿಸುತ್ತದೆ ಎಂದೆಲ್ಲಾ ಹೇಳಲಾಯಿತು. ಆದರೆ ಅಂದಿನಿಂದ ಇಂದಿನವರೆಗೆ ಜಗತ್ತು ಹಲವು ಜನಾಂಗೀಯ ಕಲಹಗಳ ರಣರಂಗವಾಗಿದೆ. ಭಯೋತ್ಪಾದನೆ ಹೆಚ್ಚಿ ಅದು ಸರ್ವೇಸಾಮಾನ್ಯ ಘಟನೆಯಾಗಿದೆ. 1993 ರಲ್ಲಿ ಸೆಪ್ಟೆಂಬರ್‌ವರೆಗೆ 75 ಭಾರಿ ತೀವ್ರ ಆತಂಕಕಾರಿ ಭಯೋತ್ಪಾದಕ ಘಟನೆಗಳಾಗಿವೆ. ಇದರಲ್ಲಿ 63 ಮೂರನೇ ಜಗತ್ತಿನಲ್ಲೇ ನಡೆದಿದೆ. ಆರ್.ಡಿ.ಎಕ್ಸ್ ಇತ್ತೀಚಿಗೆ ಹೆಚ್ಚಿನ ಆಸ್ಫೋಟಗಳಲ್ಲಿ ಉಪಯೋಗಿಸಲಾಗಿದೆ ಎನ್ನಲಾದ ವಿಶಿಷ್ಟ ವಸ್ತು.

ಮುಂಬಯಿ ಆಸ್ಫೋಟದ ಹಿನ್ನೆಲೆಯಲ್ಲಿ ಆರ್.ಡಿ.ಎಕ್ಸ್ ಮನೆ ಮಾತಾಗಿತ್ತು. ಆರ್.ಡಿ.ಎಕ್ಸ್ ಕೆಲವು ಪತ್ರಿಕೋದ್ಯಮಿಗಳು ಹೇಳುವಂತೆ ಪ್ಲಾಸ್ಟಿಕ್‌ನಂತೆ ಮಣಿಯಬಲ್ಲ ಸಾಮಾನ್ಯ ರಾಸಾಯನಿಕವಲ್ಲ. ಅದೊಂದು ಅಣು ವಿಕಿರಣಉಳ್ಳ ವಸ್ತು. ಮುಂಬಯಿ ಆಸ್ಫೋಟಗಳಾದ ಕೂಡಲೇ, ಲೂಯಿಸ್ ಕ್ರಿಪ್ಟನ್ ಎಂಬ ಅಮೇರಿಕನ್ ಪರಮಾಣು ವಿಜ್ಞಾನಿ ಅವಸರದ ಭೇಟಿ ನೀಡಿದ್ದನಂತೆ. ಆತ ವಾಪಸ್ ಹೋಗಿ ನ್ಯೂಯಾರ್ಕ್ ಟೈಮ್ಸ್‌ನಲ್ಲಿ ದೀರ್ಘ ಲೇಖನವೊಂದನ್ನು ಬರೆದಿದ್ದಾನಂತೆ. ಅದರಲ್ಲಿ ಅಣುವಿಕಿರಣ ಕಾರಿ ವಸ್ತುಗಳು ಭಯೋತ್ಪಾದಕರ ಕೈಗೆ ಸಿಕ್ಕುವ ಅಪಾಯದ ಬಗ್ಗೆ ಎಚ್ಚರಿಸಿದ್ದ. ಅದರಲ್ಲೂ ಆರ್.ಡಿ.ಎಕ್ಸ್ ಭಯೋತ್ಪಾದಕರ ಕೈಗೆ ಸಿಕ್ಕಿದರೆ ತೀವ್ರ ಅನಾಹುತಗಳಾಗುತ್ತವೆ ಎಂದಿದ್ದ.

ಕೆಲವು ದಿನಗಳ ನಂತರ ಅಣು ತಂತ್ರಜ್ಞಾನ ಭಯೋತ್ಪಾದಕರ ಕೈಗೆ ಸಿಕ್ಕಿರುವ ಸಾಧ್ಯತೆ ಬಗ್ಗೆ ಅಮೇರಿಕನ್ ವಾರಪತ್ರಿಕೆ ನ್ಯೂಸ್‌ವೀಕ್‌ನಲ್ಲೂ ಹಾಗೂ ಇತರ ಪತ್ರಿಕೆಗಳಲ್ಲೂ ಆತಂಕ ವ್ಯಕ್ತಪಡಿಸುವ ಲೇಖನಗಳು ಬಂದಿವೆ. ಅದರಲ್ಲೂ ಆರ್.ಡಿ.ಎಕ್ಸ್ ಬಗ್ಗೆ ವಿಶೇಷ ಆತಂಕ ವ್ಯಕ್ತಪಡಿಸಲಾಗುತ್ತಿದೆ. ಎಲ್ಲಾ ಲೇಖನಗಳಲ್ಲೂ ಸಮಾನವಾದ ಅಂಶವೆಂದರೆ ಭಯೋತ್ಪಾದಕರಿಗೆ ಆರ್.ಡಿ.ಎಕ್ಸ್‌ಗೆ ಬೇಕಾದ ಸಾಮಗ್ರಿ ಸಿಕ್ಕಿದ್ದು ಎಲ್ಲಿಂದ? ಇದರ ತಂತ್ರಜ್ಞಾನದಲ್ಲಿಪರಿಣತಿ ಎಲ್ಲಿಂದ ಬಂತು? ಇದಕ್ಕೆ ಉತ್ತರ ಹುಡುಕಲು ಹೋದರೆ ನಿಜಸಂಗತಿ ಬೆಚ್ಚಿಬೀಳಿಸುವಂತಹುದು.

'ಮನೆಯಲ್ಲೇ ಅಣುಬಾಂಬ್ ಮಾಡಿ' ಪುಸ್ತಕ

ಮೇಲೆ ಹೇಳಿದ ಲೂಯಿಸ್ ಕ್ರಿಪ್ಟನ್ ಕೆಲಸ ಮಾಡುತ್ತಿರುವ ಮ್ಯಾನ್ ಹಟ್ಟನ್ ಪ್ರಾಜೆಕ್ಟನ ಅಣು ತಂತ್ರಜ್ಞಾನದ ಬಗೆಗಿನ ಪ್ರಯೋಗಗಳ ವಿವರ ಕೊಡುವ ಪುಸ್ತಕವೊಂದು ಕೇವಲ 26 ಡಾಲರುಗಳಿಗೆ ಸಿಗುತ್ತದೆ. ಆ ಪುಸ್ತಕದ ಹೆಸರು 'ಲಾಸ್ ಆಲ್ಮೋಸ್ ಪ್ರೈಮರ್' ಇದರಲ್ಲಿ ಮನೆಯಲ್ಲಿ ಎಲ್ಲಾ ಪ್ರಮಾಣದ ಅಣು ಬಾಂಬ್ ತಯಾರಿಸುವ ಪ್ರಕ್ರಿಯೆಯನ್ನು ವಿವರವಾಗಿ ಕೊಡಲಾಗಿದೆ. ಈ ಪುಸ್ತಕವನ್ನು ಓದಿ ಅಲ್ಲಿ ಹೇಳಲಾದ ಸಾಮಗ್ರಿಗಳು ಲಭ್ಯವಿದ್ದರೆ, ಸ್ವಲ್ಪ ತಾಂತ್ರಿಕ ಪರಿಣತಿ ಇರುವ ಯಾರಾದರೂ ಇಂತಹ ಬಾಂಬ್‌ಗಳನ್ನು ತಯಾರಿಸಬಹುದು.

ಈ ಪುಸ್ತಕ ಪ್ರಕಟಿಸಿದವರ್‍ಯಾರು? ಯಾವಾಗ ಈ ಪುಸ್ತಕ ಪ್ರಕಟವಾಯಿತು.? ಎಂದು ಹುಡುಕಲು ಹೋದರೆ ಇನ್ನೂ ಆಶ್ಚರ್ಯಕಾರಿ ನಿಜಸಂಗತಿ ಬಯಲಾಗುತ್ತವೆ. ಪುಸ್ತಕ ಪ್ರಕಟಿಸಿದ್ದು ಯಾರು ಎಂದು ನಿಖರವಾಗಿ ಹೇಳಲಾಗದಿದ್ದರೂ, ಇದು ಅಮೇರಿಕದ ಐದು ದಶಕಗಳ ಅಣು ತಂತ್ರಜ್ಞಾನದ ಬಗೆಗಿನ ಪ್ರಾಜೆಕ್ಟ್ ಆದ ಮ್ಯಾನ್ ಹಟ್ಟನ್ ಪ್ರಾಜೆಕ್ಟ್‌ನಲ್ಲಿ ನಡೆಸಿದ ಪ್ರಯೋಗಗಳ ಆಧಾರದ ಮೇಲೆ ಬರೆದಿದ್ದು ಈ ಪುಸ್ತಕ ಎಂದು ಹೇಳಲಾಗಿದೆ. ಆರ್.ಡಿ.ಎಕ್ಸ್, ಆಸ್ಫೋಟಗಳು ಮನೆ ಮಾತಾಗುತ್ತಿದ್ದಂತೆ ತರಾತುರಿಯಲ್ಲಿ ಈ ಪುಸ್ತಕ ಮಾರುಕಟ್ಟೆಯಿಂದ ಮಾಯವಾಯಿತಂತೆ. ಇದರಲ್ಲಿ ಕೊಡಲಾಗಿರುವ ಅತ್ಯಂತ ಗುಪ್ತವೆಂದು ಹೇಳಲಾದ ವಿವರಗಳನ್ನು ನೋಡಿದರೆ ಮ್ಯಾನ್ ಹಟ್ಟನ್ ಪ್ರಾಜೆಕ್ಟ್‌ನಲ್ಲಿ ಕೆಲಸ ಮಾಡುವವರ 'ಅಸ್ತು' ಇಲ್ಲದೆ ಇದು ಸಾಧ್ಯವಿಲ್ಲ.

ಈ ಪುಸ್ತಕದ ಪ್ರಕಾಶನ ಮಾಡಿದ ಸಂದರ್ಭ ಇನ್ನೂ ಕುತೂಹಲಕಾರಿಯಾದದ್ದು. ಸೋವಿಯೆತ್ ವಿಘಟನೆಯ ನಂತರ 1992 ರ ಜೂನ್ 12, ರಂದು ಮಾಜಿ ಸೋವಿಯೆತ್ ಒಕ್ಕೂಟದ ಹಲವಾರು ಹಳೆ ಅಣ್ವಸ್ತ್ರಗಳನ್ನು ನಾಶ ಮಾಡುವ ಒಪ್ಪಂದವಾಯಿತು. ಇದರ ಒಂದುವರೆ ತಿಂಗಳೊಳಗೆ ಈ ಪುಸ್ತಕ ಪ್ರಕಟವಾಗಿದೆ.

ಯುರೇನಿಯಂ ಕಳ್ಳ ಸಾಗಾಣಿಕೆ

ಈವರೆಗೆ ಅಣು ತಂತ್ರಜ್ಞಾನ ಸಣ್ಣ ಭಯೋತ್ಪಾದಕರ ಗುಂಪುಗಳಿಗೆ ಲಭ್ಯವಿಲ್ಲದಕ್ಕೆ ಮುಖ್ಯ ಕಾರಣ- ಇದರಲ್ಲಿ ಬಳಕೆಯಾಗುವ ಸಾಮಗ್ರಿಗಳು ಸಂಸ್ಕರಿಸಿದ ಯುರೇನಿಯಂ ಹಾಗೂ ಪ್ಲುಟೋನಿಯಂ ದುರ್ಲಭ ಹಾಗೂ ಇದನ್ನು ತಯಾರಿಸಲು ತಗಲುವ ಭಾರಿ ವೆಚ್ಚ. ಈ ಸಾಮಗ್ರಿಗಳು ಅತ್ಯಂತ ಗುಪ್ತ ರೀತಿಯಲ್ಲಿ ತಯಾರಿಸಲಾಗುವುವು. ಮೇಲೆ ಹೇಳಿದ ಒಪ್ಪಂದದ ಜಾರಿಯಾಗುವ ಸಂದರ್ಭದಲ್ಲಿ ಮಾಜಿ ಸೋವಿಯೆತ್ ಒಕ್ಕೂಟದ ಗಣರಾಜ್ಯಗಳಲ್ಲಿ 2,000 ಅಣ್ವಸ್ತ್ರಗಳನ್ನು ನಾಶಮಾಡಬೇಕಾಗಿತ್ತು. ಇದರಿಂದ ಆರು ಟನ್ನು ಪ್ಲುಟೋನಿಯಂ ಹಾಗೂ 30 ಟನ್ನು ಯುರೇನಿಯಂ ಸಾಮಗ್ರಿ ದೊರೆಯುತ್ತದೆ. ಇದನ್ನು ಸುರಕ್ಷಿತವಾಗಿ ಶೇಖರಣೆ ಮಾಡುವುದು ಸಾಮಾನ್ಯವಾಗಿ ಅತ್ಯಂತ ಕಷ್ಟಕಾರಿ ಕೆಲಸ.

ಮಾಜಿ ಸೋವಿಯೆತ್ ಗಣರಾಜ್ಯಗಳ ವಿಘಟನೆ, ಅರಾಜಕತೆ, ಆರ್ಥಿಕ ಬಿಕ್ಕಟ್ಟಿನ ಸಂದರ್ಭದಲ್ಲಂತೂ ಇನ್ನು ಕಷ್ಟಸಾಧ್ಯ ಕೆಲಸ. ಇತಹ ಅಣುಸ್ಥಾವರಗಳಲ್ಲಿ ಕೆಲಸ ಮಾಡುವ ಸಾವಿರಾರು ಉದ್ಯೋಗಿಗಳನ್ನು ಕೆಲಸದಿಂದ ವಜಾ ಮಾಡಲಾಗಿದೆ. ಇಂತಹ ಉದ್ಯೋಗಿಗಳು ಹಸಿವು ಬಡತನದಿಂದ ನರಳುತ್ತಿರುವಾಗ ಸಣ್ಣ ಪ್ರಮಾಣದಲ್ಲಿ ಯುರೇನಿಯಂ ಪ್ಲುಟೋನಿಯಂ ಮಾರಿಕೊಂಡಿದ್ದರೆ ಆಶ್ಚರ್ಯವಿಲ್ಲ.

ಇದು ಬರಿಯ ಊಹೆ ಅಲ್ಲ. ಹಲವಾರು ಇಂತಹ ಘಟನೆಗಳು ಬೆಳಕಿಗೆ ಬಂದಿವೆ. ಇಬ್ಬರು ರಶ್ಯನರು ಹಾಗೂ ಒಬ್ಬ ಬೈಲೋರಶ್ಯನ್ ಸುಮಾರು ಐದೂವರೆ ಪೌಂಡು (ಸುಮಾರು ಐದು ಲಕ್ಷ ಬೆಲೆಬಾಳುವ) ಯುರೋನಿಯಂ ಅನ್ನು ಪೋಲೆಂಡ್‌ನಲ್ಲಿ ಮಾರುತ್ತಿದ್ದಾಗ ಸಿಕ್ಕಿಬಿದ್ದರು. ಅವರು ಯುರೇನಿಯಂ ಅನ್ನು ರಶ್ಯದ ಅಣುಸ್ಥಾವರವೊಂದರಲ್ಲಿ ಕದ್ದು ಸೀಸದ ಪಾತ್ರೆಯಲ್ಲಿ ತುಂಬಿಸಿ ಸುಮಾರು 1,200 ಮೈಲು ದೂರ ಆಗಲೇ ಬಂದಿದ್ದರು. ಜರ್ಮನಿಯೊಂದರಲ್ಲೇ ಇಂತಹ ನೂರು ಗುಂಪುಗಳು ಕಳ್ಳತನದಿಂದ ಯುರೇನಿಯಂ, ಪ್ಲುಟೋನಿಯಂ ಮಾರುವಾಗ ಸಿಕ್ಕಿಬಿದ್ದಿದ್ದಾರೆ. ಇನ್ನೂ ಯಾರ ಕೈಗೂ ಸಿಕ್ಕಿಬೀಳದೆ ಎಷ್ಟು ಇಂತಹ ಮಾರಾಟ ನಡೆದಿದೆಯೋ?


ಅಮೇರಿಕ ಜವಾಬ್ದಾರಿ

ಇದನ್ನು ಕೊಂಡುಕೊಳ್ಳುತ್ತಿರುವ ಭಯೋತ್ಪಾದಕ ಗುಂಪುಗಳು ಈ ತಂತ್ರಜ್ಞಾನ ಮಾಹಿತಿ ಪಡೆದದ್ದು ಈಗಾಗಲೇ ಹೇಳಿರುವ 'ಲಾಸ್ ಆಲ್ಮೋಸ್ ಪ್ರೈಮರ್'ನಿಂದ. ಆಸ್ಟ್ರಿಯಾದ ವಿಯೆನ್ನಾದಲ್ಲಿರುವ ಅಂತರಾಷ್ಟ್ರೀಯ ಅಣುಶಕ್ತಿ ಏಜನ್ಸಿಯ ವಿಜ್ಞಾನಿ ಡೇವಿಡ್ ಕಿಟ್‌ಶರ್‌ರವರ ಪ್ರಕಾರ ಭೌತ ವಿಜ್ಞಾನಿಗಳು ಹಾಗೂ ಇಂಜನೀಯರ್‌ಗಳ ಬೆಂಬಲವಿಲ್ಲದೆ ಆರ್.ಡಿ.ಎಕ್ಸ್ ಬಾಂಬುಗಳನ್ನು ಮಾಡುವುದು ಕಷ್ಟ. ಆರ್.ಡಿ.ಎಕ್ಸನ್ನು ಬಳಸುವಲ್ಲಿ ಭಯೋತ್ಪಾದಕ ಗುಪುಗಳ ಉದ್ದೇಶ ಬಹುಮಹಡಿ ಕಟ್ಟಡಗಳನ್ನು ಕ್ಷಣಾರ್ಧದಲ್ಲಿ ನಾಶಮಾಡುವುದು ಅಥವಾ ಸೀಮಿತ ಕ್ಷೇತ್ರದಲ್ಲಿ ಆಸ್ತಿ ಪಾಸ್ತಿ, ಪ್ರಾಣ ಹಾನಿ ಮಾಡುವುದು. ಅದಕ್ಕೆ ತಕ್ಕ ಆರ್.ಡಿ.ಎಕ್ಸ್ ತಂತ್ರಜ್ಞಾನ ಹಲವಾರು ಗುಂಪುಗಳ ಬಳಿ ಈಗಾಗಲೇ ಇದೆ ಎಂಬುದು ಈಗ ಅತ್ಯಂತ ಬೆಚ್ಚಿ ಬೀಳಿಸುವಂತಹದು. ಇಂತಹ ಗುಂಪುಗಳು ಇತರ ಗುಂಪುಗಳಿಗೆ ಈ 'ಪರಿಣತಿ'ಯನ್ನು ಮಾರುವುದು ಸರ್ವೇಸಾಮಾನ್ಯ.

ಈ ಭಯೋತ್ಪಾದಕ ಗುಂಪುಗಳನ್ನು ತಡೆಯುವುದು ಹೇಗೆ? ಎಂಬುದು ಈಗ ಜಗತ್ತಿನ ಮುಂದಿರುವ ದೊಡ್ಡ ಸಮಸ್ಯೆ. ಅಣುತಂತ್ರಜ್ಞಾನದ ಪ್ರಸಾರದ ಬಗ್ಗೆ ಭಾರಿ ಕಾಳಜಿ ಪ್ರದರ್ಶಿಸುವ ತನ್ನ ಎಲ್ಲ ಸಂಪನ್ಮೂಲಗಳನ್ನು ಬಳಸುವ ಅಮೇರಿಕಕ್ಕೆ (ಇತ್ತೀಚೆಗೆ ಚೀನಾ ಇರಾನ್‌ಗೆ ಮಾರಿದ್ದು ರಾಸಾಯನಿಕ ಅಸ್ತ್ರಗಳಿಗೆ ಬೇಕಾಗುವ ರಾಸಾಯನಿಕಗಳು ಎಂದು ಅಮೇರಿಕ ಉಪಗ್ರಹ ಫೋಟೋಗಳ ಆಧಾರದ ಮೇಲೆ ಆಪಾದಿಸಿತ್ತು. ಆದರೆ ಅದು ಆಮೇಲೆ ತಪ್ಪು ಎಂದು ಸಾಬೀತಾಯಿತು) ಆರ್.ಡಿ.ಎಕ್ಸ್ ಈ ಪ್ರಮಾಣದಲ್ಲಿ ಭಯೋತ್ಪಾದಕರ ಕೈಗೆ ಸಿಗುತ್ತಿರುವ ಬಗ್ಗೆ ಗೊತ್ತಾಗದ್ದು ಹೇಗೆ? ಇದು ನಿರ್ಲಕ್ಷವೋ ಅಥವಾ ಅಮೇರಿಕನ್ ಬೇಹುಗಾರಿಕೆ ಸಂಸ್ಥೆಗಳೇ ಇದರ ಹಿಂದೆ ಇವೆಯೋ? ಅದು ಏನೇ ಇರಲಿ ಮೇಲೆ ವಿವರಿಸಿದಂತೆ ಮ್ಯಾನ್ ಹಟ್ಟನ್ ಪ್ರಾಜೆಕ್ಟನ ವಿವರಗಳು ಪುಸ್ತಕರೂಪದಲ್ಲಿ ಪ್ರಕಟವಾಗುವ ಮೂಲಕ ಮಾಜಿ ಸೋವಿಯೆತ್ ಅಣ್ವಸ್ತ್ರಗಳ ನಾಶದ ಬಗ್ಗೆ ಒತ್ತಡ ಹಾಕುವ ಮೂಲಕ ಹಾಗೂ ಅಲ್ಲಿ ಅರಾಜಕತೆಗೆ ಕುಮ್ಮಕ್ಕು ಕೊಡುವ ಮೂಲಕ ಅಮೇರಿಕವೇ ಇದಕ್ಕೆ ನೇರ ಜವಾಬ್ದಾರಿ.

ಇತಿಹಾಸ ಪುಟಗಳಿಂದ

ಚೂಟೇ



ವಿಶ್ವ ಕಮ್ಯೂನಿಸ್ಟ್ ಮುಖಂಡರೊಡನೆ **4**

ಕಾಂ. ಇ.ಎಂ.ಎಸ್.

ನನ್ನ ಮೊಟ್ಟಮೊದಲ ವಿದೇಶೀ ಯಾತ್ರೆ 1956 ರ ಸೆಪ್ಟೆಂಬರ್‌ನಲ್ಲಿ ಚೀನಾ ಕಮ್ಯುನಿಸ್ಟ್ ಪಕ್ಷದ 8ನೇ ಅಧಿವೇಶನದಲ್ಲಿ ಭಾಗವಹಿಸುವುದರ ಮೂಲಕ ಆಯಿತು. ಭಾರತ ಕಮ್ಯುನಿಸ್ಟ್ ಪಕ್ಷದ ಸೌಹಾರ್ದ ಪ್ರತಿನಿಧಿಗಳ ನಾಯಕನಾಗಿ ನಾನು ಮತ್ತು ಪಿ.ಸಿ. ಜೋಷಿ ಹಾಗೂ ಸುಂದರಯ್ಯ ಇವರುಗಳು ಅಧಿವೇಶನಕ್ಕೆ ಹೋಗಿದ್ದೆವು.

ಕಲ್ಕತ್ತದಿಂದ ಹಾಂಕಾಂಗ್‌ಗೆ ವಿಮಾನದ ಮೂಲಕ ಹೊರಟು ಅಲ್ಲಿಂದ ರೈಲಿನಲ್ಲಿ ಕಂಡ್ರಿಂಗ್ (ಗೋವಾಂಗ್ ಚಾಂಗ್) ಗೆ ನಾವು ತಲುಪಿದೆವು. ಆ ನಗರದಲ್ಲಿ ಅರ್ಧ ದಿನ ಹಾಗೂ ಒಂದು ರಾತ್ರಿ ವಿಶ್ರಾಂತಿ ಪಡೆದು ಅಲ್ಲಿಂದ ವಿಮಾನದಲ್ಲಿ ಬೀಜಿಂಗ್ ಹೋದೆವು.

ಬೀಜಿಂಗ್ ನಗರ ಪ್ರವೇಶಿಸುತ್ತಿದ್ದಂತೆ ನಮಗೆ ದೊಡ್ಡ ರೀತಿಯಲ್ಲಿ ಸ್ವಾಗತ ದೊರೆಯಲಿದೆ ಎಂದು ನಮ್ಮ ಜೊತೆ ಇದ್ದಂತ ಚೀನೀ ಸಂಗಾತಿಯೊಬ್ಬರು ತಿಳಿಸಿದರು. ಆದರೆ, ಆಗ ಆ ಮಾತಿಗೆ ನಾವು ಅಷ್ಟೊಂದು ಪ್ರಾಮುಖ್ಯತೆ ನೀಡಲಿಲ್ಲ.



ಬೀಜಿಂಗ್‌ನಲ್ಲಿ ಕಾಲಿಟ್ಟೊಡನೆ ನಾವು ನಿಬ್ಬೆರಗಾಗುವ ರೀತಿಯಲ್ಲಿ ದೊರೆತ ಸ್ವಾಗತ ಕಂಡು ಸಂತೋಷ ಮತ್ತು ಆಶ್ಚರ್ಯಗಳೆರಡನ್ನೂ ಉಂಟುಮಾಡಿದವು. ಭಾರತ ಮತ್ತು ಶ್ರೀಲಂಕಾ ದೇಶದ ಪ್ರತಿನಿಧಿಗಳನ್ನು ಸ್ವಾಗತಿಸಲು ಚೀನೀ ಕಮ್ಯುನಿಸ್ಟ್ ಪಕ್ಷದ ಉನ್ನತ ಮಟ್ಟದ ಮುಖಂಡರಿಬ್ಬರು ಬಂದಿದ್ದರು.

ಒಬ್ಬರು ಚೂಟೇ ಮತ್ತೊಬ್ಬರು ಲಿಯೋಷಾವೊಕಿ. ಈ ಇಬ್ಬರ ಬಗ್ಗೆಯೂ ನನಗೆ ಓದಿ ಪರಿಚಯವಿತ್ತು. ಪಕ್ಕಾ ಪಾಳೇಗಾರಿ ಕುಟುಂಬದಲ್ಲಿ ಹುಟ್ಟಿ ಜರ್ಮನಿಯಲ್ಲಿ ವಿದ್ಯಾಭ್ಯಾಸ ಮಾಡಿ ನಂತರ ಚೀನಾದ ಮಿಲಿಟರಿಯಲ್ಲಿ ಉನ್ನತ ಉದ್ಯೋಗಕ್ಕೆ ಸೇರಿದವರು ಚೂಟೇ. ಪಾಳೆಯಗಾರಿ ಕುಟುಂಬದಲ್ಲಿ ಹುಟ್ಟಿದರು ಎಂಬ ಪ್ರತೀತಿಯಿರುವ ಚೂಟೇ ಹುಟ್ಟಿದ್ದು ಒಂದು ಸಾಮಾನ್ಯ ರೈತ ಕುಟುಂಬದಲ್ಲಿ ಎಂದು ಅವರ ಜೀವನ ಚರಿತ್ರೆ "ದಿ ಲಾಂಗ್ ರೋಡ್ ದೈ ಆಗ್ನೆಸ್ ಸ್ಮೆಡ್ಲೆ" ಹೇಳುತ್ತದೆ. ಅವರು ನಿರೂಪಿಸಿದಂತೆ ಅವರ ಜೀವನ ಚರಿತ್ರೆಯನ್ನು ಆಗ್ನೇಸ್ ಸ್ಮೆಡ್ಲೆ ಬರೆದಿದ್ದಾರೆ. -ಸಂ. ಅವರನ್ನು ಚೀನಾ ಭಾಷೆಯಲ್ಲಿ "ಜೂತ್" ಎನ್ನುವರೆಂದು ನಂತರ ತಿಳಿಯಿತು.

ಚೀನಾದಲ್ಲಿ ಪ್ರಜಾಪ್ರಭುತ್ವ ಚಳುವಳಿಯು ಬೆಳೆದು ಬರುವ ಸಂದರ್ಭದಲ್ಲಿ ಕ್ರಾಂತಿಕಾರಿ ಚಳುವಳಿಗೆ ಇವರು ಸೇರಿದವರು. ಇವರ ಜೊತೆ ಮಿಲಿಟರಿಯಲ್ಲಿದ್ದ ಹಲವರು ತಮ್ಮ ಕೆಲಸ ತೊರೆದು ಕ್ರಾಂತಿಕಾರಿ ಚಳುವಳಿಗೆ ಸೇರಿದರು. ಇವರು ಮುಂದೆ ಕ್ರಾಂತಿಕಾರಿ ಚಳುವಳಿಯ ಮುಖ್ಯ ಸಂಘಟಕರಲ್ಲೊಬ್ಬರಾದರು. ಆದ್ದರಿಂದಲೇ ಇವರು ಚೈನಾ ಕಮ್ಯುನಿಸ್ಟ್ ಪಕ್ಷದ ಸಂಸ್ಥಾಪಕ ಮುಖಂಡರಲ್ಲೊಬ್ಬರು .

ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ಕೃಷಿಕ ಕ್ರಾಂತಿಯು ನಡೆಯುತ್ತಿದ್ದಂತಹ ಸಂದರ್ಭದಲ್ಲಿ ಅದರ ಮುಂಚೂಣಿಯಲ್ಲಿದ್ದ ಸಶಸ್ತ್ರ ಸೈನಿಕರ ನೇತೃತ್ವವನ್ನು ಚೂಟಿ ವಹಿಸಿದ್ದರು. 1920 ರ ಕೊನೆಯ ಹೊತ್ತಿಗೆ ಹಲವಾರು ಪ್ರಾಂತ್ಯಗಳ ಅಧಿಪತ್ಯವನ್ನು ಪಡೆದ ಕಮ್ಯುನಿಸ್ಟ್ ಪಕ್ಷ ದೊಡ್ಡ ಭೂಮಾಲಕರ ಭೂಮಿಯನ್ನು ಭೂರಹಿತರಿಗೆ ಹಂಚಿತು. ಈ ಸಂದರ್ಭದಲ್ಲಿ ಚಿಯಾಂಗ್ ಕೈಷೇಕ್‌ನು ಚೀನಾದ ಅಧಿಕೃತ ಸೈನ್ಯವನ್ನು ಆ ಪ್ರಾಂತ್ಯಗಳಿಗೆ ಕಳುಹಿಸಿದನು. ಈ ಅಧಿಕೃತ ಸೈನ್ಯವನ್ನು ಸೋಲಿಸಿದ ಚೂಟಿ ನೇತೃತ್ವದ ಸೈನ್ಯವು ಆ ಪ್ರದೇಶಗಳನ್ನೆಲ್ಲಾ ಸೇರಿಸಿ ಒಂದು ಕೇಂದ್ರೀಕೃತ ಸರ್ಕಾರ ರಚಿಸಬೇಕಾಯ್ತು. ಚೂಟಿಯೇ ಇದಕ್ಕೆ ಸರ್ವ ಸೇನಾಧಿಪತಿಯಾಗಿದ್ದರು.

ಸಶಸ್ತ್ರ ಪಡೆಯ ಸೇನಾಧಿಪತಿಯಾಗಿದ್ದರೂ ಸಹ ರಾಜಕೀಯ ಚಿಂತಕರು, ಮುತ್ಸದ್ದಿಗಳು ಆಗಿದ್ದ ಚೂಟಿ ಮಹಾನ್ ಮಾರ್ಕ್ಸ್‌ವಾದಿಯಾಗಿದ್ದರು. ರಾಜಕೀಯ ಮುತ್ಸದ್ದಿಗಳು, ಮಾರ್ಕ್ಸ್‌ವಾದಿ ಚಿಂತಕರೆಂದು ಹೆಸರು ಪಡೆದಿದ್ದ ಮಾವ್ಹೋ-ತ್ಸೆ- ತುಂಗ್, ಚೌ-ಎನ್-ಲಾಯ್, ಲಿಯೋ ಷೌಕಿ, ಡೆಂಗ್ ಕ್ಸಿಯೋಪಿಂಗ್ ಇವರುಗಳು ಮಿಲಿಟರಿಯಲ್ಲಿ ತಾತ್ವಿಕವಾದ ಮತ್ತು ಪ್ರಾಯೋಗಿಕವಾದ ಪ್ರಶ್ನೆಗಳ ಕುರಿತು ಕೆಲಸ ಮಾಡಿದ್ದರು. ತಾತ್ವಿಕ, ರಾಜಕೀಯ, ಮಿಲಟರಿ ಈ ಮೂರು ಶಾಖೆಗಳ ಸಂಬಂದವು ಕ್ರಾಂತಿಯ ನಂತರ ಚೈನಾದಲ್ಲಿ ಪಕ್ಷದ ಕಾರ್ಯದರ್ಶಿ, ರಾಷ್ಟ್ರಾಧ್ಯಕ್ಷರು ಮತ್ತು ಸೇನಾದಂಡನಾಯಕ ಈ ಮೂರು ಖಾತೆಗಳನ್ನೂ ಒಬ್ಬರೆ ನಿರ್ವಹಿಸಿಕೊಂಡು ಬರಬಹುದಾಗಿತ್ತು. (ಇವತ್ತು ಈ ಕೆಲಸವನ್ನು ಜಿಯೋಝುಮಿನ್ ನಿರ್ವಹಿಸುತ್ತಿದ್ದಾರೆ)

ಚೈನಾದ ಪಕ್ಷದ ಅಂತಸ್ಥಿನಲ್ಲಿ ಇಂತಹ ಉನ್ನತ ಸ್ಥಾನವನ್ನು ಹೊಂದಿದ್ದ ಚೂಟಿ ನಮ್ಮನ್ನು ಸ್ವಾಗತಿಸಲು ಬಂದಿದ್ದರು. ಅಷ್ಟು ಮಾತ್ರವಲ್ಲ ಬೀಳ್ಕೊಡುವ ಸಂದರ್ಭದಲ್ಲೂ ಬಂದಿದ್ದರು. ಬೇರೊಂದು ರಾಷ್ಟ್ರದ ನಾಯಕರೊಬ್ಬರು ಬಂದಾಗ ಅವರನ್ನು ಸ್ವಾಗತಿಸಲು ಚೀನಾದ ಉನ್ನತ ಮಟ್ಟದ ನಾಯಕರೊಬ್ಬರು ಇರಬೇಕೆಂಬುದು ಅಲ್ಲಿನ ಸಂಪ್ರದಾಯ. ಈ ಲೆಕ್ಕದಲ್ಲೇ ಭಾರತದ ನಿಯೋಗವನ್ನು ಸ್ವಾಗತಿಸಲು ಚೂಟಿ ಸ್ವತಃ ಬಂದಿದ್ದರು. ಅದೇ ರೀತಿ ಶ್ರೀಲಂಕಾದಿಂದ ಬಂದಿದ್ದ ನಿಯೋಗವನ್ನು ಸ್ವಾಗತಿಸಲು ಲಿಯೋಷೌಕಿ ಬಂದಿದ್ದರು.

ಈ ಇಬ್ಬರು ಮಹಾನ್ ನಾಯಕರಲ್ಲಿ ಲಿಯೋಷಾವೊಕಿ ಬಗ್ಗೆ ಮುಂದಿನ ಲೇಖನದಲ್ಲಿ ಬರೆಯುತ್ತೇನೆ. ಇವರ ಜೊತೆ ನಾನು ನೇರವಾಗಿ ಚರ್ಚೆ, ಮಾತುಕತೆ ನಡೆಸುವ ಅವಕಾಶ ಅಥವಾ ಸಂದರ್ಭ ಒದಗಲಿಲ್ಲ. ನಂತರದ ನನ್ನ ಚೈನಾ ಸಂದರ್ಶನ ಸಂದರ್ಭಗಳಲ್ಲೂ ಅವರ ಜೊತೆ ಚರ್ಚಿಸುವ ಅವಕಾಶ ದೊರೆಯಲಿಲ್ಲ. ನಾನು ಭಾಗವಹಿಸಿದ ಅಂತರ್‍ರಾಷ್ಟ್ರೀಯ ಸಮ್ಮೇಳನಗಳಲ್ಲೂ ಇವರು ಯಾವ ಸಮಯದಲ್ಲೂ ಪ್ರತಿನಿಧಿಯಾಗಿರಲಿಲ್ಲ. ಸ್ವಾಗತಿಸುವ ಅಥವಾ ಬೀಳ್ಕೊಡುವ ಸಂದರ್ಭಗಳಲ್ಲಿನ ವ್ಯವಹಾರಿಕ ಮಾತುಕತೆಗಳನ್ನು ಬಿಟ್ಟರೆ ಬೇರೆ ರೀತಿಯ ಅವಕಾಶ ಸಿಗಲಿಲ್ಲ.

ವ್ಯಕ್ತಿಗತವಾಗಿ ಅಷ್ಟೊಂದು ಸಂಬಂಧವಿಲ್ಲದಿದ್ದರೂ ಹಲವಾರು ಪ್ರಮುಖ ಕಮ್ಯುನಿಸ್ಟರಂತೆ ಇವರೂ ನನಗೆ ಬಲ್ಲವರು. ಸೋವಿಯತ್ ಕ್ರಾಂತಿಯ ಅನುಭವವನ್ನು ಕ್ರೋಢೀಕರಿಸಿ, ತಮ್ಮ ಸ್ವಂತ ರಾಷ್ಟ್ರದ ವಾಸ್ತವ ಪರಿಸ್ಥಿತಿಗನುಗುಣವಾಗಿ ಗ್ರಾಮಾಂತರ ಪ್ರದೇಶದ ಬಡ ರೈತರನ್ನೂ ಕ್ರಾಂತಿಕಾರಿ ನೆಲೆಯಲ್ಲಿ ಸಂಘಟಿಸಿ ಪಟ್ಟಣ ಪ್ರದೇಶದ ಕಾರ್ಮಿಕರ ಜೊತೆ ಸಖ್ಯತೆಯನ್ನು ಬೆಳೆಸಬೇಕೆಂಬ ಲೆನಿನ್‌ರವರ ನಿರ್ದೇಶನದ ಮಾರ್ಗದಲ್ಲಿ ಪ್ರಾಯೋಗಿಕವಾಗಿ ಕ್ರಾಂತಿ ಮಾಡಿದ ಮೊಟ್ಟ ಮೊದಲ ಏಷಿಯಾದ ರಾಷ್ಟ್ರವಾದ ಚೈನಾದಲ್ಲಿ, ಆ ಪ್ರಾಯೋಗಿಕ ಕೆಲಸಕ್ಕೆ ನೇತೃತ್ವ ಕೊಟ್ಟ ಸಂಗಾತಿಯಾದ ಹಾಗೂ ಪ್ರಪಂಚದಲ್ಲೇ ಹೆಸರುವಾಸಿಯಾದ ಚೂಟಿ ನನ್ನಂತಹವರಿಗೆ ಆದರಣೀಯವಾಗಿದ್ದರು. ಇಂತಹ ಪ್ರಾಯೋಗಿಕ ಅನುಭವವನ್ನು ತಾತ್ವಿಕವಾಗಿ ರೂಪಿಸಲು ಮಾವ್ಹೋ, ಲಿಯೋಷಾವೊಕಿ ಯಂತಹವರಿಗೆ ಚೂಟೇಯವರು ಕಾರಣರಾಗಿದ್ದಾರೆ.

ಇಂತಹವರು ಔಪಚಾರಿಕ ಆತಿಥ್ಯದಲ್ಲಿ ಮೂರು ವಾರಗಳ ಕಾಲ ನಾನಿದ್ದೆ ಎಂಬುದನ್ನು ನೆನೆಸಿಕೊಂಡಾಗ ತೃಪ್ತನಾಂದಂತೆನಿಸುತ್ತದೆ.

ಸಂಗ್ರಹ - ಭಾಷಾನುವಾದ
ಇ.ಕೆ.ಎನ್. ರಾಜನ್, ಪ್ರಕಾಶ್.ಕೆ

ರಾಯಚೂರು ಜಿಲ್ಲೆಯಲ್ಲಿ ಪ್ರಕೃತಿಯ ಮುನಿಸು; ಆಡಳಿತ ಯಂತ್ರದ ನಿರ್ಲಕ್ಷ್ಯ

ಅಕ್ಟೋಬರ್ 8 ರಿಂದ 11ರವರೆಗೆ ನಿರಂತರವಾಗಿ ಸುರಿದ ಮಳೆಯಿಂದಾಗಿ ರಾಯಚೂರು ಜಿಲ್ಲೆಯಲ್ಲಿ ಜನಸಾಮಾನ್ಯರ ಜೀವನ ಅಸ್ತವ್ಯಸ್ತಗೊಂಡಿತು. ಪ್ರಕೃತಿಯ ಮುನಿಸಿಗೆ ಹೆಚ್ಚು ತೊಂದರೆಗೊಳಗಾದ ಪ್ರದೇಶಗಳೆಂದರೆ ಮಾವಿನ ಕೆರೆ, ರಾಮದುರ್ಗ, ಗುಂಜಳ್ಳಿ, ಸಂಕೇಶರಾಳ, ಸುಲ್ತಾನಪುರ, ಉಪ್ಪಾಳ, ಗೋಡಿಹಾಳ, ಕೊರ್ತಕುಂದ, ಗೋವಿನ ಪಲ್ಲಿ, ಹೆಗಸನ ಹಳ್ಳಿ. ಹಿಂದೆ ಮಳೆಬಾರದೆ ರೈತರು ಆಕಾಶಕ್ಕೆ ಮುಖಹಾಕಿ ಮಳೆಗಾಗಿ ಕಾಯುತ್ತಿದ್ದ, ಮಳೆ ಬರದೆ ಬರಗಾಲವನ್ನು ಎದುರಿಸುತ್ತಿದ್ದಂತಹ ಹಳ್ಳಿಗಳು ಈಗ ಅತಿವೃಷ್ಟಿಯಿಂದಾಗಿ ಮನೆಗಳೆಲ್ಲ ಜಲಾವೃತ್ತಗೊಂಡು ಎಲ್ಲಾ ನಾಗರೀಕ ಸಂಪರ್ಕ ಕಡಿದುಕೊಂಡಿತು. ಅಲ್ಪಸ್ವಲ್ಪ ದವಸಧಾನ್ಯಗಳನ್ನು ಇಟ್ಟುಕೊಂಡು ಮುಂದಿನ ಜೀವನವನ್ನು ಇರುವುದರಲ್ಲಿಯೇ ಕಾಲ ಕಳೆಯದೇಕಾದಂತಹ ರೈತ ಕೂಲಿಕಾರರು ಇಂದು ಅವೆಲ್ಲವನ್ನು ಕಳೆದುಕೊಂಡು ಮುಂದಿನ ಜೀವನದ ಬಗ್ಗೆ ಚಿಂತಾಕ್ರಾಂತರಾಗಿ ಹಸಿದ ಹೊಟ್ಟೆಗಳ ಕುಣಿತಕ್ಕೆ ಬೆರಗಾಗಿ ಕಣ್‌ಕಣ್ ಬಿಡುತ್ತಿದ್ದಾರೆ. ಅವರಿಗೆ ಸಹಾಯ ಹಸ್ತ ನೀಡಬೇಕಿದ್ದ ಆಡಳಿತ ಯಂತ್ರ ತನ್ನ ಎಂದಿನ ನಿರ್ಲಕ್ಷ್ಯವನ್ನು ತೋರಿ ಜನರ ಗೋಳಿನ ದನಿಗೆ ಮತ್ತಷ್ಟು ನೋವು, ಸಿಟ್ಟಿನ ದನಿಯನ್ನು ಸೇರಿಸುತ್ತಿದ್ದಾರೆ.

ದೇಶಪಾಂಡೆಯವರು ಹಗೇವುಗಳನ್ನು, ಜೋಳವನ್ನು ವೀಕ್ಷಿಸುತ್ತಿರುವಾಗ ಒಂದು ಹಗೇವಿನಲ್ಲಿ ಮೂರ್‍ನಾಲ್ಕು ಸಣ್ಣ ರೈತರ ಕುಟುಂಬಗಳು ಜಂಟಿಯಾಗಿ ತಮ್ಮ ಜೋಳ ಹಾಕಿದ್ದನ್ನು ವಿವರಿಸಿ, ಈಗ ಅವನ್ನು ಕಳೆಕೊಂಡು ತಿನ್ನಲಿಕ್ಕೂ ಇಲ್ಲದಂತಾಗಿರುವುದನ್ನು ಹೇಳುತ್ತಾ ಎದೆ ಬಡಿದುಕೊಂಡು ಜೋರಾಗಿ ಅಳುತ್ತಿರುವುದು ಎಲ್ಲರಲ್ಲೂ ಕಣ್ಣೀರು ಬರುವಂತಾಗಿಸಿತ್ತು.

ಇಲ್ಲಿನ ಪ್ರತಿ ತಾಲೂಕಿನಲ್ಲಿ ನಾಲ್ಕರಿಂದ ಐದು ಸಾವಿರ ಜನರು ತಮ್ಮ ಮನೆ, ಗುಡಿಸಲುಗಳನ್ನು ಕಳೆದುಕೊಂಡು ನಿರಾಶ್ರಿತರಾಗಿ ಒಂದು ತುತ್ತು ಅನ್ನಕ್ಕಾಗಿ ಗೇಣು ಬಟ್ಟೆಗಾಗಿ ಬಾಯಿ ಬಿಡುವಂತಾಗಿದೆ, ಮಳೆ ನಿಂತ ನಂತರವೂ ಕೆಲವೊಂದು ಹಳ್ಳಿಗಳು ಜಲಾವೃತ್ತಗೊಂಡು ನಾಗರಿಕ ಸಂಪರ್ಕವನ್ನು ಕಳೆದುಕೊಂಡು ತಮ್ಮ ಜೀವ ವನ್ನು ಉಳಿಸಿಕೊಳ್ಳಲು ಹೆಲಿಕಾಪ್ಟರ್ ನಿಂದ ಬೀಳುವ ಅನ್ನದ ಪ್ಯಾಕೇಟ್ ಮೇಲೆ ಜೀವಿಸುವ ದಾರುಣ ಪರಿಸ್ಥಿತಿ ನಿರ್ಮಾಣವಾಗಿದೆ. ಹಿಂದೆಂದೂ ತುಂಬದ ಅನೇಕ ಕೆರೆ ಕಟ್ಟೆಗಳು ಇಂದು ತುಂಬಿ ಒಡೆದು ಹೋಗುವ ಅಪಾಯದ ಮಟ್ಟವನ್ನು ತಲುಪಿವೆ.

ಇಲ್ಲಿನ ಜನರು ಹಸಿವಿನಿಂದ ಒದ್ದಾಡುತ್ತಿರುವಾಗ ರಾಜ್ಯದ ಕಾಂಗ್ರೆಸ್‌ನ ಮಂತ್ರಿಗಳು ತಮ್ಮ ಪ್ರತಿಷ್ಠೆಗಳನ್ನು ಬೆಳೆಸಿಕೊಳ್ಳಲು ಅಲ್ಲಿಗೆ ಭೇಟಿ ನೀಡುವ ಕಾರ್ಯಕ್ರಮ ಹಾಕಿಕೊಂಡಿದ್ದರು. ಅವರ ಆಶ್ವಾಸನೆಗಳಿಗಂತೂ ಲೆಕ್ಕವೇ ಇಲ್ಲ. ಅಲ್ಲಿನ ಆಡಳಿತ ಯಂತ್ರವೂ ಕೂಡ ಇದಕ್ಕೆ ಅಪವಾದವಲ್ಲ(ಒಂದೆರೆಡು ಘಟನೆಗಳನ್ನು ಬಿಟ್ಟರೆ). ಮಂತ್ರಿಗಳು ದಿನಕ್ಕೊಬ್ಬರಂತೆ ಧರ್ಮಸಿಂಗ್, ರಾಜಶೇಖರ ಮೂರ್ತಿ, ಶ್ರೀರಂಗದೇವ ರಾಯಲು ನಂತರ ಗಾಳಿಯಲ್ಲಿ ವೀರಪ್ಪಮೊಯಿಲಿಯುವರು ಸುತ್ತಾಡಿ ತಕ್ಷಣ ಪರಿಹಾರ ನೀಡಲು ಹತ್ತು ಕೋಟಿ ಹಣವನ್ನು ಬಿಡುಗಡೆ ಮಾಡಿದ್ದೇವೆ ಎಂದು ಹೇಳಿದ ಮೇಲೂ ಯಾವುದೇ ಪರಿಹಾರ ಕಾರ್ಯ ಜರುಗುತ್ತಿಲ್ಲ. ಹಣ ಎಲ್ಲಿ ಹೋಯಿತು ಎಂಬುದು ಗೊತ್ತಾಗುತ್ತಿಲ್ಲ. ಕೈ ಬೆರಳೆಣಿಕೆಯಷ್ಟು ಗಂಜಿ ಕೇಂದ್ರಗಳನ್ನು ತೆರೆದದ್ದನ್ನು ಬಿಟ್ಟರೆ ಮತ್ತಾವ ಪರಿಹಾರ ಕಾರ್ಯಕ್ರಮಗಳನ್ನು ನಡೆಸುತ್ತಿಲ್ಲ.



ಇಂತಹ ಪರಿಸ್ಥಿತಿಯಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ ಮಲ್ಲಯ್ಯ ಜಾಲ ಹಳ್ಳಿ ಮತ್ತು ಎಸ್. ತಿಪ್ಪಣ್ಣರ ಹಳ್ಳಿ, ಜಾಗೀರ ವೆಂಕಟಾಪುರಕ್ಕೆ ಭೇಟಿ ಕೊಟ್ಟಾಗ ನಿಜಕ್ಕೂ ಕರುಳು ಬಿರಿಯುವಂತಹ ಘಟನೆಯನ್ನು ನೋಡಬೇಕಾಯಿತು. 7000 ಕ್ಕೂ ಹೆಚ್ಚು ಎಕರೆಯ ಸುಮಾರು 100 ಮನೆಗಳುಳ್ಳ, 3000 ಜನ ಸಂಖ್ಯೆ ಇರುವ ಈ ಗ್ರಾಮ ರಾಯಚೂರು ತಾಲೂಕಿನಲ್ಲಿಯೇ ಅತೀ ಹೆಚ್ಚು ಜೋಳ ಬೆಳೆಯುತ್ತದೆ. ಬೆಳೆದ ಜೋಳಗಳನ್ನು ನೆಲದೊಳಗೆ 'ತೋಡಿರುವ ಹಗೇವುಗಳಲ್ಲಿ ಹಾಕಿಡುವುದು ಇಲ್ಲಿನ ಪದ್ಧತಿ. ಹಾಗೆ ಹಾಕಿಟ್ಟ ನೂರಾರು ಹಗೇವುಗಳು ಮಳೆಯಿಂದಾಗಿ ಭೂಮಿಯೊಳಗಿನಿಂದ ನೀರಿನ ಚಿಲುಮೆಗಳು ಎದ್ದು ಹೊರಬಂದಿವೆ. ಇದರ ಪರಿಣಾಮವಾಗಿ ಜೋಳ ಒದ್ದೆಯಾಗಿ ಕೊಳೆತು ಊರೆಲ್ಲ ವಾಸನೆ ಹೊಡೆಯುತ್ತಿರುವುದು ನೋಡಲು ಅಸಾಧ್ಯವಾದ ಉಸಿರಾಡಲು ಕಷ್ಟವಾದ ವಾತಾವರಣವನ್ನು ಸೃಷ್ಟಿಸಿದೆ. ಇದೊಂದೇ ಗ್ರಾಮದಲ್ಲಿ ಎರಡು ಮೂರು ಲಕ್ಷದಷ್ಟು ಬೆಳೆಯು ಕೊಳೆತು ಹೋಗಿದೆ. ಇನ್ನು ಮಿಕ್ಕ ಗ್ರಾಮಗಳಲ್ಲಿ ಬೆಳೆಗಳ ನಷ್ಟವನ್ನು ಓದುಗರೇ ಅಂದಾಜು ಮಾಡಿಕೊಳ್ಳಬೇಕು. ಇದರಿಂದ ಅಲ್ಲಿನ ಜನರಿಗೆ ಅನಾರೋಗ್ಯ ಹರಡುವ ಭಯದಲ್ಲಿ ಹಸಿದ ಹೊಟ್ಟೆಗಳ, ಆಕಾಶವನ್ನೇ ಸೂರಾಗಿಸಿಕೊಂಡ ಜನಗಳು ಸಹಾಯಕ್ಕಾಗಿ ಅಂಗಲಾಚುತ್ತಿದ್ದಾರೆ.

ಪತ್ತೆಪುರ ಸೇತುವೆ ನಾಶವಾಗಿದ್ದಾಗ್ಯೂ ದೇಶಪಾಂಡೆಯವರು ಅದ್ದೇಗೆ ಹೋದರೆಂದು ಅಧಿಕಾರಿಗಳು, ಕಾಂಗ್ರೆಸವರು ಅಚ್ಚರಿಯಿಂದ ಅಪರಾಧಿಭಾವದಿಂದ ಕುಳಿತಿದ್ದರು. ಆದರೆ ಜಾಗೀರ ವೆಂಕಟಾಪುರ ಗ್ರಾಮದ ರೈತರು ಸ್ವಶ್ರಮದಿಂದ ತಾತ್ಕಾಲಿಕ ರಸ್ತೆ ನಿರ್ಮಿಸಿದ್ದು ಕಾಂಗ್ರೆ-ಮತ್ತವರ ಅಧಿಕಾರಿಗಳಿಗೆ ಗೊತ್ತಿರಲಿಲ್ಲ.

ನಮ್ಮ ಸಂಗಾತಿಗಳು ಅಲ್ಲಿಗೆ ಭೇಟಿ ನೀಡಿದಾಗ ಊರಿನ ಜನ ಗಂಡು ಹೆಣ್ಣೆಂಬ ಭೇದವಿಲ್ಲದ ಜೋಳದ ಗಬ್ಬು ವಾಸನೆಯಿಂದ ಪಾರಾಗಲು ಅವನ್ನು ತೊಳೆದು ಬಿಸಿಲಿಗೆ ಹಾಕಲು ಪರಿಶ್ರಮಿಸುತ್ತಿರುವುದು ಕಂಡುಬಂತು. ಹೊರಗಿನಿಂದ ಬಂದಂತಹ ಪ್ರಥಮ ವ್ಯಕ್ತಿಗಳು ರೈತ ಸಂಘದವರಾಗಿದ್ದುದು ಅವರಿಗೆ ಆಶ್ಚರ್ಯವಾಯಿತು. ಅಲ್ಲಿಯ ಜನ ತಮ್ಮ ಹಳ್ಳಿಗೆ ಬಾರದ ಅಧಿಕಾರಿಗಳನ್ನು ಹಾಗೂ ಜನ ಪ್ರತಿನಿಧಿಗಳನ್ನು ಬಾಯಿಗೆ ಬಂದಂತೆ ಬೈಯುತ್ತಿದ್ದುದು ಸರ್ವೆ ಸಾಮಾನ್ಯ ದೃಶ್ಯವಾಗಿತ್ತು. ಈ ಸ್ಥಿತಿಯಲ್ಲಿ ಅಲ್ಲಿಗೆ ಬೇಕಾದ ವ್ಯವಸ್ಥೆ ಮಾಡಿಸಲು ಕರೆದ ಸಭೆಯಲ್ಲಿ ಊರಿನವರೆಲ್ಲ ಪಾಲ್ಗೊಂಡು ತಮ್ಮ ಅಮೂಲ್ಯ ಸಲಹೆಗಳನ್ನು ರೈತ ಮುಖಂಡರಿಗೆ ನೀಡಿದರು. ನಂತರ ರಾಯಚೂರಿಗೆ ಬಂದ ಈ ಮುಖಂಡರು ಅಧಿಕಾರಿಗಳನ್ನು ಹಾಗೂ ಜನಪ್ರತಿನಿಧಿಗಳನ್ನು ಕರೆದೊಯ್ಯುವ ಪ್ರಯತ್ನ ನಡೆಸಿದರೆ ಅದಕ್ಕೆ ಯಾರೂ ಸ್ಪಂದಿಸದಿದ್ದು ನಿಜಕ್ಕೂ ಆಡಳಿತ ಪಕ್ಷದ ನೀಚತನಕ್ಕೊಂದು ಸಾಕ್ಷಿಯಾಯಿತು. ನಂತರ ಅಲ್ಲಿಗೆ ಬಂದ ವಿರೋಧ ಪಕ್ಷದ ನಾಯಕರಾದ ಆರ್.ವಿ. ದೇಶಪಾಂಡೆ ಅಲ್ಲಿಗೆ ಭೇಟಿ ಇತ್ತರು. ಆ ಊರಿಗೆ ಹೋಗುವ ಎಲ್ಲಾ ಮಾರ್ಗಗಳು ಮುಚ್ಚಿವೆಯೆಂಬ ಸುಳ್ಳು ವದಂತಿಯನ್ನು ಲೆಕ್ಕಿಸದೆ ವಿರೋಧ ಪಕ್ಷದ ನಾಯಕರು ಅಲ್ಲಿಗೆ ಭೇಟಿ ನೀಡಿದ್ದು ಕಾಂಗ್ರೆಸವರಿಗೂ ಹಾಗೂ ಅಲ್ಲಿನ ಆಡಳಿತಾಧಿಕಾರಿಗಳಿಗೆ ನುಂಗಲಾರದ ಬಿಸಿ ತುಪ್ಪವಾಯಿತು.

ಹೀಗೆ ಒಂದೊಂದು ಗ್ರಾಮದ್ದು ಒಂದೊಂದು ಕಥೆ ವ್ಯಥೆ.

ಧರಮ್‌ಸಿಂಗ್ ಅವರು ಹೆಲಿಕಾಪ್ಟರ್‌ನಲ್ಲಿ ಬರುವಾಗ ಉದ್ದೇಶಪೂರ್ವಕವಾಗಿ ರಾಜಶೇಖರ ಮೂರ್ತಿಗಳನ್ನು ಬಿಟ್ಟು ಬಂದರೆಂದು ರಾಜಶೇಖರ ಮೂರ್ತಿಗಳೇ ಪತ್ರಿಕಾ ಹೇಳಿಕೆ ಕೊಟ್ಟಿದ್ದರಿಂದ ಉಂಟಾದ ಗೊಂದಲದಿಂದಾಗಿ ಅಧಿಕಾರಿಗಳು ಮತ್ತು ಕಾಂಗ್ರೆ ಕಾರ್ಯಕರ್ತರು ಗೊಂದಲದಲ್ಲಿ ಬಿದ್ದು ಸಂತ್ರಸ್ತರನ್ನು ಮರೆತರು. ಇವರ ಕೀಳು ರಾಜಕೀಯದಿಂದಾಗಿ ರೈತಕೂಲಿಕಾರರು ಸಕಾಲದಲ್ಲಿ ಸಹಾಯ ಸೌಲಭ್ಯಗಳು ಸಿಗದೆ ತುಂಬ ಕಷ್ಟಕ್ಕೊಳಗಾದರು.

ಪರಿಹಾರ ಕಾರ್ಯಗಳನ್ನು ನಡೆಸದ ಬಗ್ಗೆ ರೊಚ್ಚಿಗೆದ್ದ ದೇವದುರ್ಗ ತಾಲೂಕಿನ ರೈತರು ಅಕ್ಟೋಬರ್ 12 ರಂದು ಜಿಲ್ಲಾಧಿಕಾರಿ ಕಛೇರಿ ಮುಂದೆ ಬಂದಾಗ, ಅವರ ಅಹವಾಲನ್ನು ಕೇಳಲೂ ಯಾವೊಬ್ಬ ಅಧಿಕಾರಿಯೂ ಇರಲಿಲ್ಲ. ಇದರಿಂದ ಸಿಟ್ಟಿಗೆದ್ದ ಜನರು ಪ್ರಾಂತ ರೈತ ಸಂಘದ ಮಲ್ಲಯ್ಯ ಜಾಲ ಹಳ್ಳಿಯವರ ನೇತೃತ್ವದಲ್ಲಿ ಜಿಲ್ಲಾಧಿಕಾರಿ ಕಛೇರಿಯನ್ನು ಮುತ್ತಿಗೆ ಹಾಕಲು ನಿರ್ಧರಿಸಿದರು. ನಂತರ ಬೀಳುತ್ತಿದ್ದನ್ನು ಮಳೆಯನ್ನು ಲೆಕ್ಕಿಸದೆ ರೈತ ಕೃಷಿ ಕೂಲಿಕಾರರು ಘೇರಾವನ್ನು ಮುಂದುವರೆಸಿದಾಗ ಅನಿವಾರ್ಯವಾಗಿ ಅಲ್ಲಿಗೆ ಬಂದ ಜಿಲ್ಲಾಧಿಕಾರಿಗಳು ತಕ್ಷಣ ಪರಿಹಾರ ಕಾರ್ಯಕ್ರಮಕ್ಕೆ ಬೇಕಾದ ಸಮಿತಿಗಳನ್ನು ರಚಿಸಲು ತಕ್ಷಣವೇ ಘೋಷಿಸಿದರಲ್ಲದೆ ಅಲ್ಲಿಗೆ ಬಂದಿದ್ದ ಎಲ್ಲಾ ರೈತ-ಕೂಲಿಕಾರರಿಗೂ ಊಟದ ವ್ಯವಸ್ಥೆ ಹಾಗೂ ಊರಿಗೆ ಹೋಗಲು ಬೇಕಾದ ವಾಹನ ವ್ಯವಸ್ಥೆಯನ್ನು ಮಾಡಿದರು. ಈ ಗೆಲುವಿನಿಂದ ಉಲ್ಲಸಿತರಾದ ರೈತ- ಕೂಲಿಕಾರರು ಘೇರಾವನ್ನು ಹಿಂತೆಗೆದುಕೊಂಡರು. ಈ ಸಂದರ್ಭದಲ್ಲಿ ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ ಬಾಳೆಯವರು ಹಾಜರಿದ್ದು ಮಾರ್ಗದರ್ಶನ ಮಾಡಿದರು.

ವರದಿ : ಮಲ್ಲಯ್ಯ ಜಾಲಹಳ್ಳಿ

ಉತ್ತಮ ಅಧಿಕಾರಿಗಳು

ಗೋವಿನಪಲ್ಲಿ ಗ್ರಾಮ ನೀರಿನಲ್ಲಿ ಮುಳುಗುತ್ತಿರುವಾಗ ಶ್ರೀಮತಿ ವಂದನಾ ಸಹಾಯಕ ಆಯುಕ್ತರು ತಮ್ಮ ಸಿಬ್ಬಂದಿಯೊಂದಿಗೆ ಅಲ್ಲಿಯೇ ನಿಂತುದರಿಂದ ಆ ಗ್ರಾಮದ ಜನಕ್ಕೆ ಹೆಚ್ಚಿನ ಜೀವ ಹಾನಿಯಾಗದೆ ಪಾರಾಗುವಂತಾಯಿತು. ಈ ಸಂದರ್ಭದಲ್ಲಿ ರಾಮದುರ್ಗ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಆರು ಅಡಿ ನೀರಿನಲ್ಲಿ ಈಜಿಹೋಗಿ ಕೆಲವರನ್ನು ರಕ್ಷಿಸಿದರು. ಮಿಡಗಲದಿನ್ನಿ ಗ್ರಾಮದಲ್ಲಿ ಸಾವು ಬದುಕಿನ ಮಧ್ಯೆ ಸೆಣೆಸುತ್ತಿದ್ದ ಜನರನ್ನು ಯೆರಗೇರ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಜ್ಯೋತಿ ಸಾಹಸದಿಂದ ರಕ್ಷಿಸಿದರು.

ಸಿಪಿಐ(ಎಂ) ಕೇಂದ್ರ ಸಮಿತಿಯ ಹೇಳಿಕೆ

ಬಾಬ್ರಿ ಮಸೀದಿ ನಾಶಕ್ಕೆ ಸಂಬಂಧಿಸಿದಂತೆ 40 ಜನರ ಮೇಲೆ ಈಗ ಮೊಕದ್ದಮೆ ಹೂಡಿರುವುದರ ಬಗ್ಗೆ ಸಿಪಿಐ(ಎಂ) ಈ ಕೆಳಗಿನ ಪತ್ರಿಕಾ ಹೇಳಿಕೆ ನೀಡಿದೆ.

"ಅಯೋಧ್ಯೆ ಬಾಬ್ರಿ ಮಸೀದಿ ನಾಶಕ್ಕೆ ಸಂಬಂಧಿಸಿದಂತೆ ಸಿಬಿಐ ಈಗ ಹಲವರ ಮೇಲೆ ಮೊಕದ್ದಮೆ ಹೂಡಿರುವುದು ಅದರ ಬಗ್ಗೆ ಸಂದೇಹಕ್ಕೆ ಎಡೆ ಮಾಡಿಕೊಡುತ್ತದೆ. ನರಸಿಂಹರಾಯರ ಸರ್ಕಾರ ಮಸೀದಿಯ ನಾಶವನ್ನು ತಡೆಯಲು ಏನನ್ನೂ ಮಾಡಲಿಲ್ಲ. ಡಿಸೆಂಬರ್ 6 ನಂತರ ಹತ್ತು ತಿಂಗಳು ಉರುಳಿವೆ. ಆದರೆ ಈ ಅವಧಿಯಲ್ಲಿ ಸರ್ಕಾರ ಮತ್ತು ಸಿಬಿಐ ಬೇಜವಾಬ್ದಾರಿ ತೋರಿವೆ. ಅಪರಾಧಿಗಳನ್ನು ವಿಚಾರಣಾ ಕಟಕಟೆಯಲ್ಲಿ ನಿಲ್ಲಿಸುವ ಪ್ರಯತ್ನಗಳನ್ನು ಮಾಡಲಿಲ್ಲ."

ಮೊಕದ್ದಮೆಗಳಲ್ಲಿ ಹೆಸರಿಸಲ್ಪಟ್ಟಿರುವವರೆಲ್ಲ ಮಸೀದಿಯ ನಾಶಕ್ಕೆ ಜವಾಬ್ದಾರರು ಎಂಬುದರಲ್ಲಿ ಸಂದೇಹವೇನೂ ಇಲ್ಲ. ಆದರೆ ವಿಧಾನಸಭೆಗಳಿಗೆ ಚುನಾವಣೆಗಳು ಘೋಷಣೆಯಾದ ನಂತರ ಮೊಕದ್ದಮೆ ಹೂಡಿರುವುದು ಬಿಜೆಪಿಗೆ 'ಇವು ಚುನಾವಣೆ ರಾಜಕೀಯ ಲಾಭಕ್ಕಾಗಿ ಮಾಡಿರುವುದು ಎಂಬ ಪ್ರಚಾರಕ್ಕೆ ಸಹಾಯ ಮಾಡಿದೆ'.

ಅಯೋಧ್ಯೆ ವಿವಾದ ಪರಿಹರಿಸುವಲ್ಲಿ ತನ್ನ ಮೂರ್ತವಾದ ಯೋಜನೆಯೇನು ಎಂಬುದನ್ನು ಕೇಂದ್ರ ಸರ್ಕಾರ ಕೂಡಲೇ ಬಹಿರಂಗ ಪಡಿಸಬೇಕು. ಕೋಮು ಶಕ್ತಿಗಳು ಒಡ್ಡಿರುವ ಅಪಾಯವನ್ನು ಎದುರಿಸಲು ಪ್ರಾಮಾಣಿಕ ಮತ್ತು ಅರ್ಥಪೂರ್ಣ ಕ್ರಮಗಳನ್ನು ಕೈಗೊಳ್ಳಬಲ್ಲನೆಂಬುದನ್ನು ನರಸಿಂಹರಾಯರ ಸರ್ಕಾರ ಇನ್ನಾ

ಆರು ದಿನದ ಕಡ್ಡಾಯ ಕೆಲಸ - ಶೇ. 20 ರ ಬೋನಸ್ಸ್‌ಗಾಗಿ

ಬೀಡಿ ಕಾರ್ಮಿಕರ ಪ್ರದರ್ಶನ

ಕರ್ನಾಟಕ ರಾಜ್ಯ ಬೀಡಿ ಕಾರ್ಮಿಕರ ಫೆಡರೇಷನ್ನಿನ ಕರೆಯಂತೆ ವಾರದಲ್ಲಿ ಆರು ದಿನದ ಕೆಲಸ ಹಾಗೂ ಶೇಕಡಾ 20 ರಷ್ಟು ಬೋನಸ್ಸ್ ಕೊಡಬೇಕೆಂದು ಒತ್ತಾಯಿಸಿ ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಬೀಡಿ ಕಾರ್ಮಿಕರು ಪ್ರದರ್ಶನ ನಡೆಸಿ ಬೀಡಿ ಮಾಲಿಕರಿಗೆ ಮನವಿ ಅರ್ಪಿಸಿದರು. ಬೀಡಿ ಕೈಗಾರಿಕೆಯ ಕೇಂದ್ರವಾದ ಮಂಗಳೂರಿನಲ್ಲಿ ಐನೂರಕ್ಕೂ ಹೆಚ್ಚು ಬೀಡಿ ಕಾರ್ಮಿಕರು ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 1 ಗಂಟೆಯ ತನಕ ಪ್ರದರ್ಶನ ನಡೆಸಿ ಜಿಲ್ಲಾ ಬೀಡಿ ಕಾರ್ಮಿಕರ ಫೆಡರೇಷನ್ನಿನ ಕಾರ್ಯದರ್ಶಿ ಕಾಂ. ಜೆ. ಬಾಲಕೃಷ್ಣ ಶೆಟ್ಟಿ, ಸಹ ಕಾರ್ಯದರ್ಶಿ ಕಾಂ. ಸುಕುಮಾರ್, ಉಪಾಧ್ಯಕ್ಷರಾದ ಜೆ. ವೀರಪ್ಪ, ಕೋಶಾಧಿಕಾರಿ ಕಾಂ. ಬಾಬು ದೇವಾಡಿಗ ಹಾಗೂ ಕಾರ್ಮಿಕ ಮುಂದಾಳು ಕಾಂ. ಯು. ಜನಾರ್ಧನ ನಾಯ್ಕನವರ ನೇತೃತ್ವದಲ್ಲಿ ಭಾರತ್ ಬೀಡಿ ಮಾಲಿಕರಿಗೆ ಮನವಿ ಅರ್ಪಿಸಿದರು. ಬಳಿಕ ನಡೆದ ಸಭೆಯನ್ನು ಉದ್ದೇಶಿಸಿ ಜಿಲ್ಲಾ ಕಾರ್ಯದರ್ಶಿ ಜೆ. ಬಾಲಕೃಷ್ಣ ಶೆಟ್ಟಿಯವರು ಮಾತನಾಡುತ್ತಾ ವಾರದಲ್ಲಿ 6 ದಿನದ ಕೆಲಸ ಹಾಗೂ ಶೇಕಡಾ 20 ಬೋನಸ್ಸ್ ಬೇಡಿಕೆಯನ್ನು ಮಾಲೀಕರು ಈಡೇರಿಸದಿದ್ದರೆ ಮುಂದಿನ ದಿನಗಳಲ್ಲಿ ಚಳವಳಿಯನ್ನು ತೀವ್ರಗೊಳಿಸಲಾಗುವುದೆಂದು ಎಚ್ಚರಿಸಿದರು. ಕಾಂ. ಸುಕುಮಾರ್ ಸ್ವಾಗತಿಸಿದರು.

ಮುಲ್ಕಿಯಲ್ಲಿ : ಪಡುಬಿದ್ರ, ಫಲಿಮೊರ್, ಕಟೀಲ್ ಪ್ರದೇಶದ ಬೀಡಿ ಕಾರ್ಮಿಕರು ಮುಲ್ಕಿ ಭಾರತ್ ಬೀಡಿ ಡಿಪ್ಪೋದಲ್ಲಿ ಮೇನೇಜರ್‌ರಿಗೆ ಪ್ರದರ್ಶನ ನಡೆಸಿ ಮನವಿ ಅರ್ಪಿಸಿದರು.

ಕಾಪು ಪ್ರದೇಶದ ಬೀಡಿ ಕಾರ್ಮಿಕರು ಸಂಘದ ಅಧ್ಯಕ್ಷರಾದ ಕಾಂ. ಸುಂದರಿ ಹೆಡ್ತಿ, ಕಾರ್ಯದರ್ಶಿ ಕಾಂ. ಭವಣಿ ಹಾಗೂ ಕಾರ್ಮಿಕ ಮುಂದಾಳು ಕಾಂ. ಡೇವಿಡ್ ಕರ್ಕಡರವರ ನೇತೃತ್ವದಲ್ಲಿ ಮನವಿಯನ್ನು ಶಿರ್ಪುದ್ದೀನ್ ಬೀಡಿ ಡಿಪ್ಪೋಗೆ ಸಲ್ಲಿಸಿದ್ದಾರೆ.

ಉಡುಪಿ : ಮಲ್ಪೆ ಹಾಗೂ ಉಡುಪಿ ಸುವರ್ಣ ಹಾಗೂ ಸಾಧು ಅಮಿನ್‌ರವರ ನೇತೃತ್ವದಲ್ಲಿ ಭಾರತ್ ಬೀಡಿ ಹಾಗೂ ಹೋಂ ಇಂಡಸ್ಟ್ರೀಸ್ ಡಿಪ್ಪೋ ಎದುರು ಪ್ರದರ್ಶನ ನಡೆಸಿ ಮನವಿ ಸಲ್ಲಿಸಿದರು.

ಕುಂದಾಪುರ: ಬೀಡಿ ಕಾರ್ಮಿಕರು ಮುಷ್ಕರ ಮಾಡಿ ಪ್ರದರ್ಶನ ನಡೆಸಿದರು. ಸುಮಾರು 400ಕ್ಕೂ ಹೆಚ್ಚು ಬೀಡಿ ಕಾರ್ಮಿಕರು ಭಾಗವಹಿಸಿದ್ದ ಪ್ರದರ್ಶನದ ನೇತೃತ್ವವನ್ನು ರಾಜ್ಯ ಬೀಡಿ ಫೆಡರೇಶನ್ನಿನ ಕಾರ್ಯದರ್ಶಿ ಕೆ. ಶಂಕರ, ಕುಂದಾಪುರ ಬೀಡಿ ಕೆಲಸಗಾರರ ಸಂಘದ ಕಾರ್ಯದರ್ಶಿ ಕೆ. ಮಹಾಬಲ ಒಡೆಯರ್ ಹೊಬ್ಬಳ್ಳಿ ವಹಿಸಿದ್ದರು.

ಮೂಡಿಬಿದ್ರೆ: ಹೋಂ ಇಂಡಸ್ಟ್ರೀಸ್ ಡಿಪ್ಪೋದಲ್ಲಿ ಪ್ರದರ್ಶನ ನಡೆಸಿದ ಬೀಡಿ ಕಾರ್ಮಿಕರು ಜಿಲ್ಲಾ ಬೀಡಿ ಫೆಡರೇಶನ್ನಿನ ಉಪಾಧ್ಯಕ್ಷರಾದ ಕಾಂ. ಯು.ಬಿ. ಲೋಕಯ್ಯ ಹಾಗೂ ಮೂಡಬಿದ್ರೆ ಸಂಘದ ಕಾರ್ಯದರ್ಶಿ ಕಾಂ. ರಮಣಿಯವರು ನೇತೃತ್ವದಲ್ಲಿ ಮನವಿ ಅರ್ಪಿಸಿದರು. ಮಂಗಳೂರು ತಾಲೂಕಿನ ಕೈಕಂಬದಲ್ಲಿ ಟೆಲಿಫೋನ್ ಬೀಡಿ ಡಿಪ್ಪೋಗೆ ವಾಮಂಜೇರು, ಕುಪ್ಪೆ ಪದವು, ಗುರುಪುರ ಪ್ರದೇಶದ ಬೀಡಿ ಕಾರ್ಮಿಕರು ಕಾ. ಯು.ಬಿ. ಲೋಕಯ್ಯ, ಕಾಂ. ಗಂಗಯ್ಯ ಅಮಿನ್, ಕಾಂ. ವಾಸುದೇವ ಆಚಾರ ನೇತೃತ್ವದಲ್ಲಿ ಪ್ರದರ್ಶನ ನಡೆಸಿ ಮೆನೇಜರ್‌ರವರಿಗೆ ಮನವಿ ಅರ್ಪಿಸಿದರು.

ಬಂಟ್ವಾಳ : ಕಾಂ. ವಾಸುಗಟ್ಟಿ ಹಾಗೂ ಕಾಂ. ನಾರಾಯಣನವರ ನೇತೃತ್ವದಲ್ಲಿ ಬೀಡಿ ಕಾರ್ಮಿಕರು ಹೋಂ ಇಂಡಸ್ಟ್ರೀಸ್ ಡಿಪ್ಪೋ ಮೇನಜರ್‌ರವರಿಗೆ ಮನವಿ ಅರ್ಪಿಸಿದರು.

ಬೆಳ್ತಂಗಡಿ : ಶೇಕಡಾ 20 ಬೋನಸ್‌ಗಾಗಿ, ವಾರದಲ್ಲಿ 6 ದಿವಸಗಳ ಕೆಲಸ ಖಾಯಂಗಾಗಿ ಒತ್ತಾಯಿಸಿ ರಾಜ್ಯಾದ್ಯಂತ ನಡೆದ ಬೀಡಿ ಮಾಲಕರ ಡಿಪ್ಪೋ ಮುಂದೆ ನಡೆಸಿದ ಬೀಡಿ ಕಾರ್ಮಿಕರ ಪ್ರದರ್ಶನವು ಬೆಳ್ತಂಗಡಿಯಲ್ಲಿ ಯಶಸ್ವಿಯಾ... 14.10.1993 ರಂದು ...

ಕಾರ್ಮಿಕರು ಬೀಡಿ ಮಾಲಿಕರ ಡಿಪ್ಪೋ ಮುಂದೆ ಪ್ರದರ್ಶನ ನಡೆಸಿ ಮನವಿ ಸಲ್ಲಿಸಿದರು.

ನಂತರ ನಡೆದ ಸಭೆಯಲ್ಲಿ ತಾಲೂಕು ರೈತ ಸಂಘದ ಅಧ್ಯಕ್ಷ ಕೆ.ವಿ. ರಾವ್, ಸಿಪಿಐ(ಎಂ)ನ ಕಾರ್ಯದರ್ಶಿ ಹರಿದಾಸ್ ಮಾತನಾಡಿ, ಬೀಡಿ ಕಾರ್ಮಿಕರ ಸಮಸ್ಯೆಗಳು ಹಾಗೂ ಸಂಘಟನೆಯ ಅವಶ್ಯಕತೆಯನ್ನು ವಿವರಿಸಿದರು. ಹಾಗೆಯೇ ಮುಂಬರುವ ಬೆಳ್ತಂಗಡಿ ರೈತ ಸಮ್ಮೇಳನ ಯಶಸ್ವಿ ಮಾಡಲು ಕರೆ ನೀಡಿದರು. ಕಾರ್ಮಿಕರ ಮೆರವಣಿಗೆಯಲ್ಲಿ ಡಿವೈಎಫ್‌ಐ ಕಾರ್ಯದರ್ಶಿ ಹಾಗೂ ನ್ಯಾಯವಾದಿ ಬಿ.ಎಂ.ಭಟ್ ರೈತ ಸಂಘದ ಮುಂದಾಳು ಹಾಗೂ ನ್ಯಾಯವಾದಿ ಶಿವಕುಮಾರ್.

ಕೊನೆಯಲ್ಲಿ ಗಾಪೂರ್ ಬೀಡಿ ಕಾರ್ಮಿಕರ ಸಂಘದ ಕಾರ್ಯದರ್ಶಿ ಧರ್ನಪ್ಪ ಗೌಡರು ವಂದನಾರ್ಪಣೆ ಸಲ್ಲಿಸಿದರು.

ಪ್ರದರ್ಶನದಲ್ಲಿ ಭಾಗವಹಿಸಿದ ಎಲ್ಲಾ ಕಾರ್ಮಿಕರನ್ನು ಸೌತ್ ಕೆನರಾ ಬೀಡಿ ವರ್ಕರ್ಸ್ ಫೆಡರೇಷನ್ ಅಭಿನಂದಿಸುತ್ತದೆ.

ಕಾಂ. ನಾನಿಭಟ್ಟಾಚಾರ್ಯರ ನಿಧನಕ್ಕೆ ಪೊಲಿಟ್‌ಬ್ಯೂರೋ ಶೋಕ

ಸಂಸತ್ ಸದಸ್ಯ ಹಾಗೂ ಪಶ್ಚಿಮಬಂಗಾಳದ ಎಡರಂಗ ಸರ್ಕಾರದ ಮಾಜಿ ಮಂತ್ರಿ ಹಾಗೂ ಆರ್.ಎಸ್.ಪಿ. ನಾಯಕ ಕಾಂ. ನಾನಿ ಭಟ್ಟಾಚಾರ್ಯರ ನಿಧನಕ್ಕೆ ಸಿಪಿಐ(ಎಂ)ನ ಪೊಲಿಟ್‌ಬ್ಯೂರೋ ತೀವ್ರ ಶೋಕ ವ್ಯಕ್ತಪಡಿಸಿದೆ.

1917 ರಲ್ಲಿ ಹುಟ್ಟಿದ ಕಾಂ. ಭಟ್ಟಾಚಾರ್ಯ ಸ್ವಾತಂತ್ರ ಚಳುವಳಿಯತ್ತ ಇನ್ನೂ ಕಿರಿಯರಾಗಿದ್ದಾಗಲೇ ಆಕರ್ಷಿತರಾದರು. ಕ್ರಾಂತಿಕಾರೀ ಸೋಷಲಿಸ್ಟ್ ಪಕ್ಷ(ಆರ್.ಎಸ್.ಪಿ)ದ ಒಬ್ಬ ಮೂಲ ಪುರುಷ ಅವರು. ಅವರು ಪಶ್ಚಿಮ ಬಂಗಾಳದ ವಿಧಾನಸಭೆಗೆ 1962 ರಲ್ಲಿ ಆಯ್ಕೆಯಾದರು. 1987 ರವರೆಗೆ ಅವರು ವಿಧಾನ ಸಭಾ ಸದಸ್ಯರಾಗಿದ್ದರು. 1967 ರಿಂದ ಅವರು ಮೊದಲು ಸಂಯುಕ್ತ ರಂಗದಲ್ಲಿ ಅನಂತರ ಎಡರಂಗ ಸರ್ಕಾರದಲ್ಲಿ ಮಂತ್ರಿಯಾಗಿದ್ದರು. 1989 ರಲ್ಲಿ ಅವರು ಲೋಕಸಭೆಗೆ ಚುನಾಯಿತರಾದರು. ಮತ್ತೆ 1991 ರಲ್ಲಿ ಪುನರಾಯ್ಕೆಯಾದರು.

ಅವರ ಸಾವಿನಲ್ಲಿ ದೇಶ ಒಬ್ಬ ಜನ ಹಿತೈಷಿ ಮತ್ತು ಹೋರಾಟಗಾರನನ್ನು ಕಳೆದುಕೊಂಡಿದೆ. ಪೊಲಿಟ್‌ಬ್ಯೂರೋ ಅವರ ಕುಟುಂಬಕ್ಕೆ ಮತ್ತು ಆರ್.ಎಸ್.ಪಿಗೆ ತನ್ನ ಶೋಕ ಸಂದೇಶ ಕಳುಹಿಸಿದೆ.



ಮಂಗಳೂರಿನ ಭಾರತ್ ಬೀಡೀಸ್ ಕಛೇರಿ ಮುಂದೆ ನಡೆದ ಬೀಡಿ ಕಾರ್ಮಿಕರ ಪ್ರದರ್ಶನದ ಒಂದು ದೃಶ್ಯ

ಉತ್ತರ ಪ್ರದೇಶದಲ್ಲಿ ಬಿಜೆಪಿಯ ಕಲ್ಯಾಣಸಿಂಗರ 18 ತಿಂಗಳ ಆಡಳಿತದ ವೈಖರಿ

ನವೆಂಬರ್‌ನಲ್ಲಿ ಉತ್ತರ ಪ್ರದೇಶ ಸೇರಿದಂತೆ ಐದು ಉತ್ತರದ ರಾಜ್ಯಗಳಲ್ಲಿ ಚುನಾವಣೆ ನಡೆಯಲಿದೆ. ಬಿಜೆಪಿಗೊಂದು ಅವಕಾಶ ಕೊಡಿ ರಾಮರಾಜ್ಯ ಸ್ಥಾಪಿಸುತ್ತೇವೆಂದು ಬಿಜೆಪಿಯ ನಾಯಕರು ಹಿಂದಿನ ಚುನಾವಣೆಯಲ್ಲೇ ಜನರಿಗೆ ಭರವಸೆ ನೀಡಿ ಅಧಿಕಾರಕ್ಕೆ ಬಂದಿದ್ದರು. ಹಾಗೆ ಅವರು ಅಧಿಕಾರಕ್ಕೆ ಬಂದು 18 ತಿಂಗಳುಗಳ ಕಾಲ ನಡೆಸಿದ ಆಡಳಿತದ ದಾಖಲೆಯಿದೆ. ಎಂತಹ ರಾಮರಾಜ್ಯ ತಂದರು ಎಂಬುದು ಕೆಳಗಿದೆ. ಕಲ್ಯಾಣ ಸಿಂಗರು ತಮ್ಮ ಜನಾದೇಶ ಯಾತ್ರೆಯ ಕೊನೆಯಲ್ಲಿ ಅಲ್ಪಸಂಖ್ಯಾತರ ವಿರುದ್ಧ ವಿಷಕಾರಿದರು. ಅವರನ್ನು 'ರಾಮದ್ರೋಹಿ'ಗಳೆಂದರು. ಬಿಜೆಪಿ ಹಿಂದೆ ನೀಡಿದ ಭರವಸೆ ಮತ್ತು ನಡೆಸಿದ ಆಡಳಿತದ ರೀತಿ ಎರಡನ್ನೂ ಈಗ ನೆನಪಿಸಿಕೊಳ್ಳುವುದು ಸೂಕ್ತ.

ಜೂನ್ 1991 ರಲ್ಲಿ ನಡೆದ ಚುನಾವಣೆಯಲ್ಲಿ ಮತಗಳ ವಿಭಜನೆಯಾದ್ದರಿಂದ ಬಿಜೆಪಿ ಅಧಿಕಾರಕ್ಕೆ ಬಂತು. ಒಟ್ಟು ನೀಡಲ್ಪಟ್ಟ ಮತಗಳ ಕೇವಲ ಮೂರನೇ ಒಂದು ಭಾಗವನ್ನು ಮಾತ್ರ ಬಿಜೆಪಿ ಪಡೆಯಿತು. 'ರಾಮ ರೊಟ್ಟಿ ಮತ್ತು ನ್ಯಾಯ'ನೀಡುವ ಭರವಸೆಯತ್ತ ಬಹುತೇಕ ಜನ ಆಕರ್ಷಿತರಾಗಲಿಲ್ಲ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಅಧಿಕಾರಕ್ಕೆ ಬಂದ ಕೂಡಲೇ ಕಲ್ಯಾಣಸಿಂಗರು ಅಯೋಧ್ಯೆಗೆ ತೆರಳಿ ಅವರನ್ನು ಅಧಿಕಾರಕ್ಕೆ ತಂದ 'ರಾಮಲಾಲ'ನಿಗೆ ವಂದನೆ ಅರ್ಪಿಸಿದರು. ಜನತೆಯ ಆದೇಶ ವಿವಾದಗ್ರಸ್ತ ಸ್ಥಳದಲ್ಲೇ ಮಂದಿರ ಕಟ್ಟಲು ಎಂದೂ ಅವರು ಘೋಷಿಸಿದರು. ಶೇ. 67 ಕ್ಕೂ ಜನ ಈ ವಿಷಯದ ಆದೇಶ ನೀಡಲಿಲ್ಲವೆಂಬುದನ್ನು ಅವರು ಗಣಿಸಲಿಲ್ಲ. ಕಲ್ಯಾಣಸಿಂಗರು ಉತ್ತಮ ಆಡಳಿತ ನೀಡುವ ಬಗ್ಗೆ ಹಳೆಯ ಅವಾಂತರ ಹಗರಣಗಳಿಗೆ ಕೊನೆ ಹಾಡುವ ಬಗ್ಗೆ ಮಾತನಾಡಿದರು. ಎಲ್ಲ ಜನವರ್ಗಗಳ ಆಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಆಡಳಿತ ನಡೆಸುವ ಭರವಸೆ ನೀಡಿದ ಅವರು ಕಲಿಯುಗದ ರಾಮರಾಜ್ಯ ಸ್ಥಾಪಿಸುವ ಬಗ್ಗೆ ಮಾತನಾಡಿದರು.

ಎಂತಹ ರಾಮರಾಜ್ಯ?

ಅವರು ಸ್ಥಾಪಿಸಿದ್ದು ಎಂತಹ ರಾಮರಾಜ್ಯ? ಅನಾವಶ್ಯಕ ಸರ್ಕಾರಿ ವೆಚ್ಚ ನಿಲ್ಲಿಸುತ್ತೇವೆಂದ ಅವರ ಮಂತ್ರಿಗಳ ಆರು ತಿಂಗಳ ಅವಧಿಯ ಪ್ರವಾಸಭತ್ಯೆ, ಫೋನ್ ಬಿಲ್ ಇವೆಲ್ಲ ಸೇರಿ ಒಂದು ಕೋಟಿ ರೂಪಾಯಿಗಳಷ್ಟಾಗಿತ್ತು. ಇದರಲ್ಲಿ ಕಲ್ಯಾಣ್‌ಸಿಂಗರೊಬ್ಬರದೇ 12.83 ಲಕ್ಷ ರೂಪಾಯಿಗಳ ಪಾಲು. ಹಲವು ಮಂತ್ರಿಗಳು ಒಂದಕ್ಕಿಂತ ಹೆಚ್ಚಿಗೆ ಮನೆಗಳನ್ನು ಪಡೆದರು "ಏಕತಾ ರ್‍ಯಾಲಿ" ಯೆಂಬ ಬಿಜೆಪಿಯ ರ್‍ಯಾಲಿಗೆ ಅವರು 26 ಲಕ್ಷ ರೂಪಾಯಿಗಳನ್ನು ರಾಜ್ಯದ ಖಜಾನೆಯಿಂದ ಖರ್ಚು ಮಾಡಿದರು! ಕಲ್ಯಾಣಸಿಂಗರ ಶಾಸಕರು, ಮಂತ್ರಿಗಳು ಮತ್ತು ಸಂಸದರಲ್ಲಿ ಹಲವರು ಜನರು ಅಪರಾಧಿಗಳಾಗಿದ್ದರು. ಇಂತಹವರು ಇನ್ನೇನು ತಾನೇ ಮಾಡಲು ಸಾಧ್ಯ. ಇವರೊಂದಿಗೆ ಹಲವು ಸಮಾಜ ವಿರೋಧಿ ಶಕ್ತಿಗಳು ತಮ್ಮ ಬೇಳೆ ಬೇಯಿಸಿಕೊಂಡರು.

ಈ ಸಮಯದಲ್ಲಿ ಶಾಂತಿ ಸುವ್ಯವಸ್ಥೆ ಹೇಗಿತ್ತು? 18,621 ರಷ್ಟು ಕಳ್ಳತನ ಹೆಚ್ಚಾಗಿತ್ತು. ಶೇ. 15.1 ರಷ್ಟು ಹಗಲು ಗಳ್ಳತನದ, ಶೇ. 18.5 ರಷ್ಟು ಕೊಲೆಗಳು ಇವೆಲ್ಲ ಹೆಚ್ಚಾದವು. ಹರಿಜನರ ಕೊಲೆಗಳು ಹೆಚ್ಚಾದವು. ದುರ್ಬಲ ಜನಾಂಗಗಳ ಮೇಲಿನ ದೌರ್ಜನ್ಯವೂ ಹೆಚ್ಚಾದವು. ಮಹಿಳೆಯರ ಮೇಲೆ ಅತ್ಯಾಚಾರ, ವರದಕ್ಷಿಣೆ ಸಾವು ಹೆಚ್ಚಾದವು. ಅಲಹಾಬಾದ್, ಆಗ್ರಾಗಳಂತಹ ನಗರಗಳಲ್ಲಿ ಬಿಜೆಪಿಯ ಶಾಸಕರು, ಸಂಸದರು ಸಾಮಾನ್ಯ ಜನರ ಆಸ್ತಿಗಳನ್ನು ಕಬಳಿಸಿದರು. ಒಬ್ಬ ಮಂತ್ರಿಯ ಕುಟುಂಬದ ಹುಡುಗಿಯನ್ನು ಮದುವೆಯಾದದ್ದಕ್ಕೆ ಆ ಮಂತ್ರಿ ಈ ಹುಡುಗನ ಮೇಲೆ ದಾಳಿ ಮಾಡಿಸಿದ. ಸಿಪಿಐನ ಶಾಸಕ ಅಫಝುಲ್ ಅಹಮದ್ ಅನ್ಸಾರಿಯ ಮೇಲೆ ಪೋಲೀಸರೇ ದಾಳಿ ನಡೆಸಿದರು.

ಬಿಜೆಪಿಯ ನಾಯಕರು ಭಯೋತ್ಪಾದನೆಯನ್ನು ಪ್ರೋತ್ಸಾಹಿಸಿದರು. ತೆರಾಯ್ ಕುಮಾಯೂನ್ ಪ್ರದೇಶದ 2 ಜಿಲ್ಲೆಗಳು ಭಯೋತ್ಪಾದಕರ ಹಿಡಿತಕ್ಕೆ ಬಂದವು. ಸರಾಸರಿ ತಿಂಗಳಿಗೆ 11 ಭಯೋತ್ಪಾದನೆಯ ಘಟನೆಗಳು ಬಿಜೆಪಿಯ ಆಡಳಿತ ಅವಧಿಯಲ್ಲಿ ನಡೆದವು. ಫಿಲಿಬಿಟ್ ಜಿಲ್ಲೆಯಲ್ಲಿ ಒಂದೇ ಒಂದು ಘಟನೆಯಲ್ಲಿ 29 ಮುಗ್ಧ ಜನರನ್ನು ಕೊಲ್ಲಲಾಯಿತು.

ಭ್ರಷ್ಟಾಚಾರ

ಬಿಜೆಪಿಯ ಆಡಳಿತದ ಅವಧಿಯಲ್ಲಿ ಭ್ರಷ್ಟಚಾರ ನಗ್ನತಾಂಡವವಾಡಿತು. ವಿ.ಹೆಚ್.ಪಿ ಯ ಅಶೋಕ ಸಿಂಘಾಲರ ಸಹೋದರನ ಸ್ವರೂಪ್ ಕೆಮಿಕಲ್ಸ್ ಪ್ರೈ.ಲಿ. ಎಂಬ ಕಂಪನಿಗೆ ಹತ್ತು ಕೋಟಿ ರೂಪಾಯಿಗಳ ಕಾಂಟ್ರಾಕ್ಟೊಂದನ್ನು ನೀಡಲಾಯಿತು. ಈ ಕಂಪನಿ ಪೂರೈಸಿದ ಗುಣದೋಷವುಳ್ಳ 'ಲಿಂಡೆನ್ ಗ್ರಾನ್ಯೂಲ್ಸ್' ಎಂಬ ರಾಸಾಯನಿಕದಿಂದ ಶೇ. 30 ಹೆಚ್ಚು ಕಬ್ಬಿನ ಬೆಳೆ ನಾಶವಾದವು. ಬೃಂದಾವನದಲ್ಲಿ 43.15 ಎಕರೆಗಳಷ್ಟು ಭೂಮಿಯನ್ನು ಸಾಧ್ವಿರಿತಂಬರ ಎಂಬ ಬಿಜೆಪಿ ನಾಯಕಿಗೆ ನೀಡಲಾಯಿತು. 33 ವರ್ಷಗಳ ಅವಧಿಯ ಈ ಒಪ್ಪಂದವನ್ನು ಎರಡು ಸಾರಿ ನವೀಕರಿಸಬಹುದು. ಇದಕ್ಕೆ ಭೂಗೇಣಿ ಎಷ್ಟು ಗೊತ್ತೆ! ವರ್ಷಕ್ಕೆ ಕೇವಲ ಒಂದು ರೂಪಾಯಿ ಮಾತ್ರ. ಈ ಭೂಮಿಯಲ್ಲಿ ತೋಟಗಾರಿಕಾ ಇಲಾಖೆ 1953 ರಿಂದ ಹಣಹೂಡಿ ಹಲವು ಹಣ್ಣಿನ ಗಿಡಗಳನ್ನು ಮರಗಳನ್ನು ಬೆಳೆಸಿತ್ತು.

ವರ್ಗಾವರ್ಗಿ ಹಗರಣ

ಪ್ರಾಮಾಣಿಕ ಅಧಿಕಾರಿಗಳನ್ನು ಪ್ರೋತ್ಸಾಹಿಸುವ ಘೋಷಣೆಯನ್ನು ಮೊದಲೇ ಮಾಡಲಾಗಿತ್ತು. ಇಲ್ಲಿ ಪ್ರಾಮಾಣಿಕತೆ ಎಂದರೆ ಬಿಜೆಪಿಗೆ ನಿಷ್ಠೆ ಎಂದು ಬೇರೆ ಹೇಳಬೇಕಾಗಿಲ್ಲ. ನಲವತ್ತು ಜಿಲ್ಲೆಗಳ ಜಿಲ್ಲಾಧಿಕಾರಿಗಳು ಮತ್ತು ಪೋಲೀಸ್ ಅಧಿಕಾರಿಗಳನ್ನು ಬಿಜೆಪಿ ಅಧಿಕಾರಕ್ಕೆ ಬಂದ ಕೂಡಲೇ ವರ್ಗ ಮಾಡಿತು. ಇತರ ಅಧಿಕಾರಿಗಳ ವಿಷಯದಲ್ಲೂ ಈ ವರ್ಗಾವರ್ಗಿ. ಹೀಗೆ ಬಿಜೆಪಿಯ ನಾಯಕಮಣಿಗಳ ತಲೆ ತಿರುಗಿದಂತೆ ಆಯಿತು ಎಂಬುದನ್ನು ಬೇರೆ ಹೇಳಬೇಕಾಗಿಲ್ಲ. ಬಾಬ್ರಿ ಮಸೀದಿಯ ನಾಶಕ್ಕೆ ಅನುಕೂಲಕರ ವಾತಾವರಣ ಸೃಷ್ಟಿಸಿಕೊಳ್ಳಲು ಸಹ ಬಿಜೆಪಿ ಸರ್ಕಾರ ಈ ವರ್ಗಾವರ್ಗಿ ತಂತ್ರ ಬಳಸಿತು.

ಪ್ರಜಾಪ್ರಭುತ್ವದ ಹರಾಜು

ಸಂವಿಧಾನಕ್ಕೆ ವಿರುದ್ಧವಾಗಿ ಡಿಸೆಂಬರ್ 6 ರಂದು ಬಿಜೆಪಿ ಸರ್ಕಾರ ಹೇಗೆ ನಡೆದುಕೊಂಡಿತೊ ಅದೇ ತರಹದಲ್ಲಿ ಅದು ವಿಧಾನಸಭಾ ಮಂಡಲ ಕಾರ್ಯಕಲಾಪಗಳಲ್ಲೂ ನಡೆದುಕೊಂಡಿತು. ವಿಧಾನಸಭೆಯ ಸಭಾ ಪತಿ ಕೇಸರಿನಾಥ್ ತ್ರಿಪಾಠಿಯವರು ಮುಖ್ಯಮಂತ್ರಿಗಳಿಗೆ ಪತ್ರ ಬರೆದು ಸಂವಿಧಾನದ ಪ್ರಕಾರ ಕನಿಷ್ಠ ವರ್ಷದಲ್ಲಿ 90ದಿನಗಳು ವಿಧಾನ ಸಭಾ ಕಾರ್ಯಕಲಾಪ ನಡೆಯಬೇಕು. ಆದರೆ ನಾನು ಬರೀ ಮೂವತ್ತೆಂಟು ದಿನಗಳ ಕಾರ್ಯಕಲಾಪ ಮಾತ್ರ ನಡೆಸಿದ್ದೇವೆ ಮೂರು ಸಾವಿರಕ್ಕೂ ಹೆಚ್ಚಿಗೆ ಉತ್ತರ ನೀಡಲು ಹೇಗೆ ಸಾಧ್ಯವಾಗುತ್ತದೆ.ಎಂದು ಕೇಳಬೇಕಾಯಿತು.

ಎನ್.ಡಿ. ತಿವಾರಿ ಸರ್ಕಾರದ ಅಭಿವೃದ್ಧಿ ಯೋಜನೆಗಳು, ಮುಲಾಯಂಸಿಂಗ್ ಯಾದವರ ಸರ್ಕಾರ ತಂದ 237 ಅಭಿವೃದ್ಧಿ ಯೋಜನೆಗಳನ್ನು ಕಲ್ಯಾಣ ಸಿಂಗರ ಸರ್ಕಾರ ಕೈಬಿಟ್ಟಿತು.

ಖಾಸಗೀಕರಣ

ಎಲ್ಲಿ ಬಿಜೆಪಿ ನಾಯಕರಿಗೆ ಲಾಭ

ರಾಮರಾ

ತೈಲ ಬಿಕ್ಕಟ್ಟು : ಕೇಂದ್ರ ಸರ್ಕಾರದ ನಿರ್ಲಕ್ಷ್ಯವೇ ಕಾರಣ

ಕಳೆದ 3-4 ವರ್ಷಗಳಲ್ಲಿ ಪೆಟ್ರೋಲಿಯಂ ಮತ್ತು ಪೆಟ್ರೋಲಿಯಂ ಉತ್ಪನ್ನಗಳ ಉತ್ಪಾದನೆ ಸ್ಥಗಿತಗೊಂಡಿದೆ. 1989-90 ರಲ್ಲಿ ಆಂತರಿಕ ಬೇಡಿಕೆಯ ಶೇ. 70 ರಷ್ಟನ್ನು ಆಂತರಿಕ ಉತ್ಪಾದನೆಯಿಂದ ಪೂರೈಸಲು ಸಾಧ್ಯವಾಗಿದ್ದು 1993 ರಲ್ಲಿ ಆಂತರಿಕ ಬೇಡಿಕೆಯ ಶೇ. 47 ರಷ್ಟನ್ನ ಮಾತ್ರ ಆಂತರಿಕ ಉತ್ಪಾದನೆಯಿಂದ ಪೂರೈಸಲು ಸಾಧ್ಯವಾಗಿದೆಯೆಂದರೆ ಆಂತರಿಕ ಬೇಡಿಕೆ ಮತ್ತು ಆಂತರಿಕ ಪೂರೈಕೆಯ ನಡುವಿನ ಅಂತರದ ಒಂದು ಕಲ್ಪನೆ ಬರುತ್ತದೆ. ಇದು ಭಾರತ ತೈಲ ಉತ್ಪಾದಿಸುವ ಇತರ ದೇಶಗಳ ಮೇಲೆ ಎಷ್ಟು ಅವಲಂಬಿಯಾಗುತ್ತಿದೆ ಎಂಬುದರ ಚಿತ್ರಣವನ್ನೂ ನೀಡುತ್ತದೆ.

ಭಾರತದ ತೈಲ ಕ್ಷೇತ್ರ ಸಾರ್ವಜನಿಕ ಉದ್ದಿಮೆಗಳು ಮತ್ತು ಜಂಟಿ ವಲಯದ ಉದ್ದಿಮೆಗಳನ್ನೊಳಗೊಂಡಿದೆ. ಇವು ತೈಲ ಶೋಧ ಮತ್ತು ಉತ್ಪಾದನೆಯಲ್ಲಿ ತೊಡಗಿವೆ. ಈ ಕಂಪನಿಗಳಲ್ಲಿ ಹಲವು ಅಂತರ್‌ರಾಷ್ಟ್ರೀಯ ಮನ್ನಣೆ ಪಡೆಯುವಷ್ಟು ತಾಂತ್ರಿಕತೆ ಮತ್ತು ತಜ್ಞತೆಯನ್ನು ಪಡೆದಿವೆ. ಈಗ ಉದಾರೀಕರಣದ ಹೆಸರಿನಲ್ಲಿ ಭಾರತ ಸರ್ಕಾರ ಕೈಗೊಳ್ಳುತ್ತಿರುವ ಹಲವು ಕ್ರಮಗಳು ಸಾರ್ವಜನಿಕ ವಲಯದ ಈ ಕಂಪನಿಗಳ ಮಹತ್ವವನ್ನೇ ಕಡಿಮೆ ಮಾಡುತ್ತವೆ. ವಾರ್ಷಿಕ ಆಯ-ವ್ಯಯದಲ್ಲಿ ಕಡಿಮೆ ಹಣದ ಲಭ್ಯತೆ, ಬಹುರಾಷ್ಟ್ರೀಯ ಕಂಪನಿಗಳಿಗೆ ಈ ವಲಯದಲ್ಲಿ ಪ್ರವೇಶ, ರಾಷ್ಟ್ರೀಯ ತೈಲ ಕಂಪನಿಗಳ ಶೇರು ಮಾರಾಟ. (ವಿದೇಶೀ ಕಂಪನಿಗಳಿಗೆ) ಇವು ಅಂತಹ ಕ್ರಮಗಳು.

ಸರ್ಕಾರ ಈ ಕ್ರಮಗಳನ್ನು ಸಮರ್ಥಿಸಿಕೊಳ್ಳುತ್ತಿದೆ. ಇದರಿಂದ ಉತ್ಪಾದನೆ ಹೆಚ್ಚಾಗುತ್ತದೆ, ಸ್ಪರ್ಧೆ ಹೆಚ್ಚುತ್ತದೆ, ಹೊಸ ತಂತ್ರಜ್ಞಾನ ದೇಶಕ್ಕೆ ದೊರೆಯುತ್ತದೆ, ವಿದೇಶೀ ವಿನಿಮಯದ ಉಳಿತಾಯವಾಗುತ್ತದೆ ಎಂದೆಲ್ಲ ವಾದಗಳನ್ನು ಅದು ಹೂಡುತ್ತದೆ. ಆದರೆ ನಮ್ಮದೇಶದ ತೈಲ ವಲಯದ ನಿಜವಾದ ಸಮಸ್ಯೆಗಳೇನು? ಖಾಸಗೀಕರಣವೇ ಇದಕ್ಕೆ ಉತ್ತರವೇ?

ತಜ್ಞರ ಪ್ರಕಾರ ನಮ್ಮ ಇಂದಿನ ಈ ಬಿಕ್ಕಟ್ಟಿಗೆ ಕಾರಣ ಬೇಡಿಕೆ ಯದ್ವಾ ತದ್ವಾ ಬೆಳೆಯುದಂತೆ ಕ್ರಮ ಕೈಗೊಳ್ಳದೆ ಇರುವುದು. ಆಂತರಿಕ ಉತ್ಪಾದನಾ ಸಾಮರ್ಥ್ಯದ ಕೆಟ್ಟ ನಿರ್ವಹಣೆ , ಸರ್ಕಾರದ ಉದ್ದೇಶಪೂರ್ವಕ ನಿರ್ಲಕ್ಷ್ಯ ಮತ್ತು ಆಮದಿನ ಮೇಲಿನ ಹಾನಿಕಾರಕ ಶರತ್ತುಗಳು. ಈ ಮೇಲಿನವುಗಳನ್ನು ಸ್ವಲ್ಪ ವಿಶ್ಲೇಷಿಸಿದರೆ ಸಮಸ್ಯೆಯ ವ್ಯಾಪ್ತಿ ಮತ್ತು ಅದರ ಕಾರಣಗಳು ಸ್ಪಷ್ಟವಾಗುತ್ತವೆ.

ತೈಲ ಉತ್ಪಾದನೆಯಲ್ಲಿ ಏಳು-ಬೀಳು

ಕಳೆದೆರಡು ಯೋಜನಾ ಅವಧಿಗಳತ್ತ ಗಮನ ಹರಿಸಿದರೆ 1980-90 ರ ದಶಕದಲ್ಲಿ ತೈಲ ಉತ್ಪಾದನೆ ಸತತವಾಗಿ ಏರಿದ್ದು ಕಂಡು ಬರುತ್ತದೆ. ಏಳನೇ ಯೋಜನೆಯ ಅವಧಿಯಲ್ಲಿ ಹೆಚ್ಚಿನ ಹಣಕಾಸು ದೊರೆತದ್ದರಿಂದ ತೈಲ ಶೋಧ ಪರಿಣಾಮಕಾರಿಯಾಗಿ ಕೃಷ್ಣಾ, ಗೋದಾವರಿ, ಕಾವೇರಿ ಕಣಿವೆಗಳು, ತ್ರಿಪುರಾ, ಕುಚ ಮತ್ತು ಮುಂಬೈಗಳಲ್ಲಿ ಹೊಸ ತೈಲ ಭಾವಿಗಳನ್ನು ಸ್ಥಾಪಿಸುವುದು ಸಾಧ್ಯವಾಯಿತು. ಆದರೆ 1990 ರ ನಂತರ ಯಾವುದೇ ಹೊಸ ಶೋಧ ಮಾಡಲಿಲ್ಲ. ಇದಲ್ಲದೆ ಇರುವ ಕೆಲವು ಉತ್ಪಾದನಾ ಘಟಕಗಳನ್ನು ಮುಚ್ಚಲಾಯಿತು. ನಮ್ಮಲ್ಲೇ ಉತ್ಪನ್ನವಾಗುವ ಕಚ್ಚಾ ತೈಲವೆಲ್ಲವನ್ನು ನಾವು ಸಂಸ್ಕರಿಸುವುದೂ ಇಲ್ಲ. ಕಚ್ಚಾ ತೈಲವನ್ನು ನೀಡಿ ಸ್ಸ್ಕರಿಸಿದ ತೈಲ ಪಡೆಯುತ್ತೇವೆ ಆಗಲೇ ಹೇಳಿದಂತೆ ಆಂತರಿಕ ಬೇಡಿಕೆಯನ್ನು ಹತೋಟಿಯಲ್ಲಿ ಸಾಧ್ಯವಾಗಿಲ್ಲ. ಇವೆಲ್ಲ ಇಂದಿನ ಸಮಸ್ಯೆಯಲ್ಲಿ ಪರ್ಯವಸಾನಗೊಂಡಿವೆ.

ಹಾಗಾದರೆ ಇರುವ ಸೌಲಭ್ಯಗಳೆಲ್ಲವನ್ನು ಬಳಸಿದರೆ ನಮ್ಮ ಬೇಡಿಕೆಗಳನ್ನು ಪೂರೈಸುವ ಸಾಮರ್ಥ್ಯ ನಮಗಿದೆಯೇ ಎಂಬ ಪ್ರಶ್ನೆ ಏಳುತ್ತದೆ. ಭಾರತೀಯ ಪೆಟ್ರೋಲಿಯಂ ಸಂಸ್ಥೆ ತಯಾರಿಸಿರುವ ದಸ್ತಾವೇಜಿನ ಪ್ರಕಾರ ಇಂದಿನ ಹಲವು ಸಮಸ್ಯೆಗಳು ಸರ್ಕಾರದ ನಿರ್ಲಕ್ಷ್ಯದಿಂದಾಗಿ ಉಂಟಾಗಿವೆ. ಉದಾಹರಣೆಗೆ ಒಎನ್‌ಜಿಸಿ ಬಾಂಬೆ ಹೈನಲ್ಲಿನ ಹಲವು ತೈಲಬಾವಿಗಳನ್ನು ಮುಚ್ಚುವಂತೆ ಒತ್ತಡ ಹೇರಲಾಯಿತು. ಬಂಗಾಳದಲ್ಲಿ ತೈಲ ಪತ್ತೆಯಾದರೂ ಒಎನ್‌ಜಿಸಿ ತನ್ನ ಶೋಧಕಾರ್ಯಗಳನ್ನೇ ಕೈಬಿಡುತ್ತಿರುವುದು 1990 ರಿಂದ ಕಂಡು ಬಂದಿದೆ.

ಉತ್ಪಾದನಾ ಚಟುವಟಿಕೆಗೆ ಅವಶ್ಯಕವಾದುದೆಂದರೆ ನಿರಂತರ ತಾಂತ್ರಿಕ ಉನ್ನತಿ. ಶೇ. 30 ರಷ್ಟು ಅಶ... ವನ್ನು ಅದನ್ನು ಪಡೆವ ತಂತ್ರಜ್ಞಾನವಿಲ್ಲ... ರುವುದರಿಂದ ಉಳಿಯಲು ಬಿಡಲಾಗುತ್ತದ... ಹಾಗೆಯೇ ಹೊಸ ಬಾವಿಗಳ ಪರೀಕ್ಷ... ತಂತ್ರಜ್ಞಾನವನ್ನು ಸುಧಾರಿಸುವ ಅವಶ್ಯಕ... ಇದೆ. ಇದಲ್ಲದೆ ರಿಫೈನರಿಗಳ ರಚ... ಯನ್ನು ಮಾಡಬೇಕಾಗುತ್ತದೆ. ರಿಫೈನರಿಗಳ... ಸೂಕ್ತ ತಂತ್ರಜ್ಞಾನ, ಮತ್ತು ಸಾಮರ್ಥ್ಯ... ದರೆ ಇಲ್ಲಿನ ಕಚ್ಚಾ ತೈಲವನ್ನು ನಾವೇ ಸಂ... ರಿಸಬಹುದು. ಇವೆಲ್ಲಕ್ಕೂ ಸರ್ಕಾರದ ನೇ... ಹಸ್ತಕ್ಷೇಪದ ಅವಶ್ಯಕತೆ ಇದೆ. ಖಾಸಗೀ ರಾ... ಕ್ಕಾಗಿ ಬರುವ ಬಂಡವಾಳಗಾರರಿಗೆ ಈ ಅ... ವೃದ್ಧಿಯಲ್ಲಿ ಆಸಕ್ತಿ ಇರಲು ಸಾಧ್ಯವಿಲ್ಲ.

ಬೇಡಿಕೆಯ ನಿರ್ವಹಣೆಯಲ್ಲೇ ಕುಂದು ಕೊರತೆಗಳು

1992-93 ರಲ್ಲಿ ಪೆಟ್ರೋಲಿ...

ಹೊಸ ಆರ್ಥಿಕ ನೀತಿಯ ಹೆಸರಿನಲ್ಲಿ ಸಾರ್ವಜನಿಕ ಉದ್ದಿಮೆಗಳ ಮೇಲೆ ತೀವ್ರ ಆಕ್ರಮಣ ನಡೆಯುತ್ತಿದೆ. ಈ ಉದ್ದಿಮೆಗಳನ್ನು ಹೀಗೆಳೆಯುವ ಎಲ್ಲ ಪ್ರಯತ್ನಗಳನ್ನು ಸರ್ಕಾರ ಮಾಡುತ್ತಿದೆ. ಇಂತಹ ಕೆಲವು ಪ್ರಯತ್ನಗಳನ್ನು 'ಐಕ್ಯರಂಗ' ಈ ಲೇಖನ ಮಾಲೆಯಲ್ಲಿ ಮುಂದಿನ ಕೆಲವು ಸಂಚಿಕೆಗಳಲ್ಲಿ ಪ್ರಕಟಿಸಲಾಗುತ್ತಿದೆ. ತೈಲ ಬಿಕ್ಕಟ್ಟಿನ ಬಗೆಗಿನದು ಮೊದಲ ಲೇಖನ.

...ದ ಸುಖ

...ರಿ ಶಿರ್ಚಿನಲ್ಲಿ ಖಾಸಗೀ ...ಯಿತು. ಆಟೋ ಟ್ರಾಕ್ಟರ್ ...ಬು ಸರ್ಕಾರಿ ಕಾರ್ಖಾನೆ ...0 ಕೋಟಿ ರೂಪಾಯಿ ...ವರಿಗೆ ಮಾರಲಾಯಿತು. ...ಖ ವಿದ್ಯುತ್ ಯೋಜನೆ ...ಲ್ಲಿ ಹಣಕಾಸಿನ ಅಭಾವ ...ತ್ತು. 1991 ರ ಜುಲೈನಲ್ಲಿ ...ರಗೊಂಡ ಈ ಯೋಜನೆ ...ಅಧಿಕ ವಿದ್ಯುತ್ ಉತ್ಪಾ... ರೂಪಾಯಿಗಳ ಲಾಭ ...ದನ್ನು ಎನ್.ಟಿ.ಪಿ.ಸಿಗೆ ...ಪಾಯಿಗಳಿಗೆ ಮಾರಲಾ...

...ನವಿರೋಧಿ ...ಮಗಳು

...ಸರ್ಕಾರ ಬಡಜನತೆಯ ...ಸಾರ್ವಜನಿಕ ವಿತರಣಾ ...ದುಗೆಡವಿ ಅದರ ಅಂತರ್‌ ...ಮಾರಲು ಬಳಸಿಕೊಂ... ...ಕಾರ್ಪೋರೇಷನ್‌ಗೆ 32 ...ರುಗಳ ಸಾಲ ನೀಡಲಾ... ...ರ್ಪೋರೇಷನ್ ಪ್ರತಿ ದಿನ ...ತ್ತು ಅಲಹಾಬಾದ್ ನಗ... ...0 ಲಕ್ಷ ರೂಪಾಯಿಗಳ...

...: ಅತ್ಯಂತ ...ರಿಸ್ಥಿತಿಯಲ್ಲಿ

...ತೀ ಶಿಕ್ಷಣ ವ್ಯವಸ್ಥೆಯನ್ನೇ ...ತು. ಆಡಳಿತ, ಪಠ್ಯಕ್ರಮ ...ರ್ಕಾರ ಮನಸೋ ಇಚ್ಛೆ ...ನಡೆಸಿತು. ವಿಶ್ವವಿದ್ಯಾನಿ... ...ಲಪತಿಗಳನ್ನು ಬೇಕಾಬಿ... ...ಯಿಸಲಾಯಿತು. ಇದು ...ಲಯದ ವ್ಯವಸ್ಥೆಯೇ...

ಹಾಳಾಗುವಂತೆ ಮಾಡಿತು. ಪರೀಕ್ಷೆಗಳಲ್ಲಿ ನಕಲು ಮಾಡುವವರ ವಿರುದ್ಧ ಕ್ರಮ ಕೈಗೊಳ್ಳುವಲ್ಲಿ ಮುಗ್ದರನ್ನು ಹಿಂಸಿಸಲಾಯಿತು.

ಮಸೀದಿ ನಾಶ: ಅತ್ಯಂತ ಹೇಯ ಕೃತ್ಯ

ಮಸೀದಿಯ ನಾಶಕ್ಕೆ ತಯಾರಿಯನ್ನು ಅಕ್ಟೋಬರ್ 1, 1991 ರಿಂದಲೇ ಪ್ರಾರಂಭಿಸಲಾಯಿತು. ಕಲ್ಯಾಣ್ ಸಿಂಗರು ಅವಸರದಲ್ಲಿ ಪಕ್ಷಕ್ಕೆ ಅನುಕೂಲವಾಗುವ ವಾತಾವರಣವನ್ನು ಸೃಷ್ಟಿಸಿಕೊಂಡರು. ಹೊರಗೆ ಸಂವಿಧಾನ ರಕ್ಷಣೆ ಮತ್ತು ಸುಪ್ರೀಂ ಕೋರ್ಟಿನ ನಿರ್ದೇಶನದಂತೆ ನಡೆವ ಭರವಸೆ ಎರಡನ್ನೂ ನೀಡಿದರು. ಆದರೆ ಒಳಗಿನಿಂದ ಮಸೀದಿಯ ನಾಶಕ್ಕೆ ಎಲ್ಲ ತಯಾರಿ ನಡೆಸಿದರು. ಕರಸೇವಕರಿಗೆ ಸರ್ಕಾರ ಎಲ್ಲ ತರಹದ ಅನುಕೂಲಗಳನ್ನು ನೀಡಿತು. ಅವರ ವಿರುದ್ಧ ಬಲಪ್ರಯೋಗ ಮಾಡುವುದಿಲ್ಲ ವೆಂದು ಭರವಸೆ ನೀಡಲಾಯಿತು. ಡಿಸೆಂಬರ್ 6,1992 ರಂದು ಬಾಬ್ರಿ ಮಸೀದಿಯನ್ನು ಸಂಪೂರ್ಣ ನಾಶಮಾಡಲಾಯಿತು. ಕಲ್ಯಾಣ ಸಿಂಗರು ರಾಜೀನಾಮೆ ನೀಡಿದರು. ತಮ್ಮ ಕೆಲಸವಾಗುವವರೆಗೆ ಅಧಿಕಾರದಲ್ಲಿದ್ದುಕೊಂಡು ಅಧಿಕಾರದ ದುರುಪಯೋಗ ಪಡಿಸಿಕೊಂಡು ಕೆಲಸವಾದ ಕೂಡಲೇ ರಾಜೀನಾಮೆ ನಾಟಕವಾಡಿದರು.

ಈಗ ಜನಾದೇಶ ಯಾತ್ರೆಯಲ್ಲಿ ಮತ್ತೆ ಉತ್ತಮ ಆಡಳಿತದ ಮಾತನಾಡಿದ್ದಾರೆ ಬಿಜೆಪಿಯ ನಾಯಕ ಮಣಿಗಳು. ಆದರೆ ಕಲ್ಯಾಣ್‌ಸಿಂಗರು ನಡೆಸಿದ ಆಡಳಿತ ವೈಖರಿ ನಮ್ಮ ಮುಂದಿದೆ. ಬಿಜೆಪಿಯು ಅಧಿಕಾರಕ್ಕೆ ಬರುವುದರಿಂದ ಉತ್ತರ ಪ್ರದೇಶಕ್ಕೆ ಮಾತ್ರವಲ್ಲ ಇಡೀ ದೇಶಕ್ಕೇ ಗಂಡಾಂತರವಿದೆ. ದೇಶದ ಪ್ರಜಾಸತ್ತಾತ್ಮಕ, ಜಾತ್ಯಾತೀತ, ದೇಶಪ್ರೇಮಿ ಜನತೆ ಈ ಸವಾಲನ್ನು ಎದುರಿಸಬೇಕಾಗಿದೆ.

ಕೋಷ್ಟಕ

ವರ್ಷ	ಪೆಟ್ರೋಲಿಯಂ ಮತ್ತು ಅದರ ಉತ್ಪನ್ನಗಳ ಬಳಕೆ	ಕಚ್ಚಾತೈಲ ಉತ್ಪಾದನೆ	ಕಚ್ಚಾತೈಲ ಆಮದು
	(ಸಾವಿರ ಟನ್ನುಗಳಲ್ಲಿ)		
1970-71	17912	6822	1067.2
1975-76	22447	8448	10517.6
1979-80	29883	11766	21875.3
1985-86	40862	30168	35516.5
1987-88	46416	30357	29863.1
1988-89	50092	32040	28628.0
1989-90	54095	34087	40895.0
1990.91	54772	33021	6118.4

...ನ್ನಗಳ ಬಳಕೆ 586.7 ಲಕ್ಷ ಟನ್ನುಗ... 300 ಲಕ್ಷ ಟನ್ನುಗಳಷ್ಟು ತೈಲ ...ನ 9,000 ಕೋಟಿ ರೂಪಾಯಿಗಳನ್ನು ...ಶೀ ವಿನಿಮಯದಲ್ಲಿ ತೆತ್ತು ಆಮದು ...ಕೊಳ್ಳಬೇಕಾಯಿತು. ನಮ್ಮ ಶಕ್ತಿ... ...ಲಗಳಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ...ು ಹೆಚ್ಚುತ್ತಲೇ ಇವೆ. ಇಲ್ಲಿ ಇಂಧನ ...ವನ್ನು ಅವುಗಳನ್ನು ಪರಿಣಾಮಕಾರಿ ...ಬಳಸುವ ಪ್ರಯತ್ನಗಳ ಅವಶ್ಯಕತೆ ... ಈ ಪ್ರಯತ್ನಗಳಿಂದಾಗಿ ಬಳಕೆಯ ...ಣವನ್ನು ನಿಯಂತ್ರಿಸುವುದು ಸಾಧ್ಯ. ...ವಸ್ತುಗಳಾದ ಡಿಸೇಲ್ ಮತ್ತು ಸೀಮೆ... ...ಳ ಬಳಕೆ ಶೇ. 50 ರಿಂದ ಶೇ. 60 ...ದೆ. ಆದರೆ ಒಟ್ಟು ತೈಲಗಳ ಬಳಕೆ ... ಇವುಗಳ ಪಾಲು ಅರ್ಧಕ್ಕೂ ಇದೆ. ಇವು... ...ಸಾಯದ ದಶಕದ ದೊರೆತದರಿಂದ...

ಇವುಗಳ ಬೆಲೆ ಕಡಿಮೆ ಇತ್ತು. ಆದರೆ ಶ್ರೀಮಂತರು ಇವನ್ನು ಅದೇ ಕಡಿಮೆ ಬೆಲೆಗೆ ಕೊಳ್ಳಲು ಅವಕಾಶವಿರಬಾರದು. ಉದಾಹರಣೆಗೆ ಡೀಸೆಲ್.

ಇಂಧನ-ಸಮರ್ಥ ಎಂಜಿನ್‌ಗಳನ್ನು ರಚಿಸುವತ್ತ ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯಗಳು ಸಾಕಷ್ಟು ಪ್ರಮಾಣದಲ್ಲಿ ಆಗಿಲ್ಲ. ಪೆಟ್ರೋಲಿಯಂ ಸಾಕಷ್ಟು ಪ್ರಮಾಣದಲ್ಲಿ ಆಗಿಲ್ಲ ಪೆಟ್ರೋಲಿಯಂ ಇತರ ಇಂಧನ ಮೂಲಗಳನ್ನು ಬಳಸುವ ಪ್ರಯತ್ನಗಳಾಗಬೇಕು. ಇವೆಲ್ಲ ಸುಲಭ ಸಾಧ್ಯವಲ್ಲ. ಆದ್ದರಿಂದಲೇ ಸರ್ಕಾರದ ಹಸ್ತಕ್ಷೇಪ ಅಂದರೆ ನೆರವು ಅವಶ್ಯವಾಗುತ್ತದೆ.

ಕಳೆದ ಕೆಲವು ವರ್ಷಗಳಲ್ಲಿ ರೂಪಾಯಿಯ ಅಪಮೌಲ್ಯೀಕರಣದಿಂದ ಆಮದಿನ ಬೆಲೆಯು ತೀವ್ರವಾಗಿ ಏರಿದೆ. ಸರಿ...

ಯಾದ ತೈಲ ಆಮದು ನೀತಿಯನ್ನು ಸಹ ಸರ್ಕಾರ ರೂಪಿಸಿಲ್ಲ. ಉದಾಹರಣೆಗೆ ಇರಾಕ್ ಯುದ್ಧದ ಸಮಯದಲ್ಲಿ ಬ್ಯಾರೆಲ್ ಒಂದಕ್ಕೆ 30 ಡಾಲರುಗಳನ್ನು ನೀಡಿ ತೈಲವನ್ನು ಕೊಳ್ಳಬೇಕಾಯಿತು. ಸರ್ಕಾರ ಸರಿಯಾದ ನೀತಿ ರೂಪಿಸಿ ಕ್ರಮಕ್ಕೆಗೊಂಡಿದ್ದರೆ ಆಗಿನ ಹಾನಿಯನ್ನು ತಡೆಗಟ್ಟಲು ಸಾಧ್ಯವಿತ್ತು. ಮುಖ್ಯವಾಗಿ ಸ್ವಾವಲಂಬನೆಯ ಮೇಲೆ ಒತ್ತು ನೀಡದ ನಮ್ಮ ಈ ನೀತಿಗಳಿಂದಾಗಿ ಇಂದಿನ ಸಮಸ್ಯೆಗಳು ಹುಟ್ಟಿಕೊಂಡಿವೆ.

ಪೆಟ್ರೋಲಿಯಂ ಇಂದಿನ ಆಧುನಿಕ ಆರ್ಥಿಕತೆಯ ಎಲ್ಲ ರಂಗಗಳಲ್ಲಿ ಅವಶ್ಯ ಬೇಕಾದಂತಹ ವಸ್ತು. ಅಂತರ್ರಾಷ್ಟ್ರೀಯ ಆರ್ಥಿಕದಲ್ಲೂ ಇದಕ್ಕೆ ಬಹಳ ಮಹತ್ವವಿದೆ. ನಮ್ಮ ಪರಾವಲಂಬನೆ ನಮ್ಮನ್ನು ಶತಮಾನಗಳಷ್ಟು ಹಿಂದೆ ದೂಡಬಹುದು. ನಮ್ಮ ಜನರಿಗೆ ಅಸಾಮಾನ್ಯ ಆರ್ಥಿಕ ಸಂಕಷ್ಟಗಳನ್ನು ಇದರ ಅಲಬ್ಯತೆ ತರಬಹುದು. ಇಂತಹ ಮುಖ್ಯ ವಸ್ತುವಾದ್ದರಿಂದಲೇ ಇದರಲ್ಲಿ ನಮಗೆ ಸ್ವಾವಲಂಬನೆ ಬಹಳ ಮುಖ್ಯ. ಈ ಕಾರಣದಿಂದಲೇ ಸರ್ಕಾರ ಉದಾರೀಕರಣದ ಹೆಸರಿನಲ್ಲಿ ಈ ಕ್ಷೇತ್ರಕ್ಕೆ ಬಹುರಾಷ್ಟ್ರೀಯ ಕಂಪನಿಗಳಿಗೆ ಪ್ರವೇಶ ನೀಡಿದರೆ ಈ ವಲಯವನ್ನು ನಿರ್ಲಕ್ಷಿಸಿದರೆ ಅದನ್ನು ಅಪಾಯದ ಗಂಟೆಯೆಂದು ತಿಳಿಯಬೇಕಾಗುತ್ತದೆ.

ಭಾರತವೆಂಬ ತಿಪ್ಪೆಗುಂಡಿಗೆ ಇನ್ನಷ್ಟು ಕಸ

ಆಮದು ಉದಾರೀಕರಣದ ಪರಿಣಾಮ ಇದು. ಹಲವು ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಅಲ್ಲಿನ ಕಾನೂನುಗಳು ಕೆಲವು ಕಡಿಮೆ ಗುಣಮಟ್ಟದ ವಸ್ತುಗಳನ್ನು ಮಾರಗೊಡುವುದಿಲ್ಲ. ಬಂಡವಾಳಶಾಹಿಯ ಅನಾರೋಗ್ಯಕರ ಸ್ಪರ್ಧೆಯಿಂದಾಗಿ ಕೆಲವು ವಸ್ತುಗಳನ್ನು ಅತಿಯಾಗಿ ಉತ್ಪಾದಿಸಲಾಗುತ್ತದೆ. ಇವುಗಳಿಗೆ ಆದೇಶದೊಳಗೆ ಮಾರುಕಟ್ಟೆಯೇ ಇರುವುದಿಲ್ಲ. ಇಂತಹ ಎಲ್ಲ ವಸ್ತುಗಳನ್ನು ಮೂರುಕಾಸಿಗೆ ಭಾರತಕ್ಕೆ ಮಾರುತ್ತಿದ್ದಾರೆ. ಅಲ್ಲಿನ ಬಂಡವಾಳಿಗರಿಗೆ ಸಿಗುವುದೆಲ್ಲ ಲಾಭವೇ. ಈಗಾಗಲೇ ಭಾರತದ 31 ಉದ್ದಿಮೆಗಳು ಈ ತರಹದ ಸುರಿತದ ವಿರುದ್ಧ ದೂರಿವೆ. ಉದಾರೀಕರಣವನ್ನು ಹರ್ಷದಿಂದ ಸ್ವಾಗತಿಸಿದ್ದ ನಮ್ಮ ಕೆಲವು ಬಂಡವಾಳಿಗರಾದರೂ ಈಗ ಅದರ ಪರಿಣಾಮಗಳನ್ನು ಅನುಭವಿಸತೊಡಗಿದ್ದಾರೆ. ಆದ್ದರಿಂದಲೇ ಉದಾರೀಕರಣದ ವಿರುದ್ಧವೂ ಕೆಲವು ಬಂಡವಾಳಿಗರಾದರೂ ದನಿಯೆತ್ತತೊಡಗಿದ್ದಾರೆ. ಕೆಟ್ಟ ಮೇಲೆ ಬುದ್ಧಿ ಬಂತೆ?

ಇನ್ನೂ ಹೆಚ್ಚು ಆಮದು ಉದಾರೀಕರಣ

ಬ್ಯಾಂಕ್ ಫಂಡ್‌ಗಳ ಗುಲಾಮನಾಗಿರುವ ಭಾರತ ಸರ್ಕಾರ ಇನ್ನೂ ಶೇ. 40 ರಷ್ಟು ಆಮದು ಸುಂಕದಲ್ಲಿ ಕಡಿತ ಮಾಡಲು ಮುಂದೆ ಬಂದಿದೆ. ಬಂಡವಾಳ ವಸ್ತುಗಳು ಕಚ್ಚಾ ಸಾಮಗ್ರಿ ಮತ್ತು ಅರೆ ಉತ್ಪಾದಿಸಿದ ವಸ್ತುಗಳ ಮೇಲೆ ಈ ಕಡಿತವನ್ನು ಮಾಡಲಾಗುವುದಂತೆ. ಇದಲ್ಲದೇ ಆಗಲೇ ಆಮದು ಸುಂಕ ಕಡಿತ ಮಾಡಿರುವ ವಸ್ತುಗಳ ಮೇಲೆ ಮತ್ತೆ ಶೇ. 25 ರಷ್ಟು ಕಡಿತ ಮಾಡಲಾಗುವುದಂತೆ.

ಡಂಕೆಲ್ ಪ್ರಸ್ತಾವಗಳ ಮೇಲೆ ಮಾತುಕತೆ ನಡೆಸುತ್ತಿರುವ ಭಾರತೀಯ ನಿಯೋಗ ಈ ಪ್ರಸ್ತಾವಗಳನ್ನು 'ಗ್ಯಾಟ್'ನ ಮುಂದಿರಿಸಿದೆ. ಆಗಲೇ ತಿಪ್ಪೆಗುಂಡಿಯಾಗುತ್ತಿರುವ ಭಾರತ ಇನ್ನೇನಾಗಬಹುದು?

ಸಾಯುವವರಿಗೆ ಕೊಲೆಗಾರನ ಭರವಸೆ

ಏನೆಂದು ಗೊತ್ತೆ? "ನೀವು ಸಾಯುವುದಿಲ್ಲ" ಎಂದು! ವಿಚಿತ್ರವೆನಿಸುತ್ತದೆಯೇ?

ಉದಾರೀಕರಣದ ಕ್ರಮಗಳಿಂದಾಗಿ ಸಣ್ಣ ಕೈಗಾರಿಕೆಗಳ ಮೇಲೆ ಯಾವುದೇ ದುಷ್ಪರಿಣಾಮ ಉಂಟಾಗುವುದಿಲ್ಲ ಎಂದು ಕೇಂದ್ರ ಕೃಷಿ ಮತ್ತು ಗ್ರಾಮೀಣ ಕೈಗಾರಿಕೆಗಳ ಮಂತ್ರಿ ಶ್ರೀ ಅರುಣಾಚಲಂ ಈ ಮಾತನ್ನು ಹೇಳಿದ್ದಾರೆ.



ನರಸಿಂಹರಾವ್ ಸರಕಾರದ 28ನೇ ತಿಂಗಳಲ್ಲಿ

ಐ.ಎಂ.ಎಫ್.-ವಿಶ್ವಬ್ಯಾಂಕ್ ನಿರ್ದೇಶಿತ ಹೊಸ ಆರ್ಥಿಕ ನೀತಿಗಳು ನಮ್ಮ ದೇಶದ ಬೆನ್ನೆಲುಬಾಗಿರುವ ಸಣ್ಣ ಮತ್ತು ಗುಡಿಕೈಗಾರಿಕೆಗಳು ಮತ್ತು ಸಾರ್ವಜನಿಕ ವಲಯದ ಬೃಹತ್ ಕೈಗಾರಿಕೆಗಳು ಇವೆರಡನ್ನೂ ಮುಗಿಸುವ ಉದ್ದೇಶ ಹೊಂದಿವೆ. ಉದಾರೀಕರಣದ ಹಲವು ಕ್ರಮಗಳು; ಉದಾಹರಣೆಗೆ: ಆಮದು ಉದಾರೀಕರಣ, ವಿದೇಶೀ ಬಂಡವಾಳ ಹೂಡಿಕೆಗೆ ರಿಯಾಯಿತಿ ಇವೆಲ್ಲ ಸಣ್ಣ ಕೈಗಾರಿಕೆಗಳ ಹೊಟ್ಟೆಯ ಮೇಲೆ ಹೊಡೆಯುತ್ತಿವೆ. ಸಣ್ಣ ಕೈಗಾರಿಕೆಗಳು ನಷ್ಟದಿಂದ ರೋಗಗ್ರಸ್ತವಾಗುತ್ತಿವೆ. ಸಾವಿರ ಸಾವಿರ ಕಾರ್ಮಿಕರು ಕೆಲಸ ಕಳೆದು ಕೊಳ್ಳುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಈ ಮಂತ್ರಿಗಳು ಇಂತಹ ಭರವಸೆ ನೀಡಿದರೆ ಯಾರಾದರೂ ನಂಬುವರೆ?

ಸಣ್ಣ ಕೈಗಾರಿಕೆಗಳ ಕಾರ್ಯ ಸುಧಾರಣೆ

ಮೇಲಿನದನ್ನು ಓದಿದರೆ ಸರ್ಕಾರದ ಉದ್ದೇಶಗಳೇನು ಎಂಬುದು ಸ್ಪಷ್ಟವಾಗುತ್ತದೆ ಅಲ್ಲವೆ? ಮತ್ತೆ ಸರ್ಕಾರ ಸಣ್ಣ ಕೈಗಾರಿಕೆಗಳ ಕಾರ್ಯ ಸುಧಾರಣೆ ಎಂಬ ಮಾತನ್ನಾಡಿದರೆ ಆ ಕ್ಷೇತ್ರದಲ್ಲಿ ಇನ್ನಷ್ಟು ಉದಾರೀಕರಣವನ್ನು ಮಾಡುವ ಉದ್ದೇಶವನ್ನು ಸರ್ಕಾರ ಹೊಂದಿದೆ ಮತ್ತು ಆ ಕ್ರಮಗಳು ಈ ವಲಯವನ್ನು ಇನ್ನಷ್ಟು ಹಾಳು ಗೆಡವುತ್ತದೆ ಎಂಬುದು ಸ್ಪಷ್ಟ. ಇರಲಿ.

ಈಗ ಸರ್ಕಾರ ತರಬಯಸಿರುವ ಕ್ರಮಗಳು

1. ಸಣ್ಣ ಕೈಗಾರಿಕೆಗಳಿಗೆ ಮಾತ್ರ ಮೀಸಲಾಗಿದ್ದ ಉತ್ಪನ್ನಗಳ ಮೀಸಲಾತಿಯನ್ನು ತೆಗೆದು ಹಾಕುವುದು. ಇದು ಲಾಭದಾಯಕ ಉತ್ಪಾದನೆಗೆ ಸಹಾಯ ಮಾಡುವುದಂತೆ. ಅಂದರೆ ದೊಡ್ಡ ಕೈಗಾರಿಕೆಗಳು ಮಾತ್ರ ಉಳಿಯಲೆಂದೆ? ತಂತ್ರಜ್ಞಾನವನ್ನೂ ಇದು ಸುಧಾರಿಸುವುದಂತೆ ಇದರಿಂದ ಕರ ವಸೂಲಾತಿ ಹೆಚ್ಚುವುದಂತೆ.

2. ಸಣ್ಣ ಕೈಗಾರಿಕೆಗಳಿಗೆ ನಿರ್ಗಮನ ನೀತಿಯನ್ನು ತರುವುದು.

ಇದು ಯಾರಿಗೆ ಲಾಭ ನೀಡುತ್ತದೆ ನ್ನುವುದು ಸ್ಪಷ್ಟವಲ್ಲವೆ? ಕಾರ್ಮಿಕರನ್ನು ಸುಲಭದಲ್ಲಿ ಮನೆಗೆ ಕಳುಹಿಸುವಂತಿರಬೇಕು ಎಂಬುದೇ ಇದರ ಉದ್ದೇಶ.

ಸರ್ಕಾರ ಈಗಾಗಲೇ ಈ ವಲಯದಲ್ಲಿ ವಿದೇಶೀ ಹಣ ಹೂಡಿಕೆ ಶೇ. 24 ರವರೆಗೆ ಹೋಗಬಹುದೆಂದಿದೆ. ಅಂದರೆ ತಂತ್ರಜ್ಞಾನದ ಹೆಸರಿನಲ್ಲಿ ಬರುವ ಈ ವಿದೇಶೀ ಬಂಡವಾಳಕ್ಕೆ ಎಲ್ಲ ಅನುಕೂಲ ಮಾಡಿಕೊಡಲು ಸಾಮ್ರಾಜ್ಯಶಾಹಿಗಳ ಒತ್ತಡಕ್ಕೆ ಮಣಿದು ಸರ್ಕಾರ ಈ ಕ್ರಮಗಳನ್ನು ತರುತ್ತಿದೆ ಎಂಬುದು ಸ್ಪಷ್ಟವಲ್ಲವೆ?

ಮುಳುಗಲಿರುವ ಆದ್ಯತೆ ವಲಯ

ಭಾರತೀಯ ರಿಸರ್ವ್ ಬ್ಯಾಂಕ್ 1993-94 ರ ಉತ್ತರಾರ್ಧಕ್ಕೆ ತನ್ನ ಹಣಕಾಸು ಮತ್ತು ಸಾಲ ನೀತಿಯನ್ನು ಪ್ರಕಟಿಸಿದೆ. ಉದಾರೀಕರಣಕ್ಕೆ ತಕ್ಕುದಾದ ಹಲವು ಕ್ರಮಗಳನ್ನು ಅದು ಪ್ರಕಟಿಸಿದೆ.

ಬಹಳ ಮುಖ್ಯವಾದದ್ದು ಆದ್ಯತೆಯ ವಲಯಕ್ಕೆ ಸಂಬಂಧಿಸಿದ್ದು. ಮೊದಲು ಆದ್ಯತೆಯ ವಲಯಕ್ಕೆ ವಾಣಿಜ್ಯ ಬ್ಯಾಂಕುಗಳು ತಮ್ಮ ಒಟ್ಟು ಸಾಲದಲ್ಲಿ ಶೇ. 40 ರಷ್ಟನ್ನು ನೀಡಬೇಕಾಗಿತ್ತು. ಈ ಶೇ. 40 ನ್ನು ಹಾಗೇ ಉಳಿಸಿಕೊಳ್ಳಲಾಗಿದೆ. ಇದರಲ್ಲಿ ಶೇ. 18 ರಷ್ಟನ್ನು ನೇರವಾಗಿ ಕೃಷಿಗೆ ನೀಡಬೇಕಾಗುತ್ತಿತ್ತು. ಈಗ ನೇರ ಮತ್ತು ಪರೋಕ್ಷ (ಅಂದರೆ ಕೃಷಿ ವ್ಯಾಪಾರ ಇತ್ಯಾದಿಗಳಿಗೆ) ಎರಡೂ ಸೇರಿ ಶೇ. 18 ರಷ್ಟಾದರೆ ಸಾಕು.

ಸಣ್ಣ ಕೈಗಾರಿಕೆಗಳಲ್ಲಿ 35 ಲಕ್ಷ ರೂಪಾಯಿಗೂ ಕಡಿಮೆ ಬಂಡವಾಳ (ಅಂದರೆ ಉತ್ಪಾದನಾ ಯಂತ್ರಗಳಲ್ಲಿ ಹೂಡಿಕೆ) ಇರುವ ಘಟಕಗಳು ಆದ್ಯತೆಯ ವಲಯಕ್ಕೆ ಬರುತ್ತಿದ್ದವು. ಈಗ ಅದನ್ನು ಬದಲಾಯಿಸಲಾಗಿದೆ. ಉತ್ಪಾದನಾ ಯಂತ್ರದ ಬೆಲೆ 60 ಲಕ್ಷ ರೂಪಾಯಿಗಳ ವರೆಗಿದ್ದರೂ ಈಗ ಇಂತಹ ಘಟಕಗಳನ್ನು ಆದ್ಯತೆ ವಲಯವೆಂದು ಪರಿಗಣಿಸಲಾಗುತ್ತದೆ. ದೊಡ್ಡ ಮೀನು ಮತ್ತು ಚಿಕ್ಕ ಮೀನು ಎರಡು ಇರುವಕಡೆ ಏನಾಗುತ್ತದೆಂದು ಗೊತ್ತಲ್ಲ? ದೊಡ್ಡದ್ದು ಚಿಕ್ಕದನ್ನು ತಿಂದು ಹಾಕುತ್ತದೆ. ಸರ್ಕಾರದ ಕುತಂತ್ರ ಇದು: ಆದ್ಯತೆಯ ವಲಯವನ್ನೇ ತೆಗೆದು ಹಾಕುವುದಲ್ಲ. ಶ್ರೀಮಂತರನ್ನೂ ಈ ಆದ್ಯತೆಯ ವಲಯದಲ್ಲಿ ತಂದು ಬಿಡುವುದು. ಹೇಗಿದೆ ಈ ಕುತಂತ್ರ?

ಶೇರು ಹಗರಣ

ಸಿಬಿಐ ಈಗ ಹಲವು ಮೊಕದ್ದಮೆಗಳನ್ನು ನ್ಯಾಯಾದೀಶ ಎಸ್.ಎನ್. ವರಿಯಾವಾರ ನ್ಯಾಯಾಲಯದಲ್ಲಿ ಹೂಡಿದೆ. ಹನ್ನೊಂದು ಜನರ ವಿರುದ್ಧ ಈ ಮೊಕದ್ದಮೆಗಳನ್ನು ಹೂಡಲಾಗಿದೆ. ಫೇರ್‌ಗ್ರೋಥ್ ಫೈನಾನ್ಶಿಯಲ್ ಸರ್ವಿಸಸ್, ಆಂಧ್ರಾ ಬ್ಯಾಂಕ್ ಫೈನಾನ್ಶಿಯಲ್ ಸರ್ವಿಸಸ್, ಇವುಗಳ ವಹಿವಾಟಿನಲ್ಲಿ ಮೋಸಮಾಡಿದವರೆಲ್ಲ ಇದರಲ್ಲಿ ಸೇರಿದ್ದಾರೆ.

ಪ್ರಧಾನಿ ವಿರುದ್ಧ ಮೊಕದ್ದಮೆ ಇಲ್ಲ

ಪ್ರಧಾನಿ ಶ್ರೀ. ಪಿ.ವಿ. ನರಸಿಂಹರಾಯರಿಗೆ ತಾನು ಒಂದು ಕೋಟಿ ರೂಪಾಯಿಗಳ ಲಂಚ ನೀಡಿದ್ದೆನೆಂದು ಹರ್ಷದ್ ಮೆಹ್ತ ಹೇಳಿದ ಹಿನ್ನೆಲೆಯಲ್ಲಿ ಸಿಬಿಐ ಒಂದು ಮೊಕದ್ದಮೆ ಹೂಡಬೇಕಾಗಿತ್ತು. ಆದರೆ ಹರ್ಷದ್ ಮೆಹ್ತ ಸಲ್ಲಿಸಿರುವ ಅಫಿಡವಿಟ್ ದೋಷ ಪೂರ್ಣವಾಗಿದೆ ಎಂಬ ನೆಪ ಹೂಡಿ ಈ ಮೊಕದ್ದಮೆಯನ್ನು ಕೈಬಿಡಲಾಗಿದೆ. ಪ್ರಧಾನಿಯವರ ನಿಯಂತ್ರಣದಲ್ಲಿರುವ ಸಿಬಿಐ ಪ್ರಧಾನಿಗೆ ನೀಡಿರುವ ಕೊಡುಗೆಯೇ ಇದು?

ಶ್ರಮಜೀವಿ ವರ್ಗದ ನೇತಾರ ಸಿಪಿಐ(ಎಂ)

-- ಸುರ್ಜಿತ್

ಕಮ್ಯುನಿಸ್ಟ್ ಪಕ್ಷ ಬೇರೆಲ್ಲಾ ಪಕ್ಷಗಳಿಗಿಂತ ಭಿನ್ನವಾಗಿದೆ ಏಕೆಂದರೆ ಅದು ಸಾಮೂಹಿಕ ಸಂಘಟನೆಗಳ ಮತ್ತು ಸ್ವಂತ ಹಿತಾಸಕ್ತಿಗಳನ್ನು ಬದಿಗೊತ್ತಿ ಶ್ರಮ ಜೀವಿ ವರ್ಗಕ್ಕೆ ತನ್ನನ್ನು ಧಾರೆ ಏರೆದ ಸದಸ್ಯರನ್ನೊಳಗೊಂಡ ನೇತಾರ ಪಕ್ಷ ಸಿಪಿಐ(ಎಂ) ಪಕ್ಷವೆಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್‌ರವರು ಬಿಹಾರದ ಪಕ್ಷದ ಸಂಘಟನೆಯ ಪ್ಲೀನಂ ಅನ್ನು ಉದ್ಘಾಟಿಸುತ್ತಾ ನುಡಿದರು. ಕಮ್ಯುನಿಸ್ಟ್ ಪಕ್ಷವು ಸಾಮಾಜಿಕ ಬದಲಾವಣೆಗಳಿಗಾಗಿ ಹಾಗೂ ಆ ಬದಲಾವಣೆಯು ವೈಜ್ಞಾನಿಕವಾಗಿರಬೇಕೆಂದು ಬಯಸುತ್ತದೆಂದರು.

ಬಿಹಾರದ ಬಿ.ಟಿ. ರಣದಿವೆನಗರ (ಧನಭಾಗ್)ನಲ್ಲಿ ನಡೆದ ಬಿಹಾರ ರಾಜ್ಯ ಘಟಕವು ಏರ್ಪಡಿಸಿದ್ದ ಪಕ್ಷದ ಸಂಘಟನೆಯ ವಿಷಯಗಳಿಗೆ ಸಂಬಂಧಿಸಿದ ಉದ್ಘಾಟಿಸಿ ಮಾತನಾಡುತ್ತಿದ್ದರು. ಈ ಪ್ಲೀನಂಗೆ 212 ಪ್ರತಿನಿಧಿಗಳು 41 ಜಿಲ್ಲೆಗಳನ್ನು ಪ್ರತಿನಿಧಿಸಿದ್ದರು. ಪಕ್ಷದ ಹಿರಿಯ ನಾಯಕರಾದ ಸಮರ್ ಮುಖರ್ಜಿ, ಕಿಸಾನ್ ಸಭಾದ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ರಾಮ್ ನಾರಾಯಣ ಗೋಸ್ವಾಮಿ ಮುಂತಾದವರು ಪ್ರತಿನಿಧಿಗಳನ್ನುದ್ದೇಶಿಸಿ ಮಾತನಾಡಿದರು.

ಕಾಂ. ಸುರ್ಜಿತ್ ತಮ್ಮ ಭಾಷಣವನ್ನು ಮುಂದುವರೆಸುತ್ತಾ ಬಿಹಾರದ ಭೂ ಹೋರಾಟಗಳು ನಿಜಕ್ಕೂ ಅಭಿನಂದನೀಯ ಎಂದರಲ್ಲದೆ ಈ ಭೂ ಹೋರಾಟವನ್ನು ಬೆಳೆಸುವುದರ ಜೊತೆಗೆ ಪಕ್ಷದ ಬೆಳವಣಿಗೆಯನ್ನು ಹೆಚ್ಚುಸುವುದು ಅತ್ಯಗತ್ಯವೆಂದು ಈ ಸಂದರ್ಭದಲ್ಲಿ ನೆನಪಿಸಿದರು.

ಬಿಹಾರ ರಾಜ್ಯದ ಪಕ್ಷದ ಕಾರ್ಯದರ್ಶಿ ಗಣೇಶ್ ಶಂಕರ್ ವಿದ್ಯಾರ್ಥಿಯವರು ಸಂಘಟನೆಯನ್ನು ಬೆಳೆಸಲು ಎರಡು ಭಾಗಗಳುಳ್ಳ ವರದಿಯನ್ನು ಮಂಡಿಸಿದರು. ವರದಿಯನ್ನು ಮಂಡಿಸಿ ಮಾತನಾಡುತ್ತಾ, ಈಗಿನ ರಾಜಕೀಯ ಸನ್ನಿವೇಶದಲ್ಲಿ ನಮ್ಮ ಪಕ್ಷದ ಬೆಳವಣಿಗೆಗಾಗಿ ತಮ್ಮೆಲ್ಲ ಶಕ್ತಿಗಳನ್ನು ಕ್ರೋಢೀಕರಿಸಿ ಪಕ್ಷದ ಬೆಳವಣಿಗೆಯನ್ನು ಹಾಗೂ ಸಾಮೂಹಿಕ ಸಂಘಟನೆಗಳ ಬೆಳವಣಿಗೆಯನ್ನು ತೀವ್ರವಾಗಿ ಹೆಚ್ಚಿಸಬೇಕಾದ ಅವಶ್ಯಕತೆಯನ್ನು ಪಕ್ಷದ ಸದಸ್ಯರು ಮನಗಾಣಬೇಕೆಂದರು.

ಭೂಕಂಪ ದುರಂತಕ್ಕೆ ಪರಿಹಾರ ನೀಡುವುದು ಬಿಹಾರದ ರಾಜ್ಯದೊಳಗಡೆ, ಗುಡ್ಡಗಾಡು ಜನರು ಬಹುಸಂಖ್ಯಾತವಾಗಿರುವ ಛೋಟಾನಾಗ್‌ಪುರ, ಸಂತಾಲ್ ಪರಗಣ ಪ್ರದೇಶಗಳನ್ನು ಸ್ವತಂತ್ರ ಮಂಡಳಿಗಳಾಗಿ ಮಾಡಬೇಕೆಂಬ ಒತ್ತಾಯಕ್ಕೆ ಬೆಂಬಲ, ನವೆಂಬರ್ 8 ರ ಬೃಹತ್ ರ್‍ಯಾಲಿಯನ್ನು ಸಂಘಟಿಸಲು ಹಾಗೂ ನಳಂದ ಜಿಲ್ಲೆಯ ಪಕ್ಷದ ಜಿಲ್ಲಾ ಕಾರ್ಯದರ್ಶಿಯ ಕೊಲೆ ಮಾಡಿರುವ ಪೋಲೀಸ್ ಕೃತ್ಯದ ಬಗ್ಗೆ ನ್ಯಾಯಾಂಗ ತನಿಖೆ ನಡೆಸಬೇಕೆಂಬ ನಿರ್ಣಯಗಳನ್ನು ಈ ಪ್ಲೀನಂ ಒಳಗೊಂಡಿದೆ.

ಈ ಪ್ಲೀನಂನ ನಂತರ ಒಂದು ಬೃಹತ್ ಸಾರ್ವಜನಿಕ ಸಭೆಯನ್ನು ಧನಭಾದ್‌ನ ಪೋಲೋ ಗ್ರೌಂಡ್‌ನಲ್ಲಿ ಏರ್ಪಡಿಸಲಾಗಿತ್ತು. ಈ ಸಭೆಯು ಧನ್‌ಭಾದ್‌ನಲ್ಲಿ ಎಡಪಕ್ಷಗಳು ಸಂಘಟಿಸಿದ್ದ ಅತಿ ದೊಡ್ಡ ಸಾರ್ವಜನಿಕ ಸಭೆಯಾಗಿದ್ದೊಂದು ವಿಶೇಷ.

ಸಭೆಯನ್ನುದ್ದೇಶಿಸಿ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಹಾಗೂ ಪಕ್ಷದ ಪೊಲಿಟ್‌ಬ್ಯೂರೋ ಸದಸ್ಯ ಕಾಂ. ಜ್ಯೋತಿ ಬಸುರವರು ಮಾತನಾಡುತ್ತಾ ಸಾಮಾಜಿಕ ಬದಲಾವಣೆಗಾಗಿ ಕಾರ್ಮಿಕರು, ರೈತರು ಹಾಗೂ ಮಧ್ಯಮವರ್ಗದ ಜನರು ಒಂದಾಗಿ ಹೋರಾಟ ಮಾಡಲು ಕರೆ ನೀಡಿದರು. ಕೇಂದ್ರದ ನಿರಂತರ ಅಡೆತಡೆಗಳ ನಡುವೆಯೂ ನಮ್ಮ ರಾಜ್ಯ ಅಂದ... ಪಶ್ಚಿಮ ಬಂಗಾಳದಲ್ಲಿ ಯಶಸ್ವಿಯಾಗಿ ಭೂ... ಸುಧಾರಣೆಯನ್ನು ಜಾರಿಗೊಳಿಸಿ, ಪಂಚಾ... ಯತ್ ವ್ಯವಸ್ಥೆಯನ್ನು ಬಲಪಡಿಸಲು ಸಾ... ವಾದದ್ದು ನಮ್ಮ ಪಕ್ಷದ ಸಾಮೂಹಿ... ಸಂಘಟನೆಗಳ ಸಮರಶೀಲ ಚಳುವಳಿಗ... ಹಾಗೂ ಕಾರ್ಯಕರ್ತರ ತ್ಯಾಗಗಳೇ ಮು... ಕಾರಣ ಎಂದರು.

ಈ ಸಭೆಯನ್ನುದ್ದೇಶಿಸಿ ಮಾತ... ಡಿದ ಇನ್ನೊಬ್ಬ ಪೊಲಿಟ್‌ಬ್ಯೂರೋ ಸ... ಸೀತಾರಾಂ ಯೆಚೂರಿಯವರು ಬಿಜೆ... ಹಾಗೂ ಕಾಂಗ್ರೆಸ್ ಪಕ್ಷಗಳು ಕೋಮು... ವಾದಿಗಳನ್ನು ತೃಪ್ತಿಪಡಿಸುವ ಹಾಗೆಂ... ಸಾಮ್ರಾಜ್ಯಶಾಹಿಗಳಿಗೆ ಶರಣಾಗುವ ನೀ... ಗಳ ದುಷ್ಪರಿಣಾಮಗಳನ್ನು ವಿವರಿಸಿದ...

ಗಣೇಶ್ ಶಂಕರ್ ವಿದ್ಯಾರ್ಥಿ, ಸಮ... ಮುಖರ್ಜಿ, ಸುಭೋಧ್ ರಾಯ್ ಮ... ಸಿಪಿಐ(ಎಂ)ನ ಧನಭಾದ್ ಜಿಲ್ಲಾ ಕಾರ್ಯ... ದರ್ಶಿ ಜಿ.ಕೆ. ಭಕ್ಷಿ ಮುಂತಾದವರು ಸ... ಯಲ್ಲಿ ಹಾಜರಿದ್ದರು. ಜಿ.ಕೆ. ಭಕ್ಷಿ ಸಮಾ... ಭದ ಅಧ್ಯಕ್ಷತೆ ವಹಿಸಿದ್ದರು.

ಹಿಮಾಚಲಪ್ರದೇಶ ವಿ.ವಿ.ಯಲ್ಲಿ ಎಸ್.ಎಫ್.ಐ. ವಿಜಯ

ಹಿಮಾಚಲ ಪ್ರದೇಶದ ವಿಶ್ವವಿದ್ಯಾಲಯಕ್ಕೆ ನಡೆದ ವಿದ್ಯಾರ್ಥಿ ಸಂಘದ ಚುನಾವಣೆಗಳಲ್ಲಿ ಭಾರತ ವಿದ್ಯಾರ್ಥಿ ಫೆಡರೇಷನ್ ಎಲ್ಲ ನಾಲ್ಕು ಸ್ಥಾನಗಳಲ್ಲೂ ಗೆದ್ದು ಮತ್ತೊಮ್ಮೆ ತನ್ನ ಹಿರಿಮೆಯನ್ನು ಪ್ರದರ್ಶಿಸಿದೆ. ಅಕ್ಟೋಬರ್ 7, 1993 ರಂದು ಹಿಮಾಚಲ ಪ್ರದೇಶ ವಿವಿಗೆ ನಡೆದ ವಿದ್ಯಾರ್ಥಿ ಚುನಾವಣೆಗಳಲ್ಲಿ ಅಧ್ಯಕ್ಷರು, ಉಪಾಧ್ಯಕ್ಷರು, ಪ್ರಧಾನ ಕಾರ್ಯದರ್ಶಿ ಮತ್ತು ಸಹ-ಕಾರ್ಯದರ್ಶಿಯ ಎಲ್ಲ ಸ್ಥಾನಗಳನ್ನು ಎಸ್. ಎಫ್.ಐ. ಅಭ್ಯರ್ಥಿಗಳು ಪಡೆದಿದ್ದಾರೆ.

ಅಧ್ಯಕ್ಷ ಸ್ಥಾನಕ್ಕೆ ಎಸ್.ಎಫ್.ಐ ಅಭ್ಯರ್ಥಿಯಾದ ವಿಶಾಲ್ ಶಾಂಪ್ಟ 772 ಮತಗಳನ್ನು ಪಡೆಯುವುದರ ಮೂಲಕ ಎ.ಬಿ.ವಿ.ಪಿ.ಯ ಅಭ್ಯರ್ಥಿಯನ್ನು ಸೋಲಿಸಿದರು. ಪ್ರೇಂ ಸಿಂಗ್ ಉಪಾಧ್ಯಕ್ಷರಾಗಿ ಕುಶಾಲ್ ಭರದ್ವಾಜ್ ಪ್ರಧಾನ ಕಾರ್ಯದರ್ಶಿಯಾಗಿ ಮತ್ತು ನಿರಂಜನ್ ಥಾಕೂರ್ ಸಹಕಾರ್ಯದರ್ಶಿಯಾಗಿ ಆಯ್ಕೆಯಾದರು.

ಎನ್.ಎಸ್.ಯು.ಐ. ಈ ಚುನಾವಣೆಯಲ್ಲಿ ಅತ್ಯಂತ ಹೀನ ಪರಿಸ್ಥಿತಿಗೆ ಇಳಿಯಿತು. ಮತ್ತು ಎಸ್.ಎಫ್.ಐ ಅಭ್ಯರ್ಥಿಗಳಿಗೆ ಯಾವುದೇ ರೀತಿಯ ಸವಾಲಾಗಿ ಉಳಿಯಲಿಲ್ಲ. ಎಸ್.ಎಫ್.ಐ.ಯನ್ನು ಸೋಲಿಸಬೇಕೆಂಬ ಹತಾಶೆಯ ಮನೋಸ್ಥಿತಿಯಿಂದ ಎನ್.ಎಸ್.ಯು.ಐ. ಕಡೇಗಳಿಗೆಯಲ್ಲಿ ತನ್ನ ಮತಗಳನ್ನು ಎ.ಬಿ.ವಿ.ಪಿ.ಯ ಅಭ್ಯರ್ಥಿಗಳಿಗೆ ವರ್ಗಾಯಿಸಿತು.

ಈ ಚುನಾವಣೆಯಲ್ಲಿ ಎಸ್.ಎಫ್.ಐ. ಯನ್ನು ಸೋಲಿಸಲು ಎ.ಬಿ.ವಿ.ಪಿ.ಯು ತನ್ನೆಲ್ಲಾ ಶಕ್ತಿಯನ್ನು ಬಳಸಿತು. ಪ್ರಚಾರ ಮಾಡುವ ಸಲುವಾಗಿ ಹಗಲು-ರಾತ್ರಿಯೆನ್ನದೆ ಅದರ ಇಡೀ ರಾಜ್ಯ ಮತ್ತು ರಾಷ್ಟ್ರ ನಾಯಕತ್ವ ಮತ್ತು ಕಾರ್ಯಕರ್ತರು ಕೆಲಸ ಮಾಡಿದರು. ಹಣವನ್ನು ನೀರಿನಂತೆ ಚೆಲ್ಲಿದರು ಮತ್ತು ಬಿಜೆಪಿಯ ನಾಯಕರೂ ಸಹ ಭೇಟಿ ಕೊಟ್ಟು ಈ ಪ್ರತಿಷ್ಠಿತ ಚುನಾವಣೆಯನ್ನು ಗೆಲ್ಲಲು ಪ್ರಯತ್ನಿಸಿದರು.

ಈ ಚುನಾವಣೆಯು ಹಿಮಾಚಲ ವಿ.ವಿಯಲ್ಲಿ ಭ್ರಷ್ಟಚಾರವನ್ನು ತೊಲಗಿಸಲು ಮತ್ತು ವಿದ್ಯಾರ್ಥಿಗಳ ವಿವಿಧ ಸಮಸ್ಯೆಗಳ ಪರಿಹಾರಕ್ಕೆ ಎಸ್.ಎಫ್.ಐ ನಡೆಸುತ್ತಿರುವ ಹೋರಾಟದ ಬದ್ಧತೆ ಮತ್ತು ಕಾರ್ಯಕ್ರಮಕ್ಕೆ ವಿದ್ಯಾರ್ಥಿ ಸಮುದಾಯ ಮತ್ತೊಮ್ಮೆ ಎಸ್.ಎಫ್.ಐ ಮೇಲೆ ವಿಶ್ವಾಸ ವ್ಯಕ್ತಪಡಿಸಿದ ವಿಜಯವಾಗಿದೆ.

ಹಿಂದಿನ ತಿಂಗಳಷ್ಟೇ ಉಪಕುಲಪತಿ ಡಾ. ಕೆ.ಸಿ. ಮಲ್ಹೋತ್ರರನ್ನು ತೆಗೆದು ಹಾಕಬೇಕೆಂದು ಸ್ನಾತಕೋತ್ತರ ಕೇಂದ್ರದ ಎಸ್. ಎಫ್.ಐನ ಘಟಕವು ತೀವ್ರವಾದ ಚಳುವಳಿಯನ್ನು ನಡೆಸಿತ್ತು. ನಂತರ ವಿಶ್ವವಿದ್ಯಾಲಯದ ಕುಲಪತಿಗಳು ಮಲ್ಹೋತ್ರರನ್ನು ತೆಗೆದುಹಾಕಿದರು.

ಖಂಡಿತವಾಗಿಯೂ ಎಸ್.ಎಫ್.ಐ ಈ ವಿಜಯವು ಮುಂಬರುವ ವಿಧಾನ ಸಭಾ ಚುನಾವಣೆಗಳ ಮೇಲೆ ಒಟ್ಟಾರೆ ಪರಿಣಾಮ ಬೀರಲಿದೆ. ಅದರಲ್ಲಿಯೂ ಶಿಮ್ಲಾದ ಮೇಲೆ ಹೆಚ್ಚಾಗಿ ಪ್ರಭಾವ ಬೀರಲಿದೆ. ನವೆಂಬರ್ 11 ರಂದು ನಡೆಯಲಿರುವ ವಿಧಾನ ಸಭಾ ಚುನಾವಣೆಗಳನ್ನು ಎದುರಿಸಲಿರುವ ವಿದ್ಯಾರ್ಥಿ-ಯುವ ಜನತೆಯ ಮನೋಚಿತ್ರಣ ವಿ.ವಿ. ಚುನಾವಣೆಗಳಲ್ಲಿ ವ್ಯಕ್ತವಾಗಿದೆ.

●

ಡಂಕೆಲ್ ಪ್ರಸ್ತಾಪ ಕೈಬಿಡಿ

ಅಖಿಲ ಭಾರತ ರಾಜ್ಯ ಸರಕಾರಿ ನೌಕರರ ಸಂಘದ ಒತ್ತಾಯ

8ನೇ ಅಖಿಲ ಭಾರತ ಸಮ್ಮೇಳನವನ್ನು ಡಿಸೆಂಬರ್ 28-31, 93 ರಂದು ಕಲ್ಕತ್ತದಲ್ಲಿ ನಡೆಸಲು ಅಖಿಲ ಭಾರತ ರಾಜ್ಯ ಸರಕಾರಿ ನೌಕರರ ಸಂಘವು ತನ್ನ ನ್ಯಾಶನಲ್ ಎಕ್ಸಿಕ್ಯೂಟಿವ್ ಸಭೆಯಲ್ಲಿ ತೀರ್ಮಾನಿಸಿತು. ಅದು ದೆಹಲಿಯಲ್ಲಿ 15-16 ಅಕ್ಟೋಬರ್ 93 ರಂದು ಸಭೆ ಸೇರಿ ಈ ತೀರ್ಮಾನವನ್ನು ಕೈಗೊಂಡಿತು. ಈ ಸಮ್ಮೇಳನಕ್ಕೆ ಸುಮಾರು 2,000 ಪ್ರತಿನಿಧಿಗಳು ಹಾಗೂ ಹೊರ ದೇಶಗಳ ಸೌಹಾರ್ದ ಪ್ರತಿನಿಧಿಗಳು ಭಾಗವಹಿಸುವರೆಂದು ಈ ಸಭೆಯು ತಿಳಿಸಿದೆ.

ಡಿಸೆಂಬರ್ 9 ರ ಅಖಿಲ ಭಾರತ ಮುಷ್ಕರದಲ್ಲಿ ಸುಮಾರು 16 ಲಕ್ಷ ರಾಜ್ಯ ಸರಕಾರಿ ನೌಕರರು, ಉಪಾಧ್ಯಾಯರು, ರಾಜ್ಯ ಸರಕಾರದ ನಿಯಂತ್ರಣದಲ್ಲಿರುವ ಸಾರ್ವಜನಿಕ ಕ್ಷೇತ್ರದ ನೌಕರರು ಭಾಗವಹಿಸಿದ್ದಕ್ಕೆ ಸಂತೋಷ ವ್ಯಕ್ತಪಡಿಸಿ ಕೇಂದ್ರ ಸರಕಾರದ ನೀತಿಗಳ ವಿರುದ್ಧದ ತನ್ನ ಹೋರಾಟವನ್ನು ಮುಂದು... ರೆಸಲು ತೀರ್ಮಾನಿಸಿತು.

ಸಭೆಯು ಒಂದು ನಿರ್ಣಯ... ಅಂಗೀಕರಿಸಿ ರಾಷ್ಟ್ರದ ಹಿತಕ್ಕೆ ಮಾರ... ವಾದ ಡಂಕೆಲ್ ಪ್ರಸ್ತಾಪವನ್ನು ಕೈಬಿಡ... ಹಾಗೂ ಈ ಪ್ರಸ್ತಾಪಕ್ಕೆ ಭಾರತವು ಸ... ಹಾಕಕೂಡದೆಂದು ಒತ್ತಾಯಿಸಿದೆ.

ಇನ್ನೊಂದು ನಿರ್ಣಯದಲ್ಲಿ ಉತ್ತ... ಪ್ರದೇಶದಲ್ಲಿ ನಡೆಯುತ್ತಿರುವ ಅ... ರ್ದಿಷ್ಟ ಮುಷ್ಕರವನ್ನು ನಡೆಸುತ್ತಿರು... ರಾಜ್ಯ ಸರಕಾರಿ ನೌಕರರ ಮುಷ್ಕರ... ತನ್ನ ಸಂಪೂರ್ಣ ಬೆಂಬಲವನ್ನು ಸೂ... ಸಿದೆ. ಇನ್ನೊಂದು ನಿರ್ಣಯವು ಒರಿಸ್ಸಾ... ಸರಕಾರವು ಕಾರ್ಮಿಕರ ಮೇಲೆ ನ... ಸುತಿರುವ ದಬ್ಬಾಳಿಕೆಯನ್ನು ಕೊನೆಗೊ... ಳಿಸಲು ಸೂಕ್ತ ಕ್ರಮವನ್ನು ಕೈಗೊಳ್ಳಲ... ಒರಿಸ್ಸಾ ಸರಕಾರವನ್ನು ಒತ್ತಾಯ ಪ... ಸಿತು.

●

ಭೂಕಂಪ ಪರಿಹಾರ ನಿಧಿ ಕೇರಳ ಸಂಗಾತಿಗಳ ದಾಖಲೆ ಸಂಗ್ರಹ

ಕಳೆದ ಸಂಚಿಕೆಯಲ್ಲಿ ಕೇರಳದ ಸಂಗಾತಿಗಳು ಭೂಕಂಪ ಪರಿಹಾರ ನಿಧಿಯಯಲ್ಲಿ ಸಂಗ್ರಹಿಸಲು ತನ್ನೆಲ್ಲಾ ಘಟಕಗಳನ್ನು ಕೋರಿದೆ ಎಂದು ವರದಿಯಾಗಿತ್ತು. ಪಕ್ಷದ ಸಾಮೂಹಿಕ ಸಂಘಟನೆಗಳ ನಾಯಕರು ಈ ಸಂಗ್ರಹದಲ್ಲಿ ಭಾಗಿಗಳಾಗಿ ಹಣ ಮತ್ತು ಔಷಧಿಗಳನ್ನು ಸಂಗ್ರಹಿಸಿದ್ದಾರೆಂದು ಐ.ಎನ್. ಎಸ್ ಸುದ್ದಿ ಸಂಸ್ಥೆ ವರದಿ ಮಾಡಿದೆ.

ಒಟ್ಟು 21,85,445 ರೂಗಳನ್ನು ಸಂಗ್ರಹಿಸಿದೆ. ಪ್ರತಿ ಜಿಲ್ಲೆಯಲ್ಲಿ ಎಷ್ಟು ಹಣ ಸಂಗ್ರಹವಾಗಿದೆ ಎಂದು ಈ ಕೆಳಗೆ ನೀಡಲಾಗಿದೆ.

ತಿರುವನಂತಪುರ	1,94,083.00
ಕೊಲ್ಲಮ್	1,64,945.00
ಪತ್ತನಂತಿಟ್ಟ	58,937.00
ಆಳಪ್ಪುಳ	1,74,810.00
ಕೊಟ್ಟಾಯಂ	1,38,204.00
ಇಡುಕ್ಕಿ	58,349.00
ಎರ್ನಾಕುಲಂ	3,08,011.00
ತ್ರಿಸ್ಸೂರ್	2,33,000.00
ಪಾಲ[illegible]ಕ್	1,46,186.00
ಮಲ್ಲಪ್ಪುರಂ	60,000.00
[illegible]ಕ್ಕೊಡ್	2,25,825.00
[illegible]ಡ್	30,000.00
[illegible]	2,78,730.00
ಕಾಸರಗೋಡು	88,528.00
ವ್ಯಕ್ತಿಗತ ಸಹಾಯ	26,132.00
ಒಟ್ಟು	21,85,445.00

21,85,445 ರೂಗಳಲ್ಲಿ ಈಗಾಗಲೇ 10,000 ರೂಗಳನ್ನು ಪಕ್ಷದ ಕೇಂದ್ರ ಸಮಿತಿಗೆ ಕಳುಹಿಸಲಾಗಿತ್ತು. ಮುಖ್ಯಮಂತ್ರಿಗಳು ಕರೆದ ಸರ್ವ ಪಕ್ಷಗಳ ಸಭೆಯಲ್ಲಿ ನಮ್ಮ ಪಕ್ಷದ ವತಿಯಿಂದ ಸಂಗ್ರಹವಾಗುವ ಹಣವನ್ನು ಪಕ್ಷದ ಕೇಂದ್ರ ಸಮಿತಿಗೆ ಕಳುಹಿಸುತ್ತೇವೆಂದು ಹೇಳಿದರು. ಕೇಂದ್ರ ನಾಯಕತ್ವವು ಈ ಹಣವನ್ನು ವಿನಿಯೋಗಿಸುವ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತದೆ ಎಂದರು.

ಹಾಗೆಯೇ ಈಗಾಗಲೇ 5,85,00 ರೂಗಳ ಔಷಧಿಗಳನ್ನು ಸಂಗ್ರಹ ಮಾಡಿರುವುದನ್ನು ಸರಕಾರಿ ಅಧಿಕಾರಿಗೆ ನೀಡಲು ನಿರ್ದೇಶಿಸಲಾಗಿದೆ ಎಂದರು.

ದೇಶಾಭಿಮಾನಿ ಪತ್ರಿಕೆಯು ಕೂಡ ಪರಿಹಾರ ನಿಧಿಯನ್ನು ತೆರೆದಿದ್ದು ಅದು ಈ ಮೊತ್ತಕ್ಕೆ ಸೇರ್ಪಡೆಯಾಗಿಲ್ಲ. ದೇಶಾಭಿಮಾನಿ ಪತ್ರಿಕೆಯು ಸಂಗ್ರಹಿಸಿದ ಒಟ್ಟು ಹಣ 1,96,787 ರೂಗಳಾಗಿದೆ. ಇನ್ನೂ ಕೂಡ ಸಾರ್ವಜನಿಕರಿಂದ, ಸಂಘ ಸಂಸ್ಥೆಗಳಿಂದ ಕೊಡುಗೆಗಳನ್ನು ಸ್ವೀಕರಿಸುತ್ತಿದೆ. ಅದನ್ನು ಇನ್ನು ಮುಂದೆ ಸಂಬಂಧಪಟ್ಟವರಿಗೆ ಅರ್ಪಿಸಲಾಗುವುದು ಎಂದವರು ಈ ಸಂದರ್ಭದಲ್ಲಿ ತಿಳಿಸಿದರು.

ಪಾಶ್ಚಿಮಾತ್ಯ ಪ್ರಸಾರ ಮಾಧ್ಯಮವು..........

ಪುಟ 1ರಿಂದ

ವಾಸ್ತವವಾಗಿ ಜನಸಮುದಾಯವು ತಾನಾಗಿಯೇ ಮುತುವರ್ಜಿವಹಿಸಿ ಟಿ.ವಿ. ಕೇಂದ್ರವನ್ನು ಸ್ವಾಧೀನ ಪಡಿಸಿಕೊಳ್ಳಲು ಪ್ರಯತ್ನಿಸಿದ್ದು ಮುಂದಿನ ದಿವಸಗಳಲ್ಲಿ ರಷ್ಯದಲ್ಲಿ ಸಂಭವಿಸುವ ಘಟನೆಗಳ ದಿಕ್ಸೂಚಿಯಾಗಿದೆ.

ರಷ್ಯದಲ್ಲಿ ಏಕವ್ಯಕ್ತಿಯ ಆಡಳಿತವನ್ನು ಸ್ಥಾಪಿಸಲು ರುತ್ಸಕೋಯಿ ಮತ್ತು ಕಾಸ್‌ಬುಲಟೋವ್ ಯೆಲ್ಟ್‌ಸಿನ್ನರಿಂದ ಆರಿಸಲ್ಪಟ್ಟ ವ್ಯಕ್ತಿಗಳು ಎಂಬುದನ್ನು ಮರೆಯಬಾರದು. ಕಾಲಕ್ರಮೇಣ ಅವರು ದೂರಾವಾದರು ಎಂಬುದು ಬೇರೊಂದು ಕಥೆ. ಪ್ರಜಾಪ್ರಭುತ್ವಕ್ಕಾಗಿ ನಡೆದ ಕಾಳಗ ಇಡೀ ನಾಟಕದಲ್ಲಿ ಜನ ಸಮುದಾಯಕ್ಕೆ ಯಾವುದೇ ಪಾತ್ರವನ್ನು ಕೊಟ್ಟಿರಲಿಲ್ಲ. ಆದರೆ ಈ ಕಾಳಗದ ನಡೆಯುತ್ತಿದ್ದಾಗಲೇ ಜನರು ತಮ್ಮ ಪಾತ್ರವನ್ನು ನಿರ್ಧರಿಸಿ ಮಧ್ಯಪ್ರವೇಶ ಮಾಡಿದರು. ಸಹಸ್ರಾರು ಜನ ನೆರೆಯಲು ಮತ್ತು ಮಧ್ಯಪ್ರವೇಶ ಮಾಡಲು ಸಾಕಷ್ಟು ಪ್ರಚೋದನೆಯಿದ್ದಿತು. ತೊಟ್ಟಿಲಿನಿಂದ ಸ್ಮಶಾಣದವರೆಗೆ ಸಮಾಜವಾದದ ಅಡಿಯಲ್ಲಿ ಅನುಭವಿಸುತ್ತಿದ್ದ ಸಾಮಾಜಿಕ ಭದ್ರತೆಯನ್ನು ಕಸಿದುಕೊಳ್ಳುವ ಯೆಲ್ಟ್‌ಸಿನ್ನರ ಸರ್ವಾಧಿಕಾರಿ ದುರಾಕ್ರಮಣದ ಅಂತಿಮ ಗುರಿ ಜನರೇ ಅಲ್ಲವೆ?

ಏನೇ ವಿರೂಪಗಳು, ವಿಕೃತಿಗಳು ಆವ್ಯವಸ್ಥೆಯ ಒಳಗೆ ನುಸುಳಿದ್ದರು ಸಹ ಕೆಲವು ವರ್ಷಗಳ ಹಿಂದಿನ ಸಮಾಜವಾದಿ ಸೋವಿಯತ್ ಒಕ್ಕೂಟದಲ್ಲಿ ಹಸಿವಿನಿಂದ ನರಳುವುದು, ನಿರುದ್ಯೋಗ, ವಸತಿಹೀನತೆ, ಆರೋಗ್ಯವಿಲ್ಲದಿರುವುದು ಮತ್ತು ರಸ್ತೆಗಳಲ್ಲಿ ಹಾಗೂ ಮಾರುಕಟ್ಟೆಗಳಲ್ಲಿ ಮಾಫಿಯಾ ದರ್ಬಾರನ್ನು ಯಾರೂ ಕನಸಿನಲ್ಲಿಯೂ ಕಂಡಿರಲಿಲ್ಲ.

ಸರಿಯಾಗಿ ನಿರ್ಧರಿಸಲ್ಪಟ್ಟ ಗುರಿ ಮತ್ತು ಸರಿಯಾಗಿ ರಚಿಸಲ್ಪಟ್ಟ ನಾಯಕತ್ವ ಇಲ್ಲದ ಜನ ಸಮೂಹದ ಸ್ವಯಂ ಪ್ರೇರಣೆಯ ಹೋರಾಟವು ಸೋಲುತ್ತದೆಯೆಂಬುದು ನಿಜ. ಆದರೆ ಅಂತಹ ಸ್ವಯಂ ಪ್ರೇರಣೆಯ ಹೋರಾಟಗಳ ಮತ್ತು ಅವರ ಹತಾಶ ಮನಸ್ಸಿನಿಂದ ಹುಟ್ಟುವ ನಾಯಕತ್ವವು ಜನ ಸಮೂದಾಯವನ್ನು ವಿಜಯದತ್ತ ಮುನ್ನಡೆಸುತ್ತದೆ.

ಮಾಸ್ಕೋದಲ್ಲಿನ ಇತ್ತೀಚೆಗಿನ ಕಾಳಗವು ಜನಸಮೂದಾಯವು ಹೋರಾಟದ ವಿಚಾರ ಮಾಡುತ್ತಿರುವುದರ ಚಿಹ್ನೆಗಳನ್ನು ಸ್ಪಷ್ಟವಾಗಿ ತೋರಿಸುತ್ತದೆ. ಜಗತ್ತಿನಾದ್ಯಂತ ಇರುವ ಪ್ರಗತಿಯ ಶಕ್ತಿಗಳು ಇಡೀ ನಾಟಕೀಯ ಬೆಳಣಿಗೆಯ ಈ ಅತ್ಯಂತ ಸಕಾಲಾತ್ಮಕ ಅಂಶವನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ಬಂಡವಾಳಶಾಹಿಯ ಪ್ರತಿಪಾದಕರು ಕಮ್ಯುನಿಸಂ ಅಂತ್ಯದ ಬಗ್ಗೆ ಬರೆಯುವುದರ ಬಗ್ಗೆ ನಿರತರಾಗಿದ್ದಾರೆ. ಆದರೆ ರಷ್ಯಾದ ಜನರು ಈಗ ತಾನೆ ಎಚ್ಚೆತ್ತು ಚರಿತ್ರೆಯ ಹೊಸ ಅಧ್ಯಾಯಗಳನ್ನು ಬರೆಯಲು ಪ್ರಾರಂಭಿಸಿದ್ದಾರೆ. ಬಂಡವಾಳಶಾಹಿಯ ಬಾಡಿಗೆ ಬರಹಗಾರರು ಚರಿತ್ರೆಯ ಅಂತ್ಯವನ್ನು ಈಗಾಗಲೇ ಉಚ್ಚರಿಸಿದ್ದು ಬಂಡವಾಳಶಾಹಿಯು ಮರಣವಿಲ್ಲದ ಶಾಶ್ವತವಾದ ಸಾಮಾಜಿಕ ಪದ್ಧತಿಯೆಂದು ಘೋಷಿಸಿದ್ದಾರೆ. ಅದೇನು ಅಂತಹ ದೊಡ್ಡ ವಿಷಯವಲ್ಲ. ಆದ... ವಿಶಾಲವಾದ ಹಿನ್ನೆಲೆಯಲ್ಲಿ ಆ ದಿವಸ... ಳಲ್ಲಿ ಮಾಸ್ಕೋದಲ್ಲಿ ಸಂಭವಿಸಿದ ಘಟ... ಗಳಲ್ಲಿ ತಿರುಗಿ ಬೀಳಲು ಜನರು ಮಾಡಿ... ನಿರ್ಧಾರದ ಒಂದು ಚಿಕ್ಕ ಅಂಶವು ಬಂಡವಾ... ಳಶಾಹಿಯ ದೃಢ ಪ್ರತಿಪಾದಕರು ನುಡಿ... ರುವ ಭವಿಷ್ಯ ಬಹಳ ಅಪ್ರಬುದ್ಧವಾದು... ಎಂಬುದನ್ನು ನಿಸ್ಸಂದೇಹವಾಗಿ ಘೋಷಿ... ಸುತ್ತದೆ.

ಡಿ. 6, 1993ರಂದು ......

ಪುಟ 1ರಿಂದ

ಧಾನಿಯಲ್ಲಿ ನಡೆಸಬೇಕೆಂದು ತನ್ನ ಎ... ಕಾರ್ಮಿಕ ಸಂಘಗಳಿಗೆ ಕರೆ ಕೊಟ್ಟಿದೆ. ಡಿ... 1993 ರಂದು ಈ ಧರಣಿಗಳನ್ನು ಏರ್ಪ... ಸಲು ಅದು ತೀರ್ಮಾನಿಸಿದೆ.

ಈ ಸಭೆಯ ಅಧ್ಯಕ್ಷತೆಯನ್ನು ಎ... ಟಿ.ಯು.ಸಿ.ಯ ಎಂ.ಎಸ್. ಕೃಷ್ಣನ್ ವಹಿ... ದ್ದರು. ಸಿಐಟಿಯು ಪ್ರಧಾನ ಕಾರ್ಯ... ಡಾ. ಎಂ.ಕೆ. ಫಂದೆ, ಹೆಚ್.ಎಂ.ಎ... ಕಾರ್ಯದರ್ಶಿ ವಿ. ತ್ಯಾಗಿ, ಯು.ಟಿ.ಯು... ಎಲ್.ಎಸ್.)ನ ಕಾರ್ಯದರ್ಶಿ ಪ್ರತೀ... ಚಂದಾ, ಟಿ.ಯು.ಸಿ.ಸಿ. ಕಾರ್ಯದ... ಟಿ.ಡಿ.ಶಾಸ್ತ್ರಿ ಯು.ಟಿ.ಯು.ಸಿ. ಕಾರ್ಯ... ದರ್ಶಿ ಅಬಾನಿರಾಯ್, ಎ.ಐ.ಸಿ.ಸಿ.ಟಿ.ಯ... ಪ್ರತಿನಿಧಿ ನಿಯೋಗಿ ಭಾಗವಹಿಸಿದ್ದ... ಸಭೆ ಮುಂದಿನ ವಾರ ಮತ್ತೆ ಸಭೆ ಸೇ... ಮುಂದಿನ ಹೋರಾಟಗಳ ರೂಪುರೇಷ... ಳನ್ನು ನಿರ್ಧರಿಸಲು ತೀರ್ಮಾನಿಸಿತು.

ಎರಡು ಹೆಲಿಕಾಪ್ಟರ್‌ಗಳುನೆಲಕ್ಕೆ 15 ಸೈನಿಕರ ಸಾವು, ಸೆರೆಯಾಳು

ಸೋಮಾಲಿಯಾದಲ್ಲಿ ಅಮೇರಿಕಕ್ಕೆ ಮುಖಭಂಗ

-- ಶರತ್‌ಚಂದ್ರ

ಸೋಮಾಲಿಯಾದಲ್ಲಿ ವಿಶ್ವಸಂಸ್ಥೆಯು ಶಾಂತಿಪಾಲನಾ ಪಡೆ ಹೆಸರಿನಲ್ಲಿ ಹೋಗಿ ನರಮೇಧ ನಡೆಸಿ ಶಾಂತಿ ಭಂಗ ಮಾಡುತ್ತಿರುವ ಅಮೇರಿಕಕ್ಕೆ ತೀವ್ರ ಮುಖಭಂಗವಾಗಿದೆ. ಜಗತ್ತಿನ ಒಂದೇ ಸೂಪರ್ ಪವರ್‌ಗೆ ಕೇವಲ ಮಿಲಿಟರಿ ಬಲದಿಂದ ರಾಜಕೀಯ ಅಧಿಪತ್ಯ ಸ್ಥಾಪಿಸಲೂ ಆಗುವುದಿಲ್ಲ. ಬೇರೆ ದೇಶಗಳಲ್ಲಿ 'ಶಾಂತಿ' 'ಪ್ರಜಾಪ್ರಭುತ್ವ'ದ ಹೆಸರಿನಲ್ಲಿ ಸಾರ್ವಭೌಮತ್ವ ಕಸಿಯುವುದನ್ನು ಜನ ಸಹಿಸುವುದಿಲ್ಲ ಎಂದು ಈ ಘಟನೆಗಳು ತೋರಿಸಿಕೊಟ್ಟಿವೆ.

ಅಕ್ಟೋಬರ್ 3 ರಂದು ನಡೆದ ಘಟನೆಗಳಲ್ಲಿ ಎರಡು ಅಮೇರಿಕನ್ ಯುದ್ಧ ಹೆಲಿಕಾಪ್ಟರ್‌ಗಳನ್ನು ಜನರಲ್ ಐದೀದ್‌ರ ಗೆರಿಲ್ಲಾ ಪಡೆಗಳು ಹೊಡೆದುರುಳಿಸವು. ಆಮೇಲೆ ಹಲವರು ಕಾಣೆಯಾಗಿದ್ದಾರೆ. ಅವರನ್ನು ಜನರಲ್ ಐದಿದ್ ಪಡೆಗಳು ಸೆರೆಯಾಳುಗಳನ್ನಾಗಿ ಹಿಡಿದಿದ್ದಾರೆ ಎಂದು ವರದಿಯಾಗಿದೆ. ಒಬ್ಬ ಸೈನಿಕನ ಮೇಲಂತೂ ಸೋಮಾಲಿಯಾದ ರಾಜಧಾನಿ ಮೊಗದಿಶುನ ಜನರು ಅಮೇರಿಕದ ಮೇಲಿನ ಕೋಪವನ್ನು ತೀರಿಸಿಕೊಂಡರು. ಆತನನ್ನು ಕಟ್ಟಿ ನಗರದ ಬೀದಿಗಳಲ್ಲಿ ಎಳೆದಾಡಲಾಯಿತು. ಉರುಳಿಸಲಾದ ಹೆಲಿಕಾಪ್ಟರ್‌ನ ಮೇಲೆ ಸಹ ಮೊಗದಿಶುನ ಜನತೆ ಖುಶಿಯಿಂದ ಕುಣಿದಾಡಿದರು. ಇದಕ್ಕಿಂತ ದೊಡ್ಡ ಮುಖಭಂಗ ಅಮೇರಿಕಕ್ಕೆ ಇರಲಿಕ್ಕಿಲ್ಲ. ಇದು ಅಮೇರಿಕಕ್ಕೆ ಆದ ಅವಮಾನ ಮಾತ್ರವಲ್ಲ. ಕಳೆದ ಮೂರು ವರ್ಷಗಳಿಂದ ಅಮೇರಿಕದ ತೊತ್ತಿನಂತೆ ಕೆಲಸ ಮಾಡುತ್ತಿರುವ ವಿಶ್ವಸಂಸ್ಥೆಯ ನೀತಿಗಳಿಗೂ ಆದ ಅವಮಾನ.

ಈ ಸುದ್ದಿ ಅಮೇರಿಕದಲ್ಲಿ ಪ್ರಕಟವಾಗುತ್ತಿದ್ದಂತೆ ಅಲ್ಲಿ ಭಾರಿ ಅಲ್ಲೋಲ್ಲ ಕಲ್ಲೋಲವಾಗಿದೆ. ಮೊಗದಿಶುನ ಜನತೆಯನ್ನು ಅಮೇರಿಕನ್ ಹೆಲಿಕಾಪ್ಟರುಗಳು, ಸೈನಿಕರು ನಾಯಿಗಳಂತೆ ಭೇಟೆಯಾಡುತ್ತಿದ್ದಾಗ ಟಿವಿಗಳಲ್ಲಿ ನೋಡಿ ಕೈ ತಟ್ಟಿ ನಗುತ್ತಿದ್ದವರು ಹಾಹಾಕಾರ ಎಬ್ಬಿಸಿದರು. ವಿಯೆಟ್ನಾಂನಲ್ಲಿನ ಸೋಲು ಮುಖಭಂಗಗಳಿಗೆ, ಇರಾಕ್‌ನಲ್ಲಿ, ಸೋಮಾಲಿಯಾದಲ್ಲಿ ಸೇಡು ತೀರಿಸಿಕೊಳ್ಳಲಾಗುತ್ತಿದೆ. ಅಮೇರಿಕನ್ 'ಗೌರವ' 'ಪ್ರತಿಷ್ಠೆ' ಪುನಃ ಬರುತ್ತಿದೆ ಎಂದು ಕೊಂಡವರಿಗೆ 'ವಿಯೆಟ್ನಾಂ' ನೆನಪಿಸುವಂತೆ ಆಯಿತು. ಅಮೇರಿಕನ್ ಸೈನ್ಯಗಳನ್ನು ವಾಪಸು ಕರೆಸಬೇಕು. ಕ್ಲಿಂಟನ್ ವಿದೇಶ ನೀತಿ ದಾರಿ ತಪ್ಪಿದೆ ಎಂಬ ಕೂಗು ಎದ್ದಿತು.

ಅಮೇರಿಕನ್ ಸರ್ಕಾರ 'ನೆಲಕ್ಕೆ ಬಿದ್ದರೂ ಮೀಸೆ ಮಣ್ಣಾಗಲಿಲ್ಲ' ಎಂಬ ನೀತಿ ಅನುಸರಿಸಿತು. ಒಂದು ಕಡೆ ಅಮೇರಿಕದ ಜನರ ಹಾಹಾಕಾರಕ್ಕೆ ಸಮಾಧಾನವೆಂಬಂತೆ ಮಾರ್ಚ್ 1994 ರ ಒಳಗೆ ಅಮೇರಿಕನ್ ಪಡೆಗಳು ಹಿಂದಿರುಗುವುದು ಎಂದು ಘೋಷಿಸಿದರು. ಇನ್ನೊಂದು ಕಡೆ ಈಗ ಇರುವ 5,000 ಅಮೇರಿಕನ್ ಸೈನಿಕರಿಗೆ ನೆರವಾಗಲು, 1,700 ಸೈನಿಕರು ಹಾಗೂ 3,600 ಯುದ್ಧ ಹಡಗುಗಳ ಮೇಲೆ ಸೈನಿಕರನ್ನು ಕಳುಹಿಸಲಾಗುತ್ತಿದೆ. ಬೇಗ ಕೆಲಸ ಮುಗಿಸಲು!

ಈ ನಡುವೆ ಐದೀದ್ 'ದೈತ್ಯ'ನನ್ನು ಜೀವಂತ ಹಿಡಿಯುವುದು ಅಮೇರಿಕನ್ ಸೈನಿಕ ಕಾರ್ಯಾಚರಣೆ ಉದ್ದೇಶ ಎಂದು ಹೇಳುತ್ತಿದ್ದ ಕ್ಲಿಂಟನ್ ಆಡಳಿತ ರಾತ್ರೋರಾತ್ರಿ ಈಗ ಬದಲಾಯಿಸಿದೆ. ಸೋಮಾಲಿಯಾದಲ್ಲಿ ರಾಜಕೀಯ ಪರಿಹಾರ ಹುಡುಕಲು ಬದಲಾಯಿಸಿದೆ. ಸೋಮಾಲಿಯಾದಲ್ಲಿ ರಾಜಕೀಯ ಪರಿಹಾರ ಹುಡುಕಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುವುದು ಎಂದು ಹೇಳಲಾಗುತ್ತಿದೆ.

ವಿಶ್ವಸಂಸ್ಥೆಯ ಮೊದಲ ನಿರ್ಣಯ ಸೋಮಾಲಿಯಾದಲ್ಲಿ ಹಲವು ಗೆರಿಲ್ಲಾ ಪಡೆಗಳ ಆಂತರಿಕ ಕಲಹದಲ್ಲಿ ಆಹಾರದಲ್ಲಿ ಕೊರತೆಯಿಂದ ನರಳುತ್ತಿದ್ದ ಜನರಿಗೆ ಪರಿಹಾರ ನೀಡುವುದು, ಹಾಗೂ ಗೆರಿಲ್ಲಾ ಪಡೆಗಳನ್ನು ನಿಶ್ಯಸ್ತ್ರಗೊಳಿಸುವುದು ಆಗಿತ್ತು. ಇದರ ಬದಲು ಅಮೇರಿಕ ಅಲ್ಲಿನ ಆಂತರಿಕ ರಾಜಕೀಯದಲ್ಲಿ ಹಸ್ತಕ್ಷೇಪ ಮಾಡಿ ಕೆಲವುಗುಂಪುಗಳಿಗೆ ಕುಮ್ಮಕ್ಕುಕೊಟ್ಟು, ಜನರಲ್ ಐದೀದ್‌ನ ಪಡೆಯನ್ನು ಮೂಲೆಗುಂಪು ಮಾಡಲು ಪ್ರಯತ್ನಿಸಿತು. ಇದಕ್ಕಾಗಿ ಆತ 'ದೈತ್ಯ' ಎಂದೆಲ್ಲಾ ಪ್ರಚಾರ ಮಾಡಲಾಯಿತು. ಇದರಿಂದ ಅಮೇರಿಕನ್ ಪಡೆಗಳು ಹಾಗೂ ಜನರಲ್ ಐದೀದ್ ಪಡೆಗಳ ನಡುವೆ ಕಾಳಗ ಆರಂಭವಾಯಿತು. ಸೋಮಾಲಿಯಾದಲ್ಲಿ ಅರಾಜಕತೆ ಆರಂಭವಾಗಿದ್ದು ಮಾಜಿ ಸರ್ವಾಧಿಕಾರಿ ಮಹಮ್ಮದ್ ಸಿಯಾದ್ ಬಾರೆಯವರನ್ನು ಗೆರಿಲ್ಲಾ ಪಡೆಗಳು ಉರುಳಿಸಿ ರಾಜಕೀಯ ಬದಲಿ ತತ್‌ಕ್ಷಣ ಸಾಧ್ಯವಾಗದೆ ಹೋದದ್ದರಿಂದ. ಅಮೇರಿಕ ಈ ಬದಲಿ ತನ್ನ ಕೈಗೊಂಬೆ ಇರಬೇಕು ಎಂದು ಪ್ರಯತ್ನಿಸುತ್ತಿರುವುದು ವಿಶ್ವಸಂಸ್ಥೆಯ ಎಲ್ಲಾ 'ಶಾಂತಿ ಪ್ರಯತ್ನ'ಗಳ ಮೂಲ ಕಾರಣ. ವಿಶ್ವಸಂಸ್ಥೆಯನ್ನು ಅಮೇರಿಕ ತೊತ್ತಾಗಿಸಿದರೂ ಅಮೇರಿಕ ಎಲ್ಲಾ ಕಡೆ ಮನಬಂದಂತೆ ಮಾಡುವುದು ಸಾಧ್ಯವಿಲ್ಲ ಎಂದು ಅಮೇರಿಕಕ್ಕೆ ಈಗ ಸ್ಪಷ್ಟವಾಗಿ ಗೊತ್ತಾಗಿರಬೇಕು.

ಹೈತಿಯಲ್ಲೂ ಅಮೇರಿಕ ಪಡೆಗಳಿಗೆ ಮಂಗಳಾರತಿ

ಹೈತಿಯಲ್ಲೂ ಇದೇ ರೀತಿ ಅಮೇರಿಕಕ್ಕೆ ಮುಖಭಂಗವಾಗಿದೆ. ವಿಶ್ವಸಂಸ್ಥೆಯ ನಿರ್ಣಯವನ್ನು ಜಾರಿ ಮಾಡಲು ಅಮೇರಿಕ ಕಳಿಸಿದ ಸೈನ್ಯವನ್ನು ಹೈತಿ ಬಂದರಿನಲ್ಲಿ ಇಳಿಯದಂತೆ ಕೇವಲ 200 ಸಶಸ್ತ್ರ ಹೈತಿಯನ್ನರು ತಡೆದರು. ಇವರಿಗೆ ಹೆದರಿ ಅಮೇರಿಕನ್ ಯುದ್ಧನೌಕೆ ಹಿಂದೆ ಹೋಗಬೇಕಾಯಿತು.

ಹೈತಿಯ ಚುನಾಯಿತ ಅಧ್ಯಕ್ಷ ಅರಿಸ್ಟೈಡ್‌ರವರನ್ನು ಉರುಳಿಸಿ ಅಧಿಕಾರಕ್ಕೆ ಬಂದ ಮಿಲಿಟರಿ ಸರ್ಕಾರ ರಾಜಿನಾಮೆ ನೀಡಿ, ಚುನಾಯಿತ ಅಧ್ಯಕ್ಷರಿಗೆ ಅಧಿಕಾರ ವಹಿಸಿಕೊಡಬೇಕೆನ್ನುವ ವಿಶ್ವಸಂಸ್ಥೆ ನಿರ್ಣಯವನ್ನು ಜಾರಿ ಮಾಡಲು ಅಕ್ಟೋಬರ್ 30 ಕೊನೆ ದಿನವಾಗಿತ್ತು. ಇದನ್ನು ಜಾರಿ ಮಾಡಲು ಅಮೇರಿಕನ್ ಪಡೆ ಹೈತಿಗೆ ತೆರಳಿತ್ತು. ಹೈತಿಯಲ್ಲಿ ಅಮೇರಿಕದ ಸೈನ್ಯಕ್ಕೆ ಆದ ಮಂಗಳಾರತಿ ಸರ್ಕಾರಗಳ ತಪ್ಪು ಒಪ್ಪುಗಳೇನೇ ಇರಲಿ, ದೇಶ ಎಷ್ಟೇ ಚಿಕ್ಕದಿರಲಿ, ದುರ್ಬಲವಿರಲಿ ಜನ 'ಶಾಂತಿಪಾಲನೆ' 'ಪ್ರಜಾಪ್ರಭುತ್ವ' ಹೆಸರಿನಲ್ಲಿ ಸಾರ್ವಭೌಮತೆ ಹರಣ ಒಪ್ಪುವುದಿಲ್ಲ ಎಂಬುದು ಸ್ಪಷ್ಟವಾಗಿದೆ.

ಗ್ರೀಕ್‌ನಲ್ಲಿ ಸೋಶಲಿಸ್ಟ್ ಪಕ್ಷಕ್ಕೆ ಜಯ

ಗ್ರೀಸ್‌ನಲ್ಲಿ ಸೋಶಲಿಸ್ಟ್ ಪಕ್ಷ ಚುನಾವಣೆಯಲ್ಲಿ ಜಯಗಳಿಸಿದೆ. ಮಾಜಿ ಪ್ರಧಾನ ಮಂತ್ರಿ ಅಂದ್ರೇಯಿ ಪಾಪಾಂದ್ರು ನಾಯಕತ್ವದಲ್ಲಿ ಸೋಶಲಿಸ್ಟ್ ಪಕ್ಷ 300 ರಲ್ಲಿ 169 ಸೀಟುಗಳಿಸಿದೆ. ಬಲಪಂಥೀಯ ಪಕ್ಷ ನ್ಯೂ ಡೆಮಾಕ್ರಾಟಿಕ್ ಪಕ್ಷ 113 ಸೀಟುಗಳಿಸಿದೆ. ಕಮ್ಯುನಿಸ್ಟ್ ಪಕ್ಷ 9 ಸೀಟುಗಳಿಸಿದೆ.

ಈವರೆಗೆ ಆಳುವ ಪಕ್ಷವಾಗಿದ್ದ ನ್ಯೂ ಡೆಮಾಕ್ರಾಟಿಕ್ ಪಕ್ಷ ಅನುಸರಿಸಿದ್ದ ಆರ್ಥಿಕ ಉದಾರೀಕರಣ, ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳ ಖಾಸಗೀಕರಣ, ವೇತನ ಸ್ತಂಭನದ ನೀತಿಗಳ ವಿರುದ್ಧ ಜನರ ಮತ ಇದು. ಇದರಿಂದ ನಿರುದ್ಯೋಗ ವಿಪರೀತ ಹೆಚ್ಚಿ ಜನರ ಜೀವನಮಟ್ಟ ತೀವ್ರವಾಗಿ ಇಳಿಯಲಾರಂಭಿಸಿತ್ತು. ಸೋಶಲಿಸ್ಟ್ ಪಕ್ಷ ಈ ನೀತಿಗಳ ವಿರುದ್ಧ, ಕಲ್ಯಾಣ ಯೋಜನೆಗಳಿಗೆ ಹೆಚ್ಚಿನ ಹಣದ ನೀತಿಯ ಮೇಲೆ ಚುನಾವಣೆಯಲ್ಲಿ ಇಳಿದಿತ್ತು.

ಕ್ರಿಸ್ ಹನಿ ಕೊಲೆಗಾರರಿಗೆ ಶಿಕ್ಷೆ

ಆಫ್ರಿಕನ್ ನ್ಯಾಶನಲ್ ಕಾಂಗ್ರೆಸ್ ನಾಯಕ, ದಕ್ಷಿಣ ಆಫ್ರಿಕಾ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ, ಕ್ರಿಸ್ ಹನಿಯ ಕೊಲೆಯ ಆಪಾದನೆ ಮೇಲೆ ಇಬ್ಬರಿಗೆ ದಕ್ಷಿಣ ಆಫ್ರಿಕಾದ ಕೋರ್ಟು ಎರಡು-ವಾರಗಳ ವಿಚಾರಣೆಯ ನಂತರ ಶಿಕ್ಷೆ ವಿಧಿಸಿದೆ. ಕೊಲೆ ಆಪಾದಿತರಲ್ಲಿ ಒಬ್ಬ ಪೋಲೆಂಡ್‌ನಿಂದ ವಲಸೆ ಬಂದ ಜಾನೂಸ್ ವಾಲೂಸ್ ಹಾಗೂ ಇನ್ನೊಬ್ಬ ದಕ್ಷಿಣ ಆಫ್ರಿಕಾದ ವರ್ಣಭೇದ-ಪರ ಬಲಪಂಥೀಯ ಪಕ್ಷ ಕನ್ಸರ್ವೇಟಿವ್ ಪಕ್ಷದ ನಾಯಕ ಕ್ಲೈವ್ ಡರ್ಬಿ ಲೆವಿಸ್. ಈ ರಾಜಕಾರಣಿ ಮೇಲೆ ಕೊಲೆ ಪಿತೂರಿ ಹೂಡುವ ಆಪಾದನೆ ಸಾಬೀತಾಗಿದೆ. ಆತನ ಪತ್ನಿಯೂ ಕೊಲೆ ಪಿತೂರಿಯಲ್ಲಿ ಬಾಗವಹಿಸಿದ್ದರು ಎಂದು ಪ್ರಾಸಿಕ್ಯೂಷನ್ ಆಪಾದಿಸಿತ್ತು. ಆದರೆ ಕೋರ್ಟು ಆಕೆಯನ್ನು ನಿರಪರಾಧಿ ಎಂದು ಬಿಡುಗಡೆ ಮಾಡಿದೆ. ಪಿತೂರಿಯ ಅಂಗವಾಗಿ ಕೊಲೆ ಮಾಡಲು ತಯಾರಿಸಿದ್ದ ಪ್ರಮುಖ ನಾಯಕರ ಪಟ್ಟಿ ಆಪಾದಿತರ ವಿರುದ್ಧ ಮುಖ್ಯ ಸಾಕ್ಷಿಯಾಗಿತ್ತು. ಆ ಪಟ್ಟಿಯಲ್ಲಿ ನೆಲ್ಸನ್ ಮಂಡೇಲಾ ಸೇರಿದಂತೆ ಹಲವು ಹಿರಿಯ ನಾಯಕರ ಹೆಸರುಗಳು ಇದ್ದವು.

ಡಿಕ್ಲರ್ಕ್, ಮಂಡೇಲಾಗೆ ನೊಬೆಲ್ ಶಾಂತಿ ಪ್ರಶಸ್ತಿ

ದಕ್ಷಿಣ ಆಫ್ರಿಕಾದ ಅಧ್ಯಕ್ಷ ಡಿ ಕ್ಲರ್ಕ್ ಹಾಗೂ ಆಫ್ರಿಕನ್ ನ್ಯಾಶನಲ್ ಕಾಂಗ್ರೆಸ್ ನಾಯಕ ನೆಲ್ಸನ್ ಮಂಡೇಲಾರಿಗೆ ಈ ವರ್ಷದ ನೊಬೆಲ್ ಶಾಂತಿ ಪ್ರಶಸ್ತಿಯನ್ನು ಜಂಟಿಯಾಗಿ ನೀಡಲಾಗಿದೆ. 'ವರ್ಣ ಭೇದವನ್ನು ಶಾಂತಿಯುತವಾಗಿ ಕೊನೆಗೊಳಿಸಲು' ಈ ಇಬ್ಬರು ಮಾಡುತ್ತಿರುವ ಪ್ರಯತ್ನಗಳಿಗಾಗಿ ಈ ಗೌರವ ಎಂದು ನೊಬೆಲ್ ಪ್ರಶಸ್ತಿ ಸಮಿತಿ ತಿಳಿಸಿದೆ.

ಬಾಂಗ್ಲಾ ದೇಶ ಲೇಖಕಿಗೆ 'ಮರಣದಂಡನೆ'

ಮುಸ್ಲಿಂ ಮೂಲಭೂತವಾದಿಗಳ ಚಟುವಟಿಕೆ ತೀವ್ರವಾಗುತ್ತಿದೆ. ಮುಸ್ಲಿಂ ದೇಶಗಳಲ್ಲೇ ಅತ್ಯಂತ ಹೆಚ್ಚು ಉದಾರ ಜಾತ್ಯಾತೀತ ನೀತಿ ಉಳ್ಳ ಬಾಂಗ್ಲಾದೇಶದಲ್ಲಿ ಇತ್ತೀಚೆಗೆ ಸಾಹಬಾ ಸೈನಿಕ್ ಪರಿಷತ್ ಎಂಬ ಮುಸ್ಲಿಂ ಮೂಲಭೂತವಾದಿ ಗುಂಪು ಬಾಂಗ್ಲಾ ದೇಶದ ಲೇಖಕಿ ತಸ್ಲಿಮಾ ನಸರಿನ್ ಅವರಿಗೆ 'ಮರಣ ದಂಡನೆ' ವಿಧಿಸಿದೆ. ಆಕೆಯ ತಲೆ ಒಪ್ಪಿಸಿದವರಿಗೆ ಐವತ್ತು ಸಾವಿರ ಬಾಂಗ್ಲಾ ರೂಪಾಯಿಗಳ ಬಹುಮಾನ ಘೋಷಿಸಿದೆ. ಇದನ್ನು ಸಿಲ್‌ಹೆಟ್ ಎಂಬ ನಗರದಲ್ಲಿ ರ್‍ಯಾಲಿಯೊಂದರಲ್ಲಿ ಘೋಷಿಸಲಾಯಿತಂತೆ.

ಇದನ್ನು ಅವಾಮಿ ಲೀಗ್ ಸೇರಿದಂತೆ ಹಲವು ವಿರೋಧಿ ಪಕ್ಷಗಳು ಜಾತ್ಯಾತೀತ ಶಕ್ತಿಗಳು ತೀವ್ರವಾಗಿ ಖಂಡಿಸಿ, ಲೇಖಕಿಗೆ ಸರ್ಕಾರ ಪೋಲೀಸ್ ರಕ್ಷಣೆ ಕೊಡಬೇಕೆಂದು ಒತ್ತಾಯಿಸಿದೆ. ಬೇಗಮ್ ಖಲಿದಾ ಸರ್ಕಾರ ಈ ಬಲಪಂಥೀಯ ಮೂಲಭೂತವಾದಿಗಳೊಂದಿಗೆ ರಾಜಕೀಯ ಲಾಭಕ್ಕಾಗಿ ಸಂತುಷ್ಟಗೊಳಿಸುವ ನೀತಿ ಅನುಸರಿಸುತ್ತಿದೆ ಎಂದೂ ಆಪಾದಿಸಲಾಗಿದೆ.

ಸಮರ ಶೀಲ ಹೋರಾಟಕ್ಕೆ ಸಂಘಟಿತರಾಗಲು ಗ್ರಾಮೀಣ ಬ್ಯಾಂಕ್ ನೌಕರರಿಗೆ ಸೂರಿಯವರ ಕರೆ

ಅಖಿಲ ಕರ್ನಾಟಕ ಗ್ರಾಮೀಣ ಬ್ಯಾಂಕ್ ನೌಕರರ ಒಕ್ಕೂಟದ ನಾಲ್ಕನೇ ದ್ವೈವಾರ್ಷಿಕ ಮಹಾಧಿವೇಶನ ಹಾಗೂ 10ನೇ ವಾರ್ಷಿಕೋತ್ಸವ ಅಕ್ಟೋಬರ್ 2 ಮತ್ತು 3 ರಂದು ಮೈಸೂರು ನಗರದಲ್ಲಿ ಕಾವೇರಿ ಗ್ರಾಮೀಣ ಬ್ಯಾಂಕ್ ಅಧಿಕಾರಿಗಳ ಸಂಘ ಮತ್ತು ನೌಕರರ ಸಂಘದ ಆಶ್ರಯದಲ್ಲಿ ಜರುಗಿತು.

ಸಮ್ಮೇಳನದ ಪ್ರಾರಂಭದಲ್ಲಿ ಮಹಾಧಿವೇಶನಕ್ಕೆ ಆಗಮಿಸಿದ್ದ ಸುಮಾರು ಒಂದು ಸಾವಿರ ಪ್ರತಿನಿಧಿಗಳ ಮತ್ತು ವೀಕ್ಷಕರ ಮೆರವಣಿಗೆ ಮೈಸೂರಿನ ಮುಖ್ಯ ಬೀದಿಗಳಲ್ಲಿ ನಡೆಯಿತು. ಸಿಐಟಿಯು ಮೈಸೂರು ಜಿಲ್ಲಾ ಸಮಿತಿಯ ಅಧ್ಯಕ್ಷರಾದ ಕಾಂ. ಎಂ.ಎಸ್. ಉಗ್ರನರಸಿಂಹೇಗೌಡನವರು ಎ.ಐ.ಆರ್.ಆರ್.ಬಿ.ಇ.ಎ.ಯ ಧ್ವಜವನ್ನು ಹಾರಿಸಿದರು.

ಸಮ್ಮೇಳನವನ್ನು ಸಿಐಟಿಯು ಮುಖಂಡರಾದ ಕಾಂ. ಎಸ್. ಸೂರ್ಯನಾರಾಯಣರಾವ್‌ರವರು ಉದ್ಘಾಟಿಸಿದರು.

ಅವರು ತಮ್ಮ ಉದ್ಘಾಟನಾ ಭಾಷಣದಲ್ಲಿ ಕೇಂದ್ರ ಸರ್ಕಾರದ ಹೊಸ ಆರ್ಥಿಕ ನೀತಿ ಮತ್ತು ಖಾಸಗೀಕರಣದ ವಿರುದ್ಧ ಸಂಘಟಿತ ಹೋರಾಟ ನಡೆಸಲು ಐಕ್ಯ ಹೋರಾಟಗಳು ಬೆಳೆದು ಬರುತ್ತಿರುವ ಸಂದರ್ಭದಲ್ಲಿ ಕೋಮುವಾದದ ವಿಷ ಬೀಜ ಬಿತ್ತುತ್ತಿರುವ ಬಿಜೆಪಿಯ ಹಿಂದುತ್ವ ಪ್ರಚಾರದ ಬಗ್ಗೆ ಜಾಗರೂಕರಾಗಿರಬೇಕೆಂದೂ ವಿಚಾರವಂತರಾಗಿ ಸಂಘಟನಾ ಶಕ್ತಿಯನ್ನು ಬೆಳೆಸಿಕೊಳ್ಳಲು ಹೇಳಿ ಎಲ್ಲ ಮಟ್ಟದಲ್ಲೂ ಹೋರಾಟದಲ್ಲೂ ಸಿಐಟಿಯು ನಿಮ್ಮ ಜೊತೆಯಲ್ಲಿರುವುದೆಂದು ಆಶ್ವಾಸನೆ ಇತ್ತರು.

ಎ.ಐ.ಆರ್.ಆರ್.ಬಿ.ಇ.ಎ. ಪ್ರಧಾನ ಕಾರ್ಯದರ್ಶಿ ಕಾಂ. ದಿಲೀಪ್ ಮುಖರ್ಜಿ ಎ.ಐ.ಆರ್.ಆರ್.ಬಿ.ಇ.ಎ. ಸಂಘಟನಾ ಕಾರ್ಯದರ್ಶಿ ಕಾಂ. ಪಿ.ಎಸ್. ಎಂ. ರಾವ್ ಇನ್ನಿತರರು ಮಾತನಾಡಿದರು.

ಸಂಘಟದ ಅಧ್ಯಕ್ಷರಾದ ಕಾಂ. ಎಸ್. ರೇವಣ್ಣನವರು ಭೂಕಂಪದ ಸಂತ್ರಸ್ಥರಿಗೆ ಪರಿಹಾರವನ್ನು ಸಂಗ್ರಹಿಸಿದರಲ್ಲದೆ, ಭೂಕಂಪದಲ್ಲಿ ಸಾವಿಗೀಡಾದವರಿಗೆ ಸಂತಾಪ ಸೂಚಿಸಲು 2 ನಿಮಿಷ ಕಾಲ ಮೌನವನ್ನಾಚರಿಸಲು ಸಭಿಕರಲ್ಲಿ ಮನವಿ ಮಾಡಿಕೊಂಡು ಈ ಬಗ್ಗೆ ಒಂದು ಸಂತಾಪ ನಿರ್ಣಯವನ್ನು ಮಂಡಿಸಿದರು.

ರಾಜ್ಯಾಧ್ಯಕ್ಷರಾದ ಕಾಂ. ಆರ್.ಜಿ. ನರಗುಂದ ಅವರು ಸಮಾವೇಶದ ಅಧ್ಯಕ್ಷತೆ ವಹಿಸಿದ್ದರು.

ಕಾಂ. ಎಸ್. ರೇವಣ್ಣನವರ ಅಧ್ಯಕ್ಷತೆಯಲ್ಲಿ ಗ್ರಾಮದ ಸಾಲದ ಸೌಲಭ್ಯವನ್ನು ಬಲಪಡಿಸುವಲ್ಲಿ ಒಂದು ವಿಚಾರ ಸಂಕಿರಣವು ನಡೆಯಿತು.

ರೈತ ಸಂಘದ ಘಟಕ ರಚನೆ

ಗುಡ್ಡದ ಹಳ್ಳಿ (ಚಿತ್ರದುರ್ಗ) : 30.9.1993 ರಂದು ರೈತರು ಸಭೆ ಸೇರಿ ಗ್ರಾಮ ಘಟಕವನ್ನು ರಚಿಸಿಕೊಂಡರು. ಈ ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಪ್ರಾಂತ ರೈತ ಸಂಘದ ರಾಜ್ಯ ಕಾರ್ಯದರ್ಶಿ ಹಾಗೂ ಬಳ್ಳಾರಿ ಜಿಲ್ಲಾ ಸಮಿತಿಯ ಕಾರ್ಯದರ್ಶಿಯಾದ ಯು. ಬಸವರಾಜ್‌ರವರು ರೈತರ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ರೈತರು ಸಂಘಟಿತರಾಗಿ ಹೋರಾಟ ಮಾಡುವುದೊಂದೇ ದಾರಿ ಎಂದು ತಿಳಿಸಿದರು. ಪ್ರಾರಂಭದಲ್ಲಿ ತಾಲೂಕಿನ ಸಹ ಸಂಚಾಲಕರಾದ ಡಿ.ಎಂ. ಮಳಿಯಪ್ಪನವರು ಸ್ವಾಗತ ಕೋರುತ್ತಾ ಸಂಘಟನೆಯ ಪರಿಚಯ ಮಾಡಿಕೊಟ್ಟರು.

ಆಯ್ಕೆ ಮಾಡಿದ 11 ಜನರ ಸಮಿತಿಯಲ್ಲಿ ಅಧ್ಯಕ್ಷರಾಗಿ ಜಿ.ಕೆ. ಗೋವಿಂದಪ್ಪ, ಉಪಾಧ್ಯಕ್ಷರಾಗಿ ರಂಗಣ್ಣ.ಜಿ, ಕಾರ್ಯದರ್ಶಿಯಾಗಿ ವೆಂಕಟೇಶ್.ಬಿ, ಸಹಕಾರ್ಯದರ್ಶಿ ...

ಧಿಕಾರಿಗಳಾಗಿದ್ದಾರೆಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

ಬೇಟಿಗಡ್ಡೆ ಕ್ಯಾಂಪ್ (ಬಳ್ಳಾರಿ) : ಕಾಂ. ಎಂ. ಸತ್ಯನಾರಾಯಣರಾವ್‌ರವರ ಅಧ್ಯಕ್ಷತೆಯಲ್ಲಿ ಜರುಗಿದ ಪ್ರಾಂತ ರೈತ ಸಂಘದ ಸಭೆಯು ಬೇಟಿಗಡ್ಡೆ ಕ್ಯಾಂಪ್‌ನ ಪ್ರಾಂತ ರೈತ ಸಂಘದ ಘಟಕವನ್ನು ರಚಿಸಿತು. ಈ ಸಭೆಯ ನೇತೃತ್ವವನ್ನು ಜಿಲ್ಲಾ ಸಮಿತಿ ಸದಸ್ಯರಾದ ಎನ್. ದಿವಾಕರಪ್ಪ ವಹಿಸಿದ್ದರು. ಜಿಲ್ಲಾ ರೈತ ಮುಖಂಡ ಕೆ. ಗಾದಿಲಿಂಗಪ್ಪ ಗ್ರಾಮ ಘಟಕವನ್ನು ಉದ್ಘಾಟಿಸಿ ಮಾತನಾಡಿದರು.

ಅಧ್ಯಕ್ಷರಾಗಿ ಡಿ. ವೀರಭದ್ರರಾವ್, ಉಪಾಧ್ಯಕ್ಷರುಗಳಾಗಿ, ಕೆ. ಶ್ರೀನಿವಾಸರಾವ್, ಪಿ. ಸುಬ್ಬರಾಜು, ಕಾರ್ಯದರ್ಶಿಯಾಗಿ ಪಿ. ರಾಜೇಂದ್ರ ಪ್ರಸಾದ್ ಹಾಗೂ 10 ಜನ ಸದಸ್ಯರನ್ನೊಳಗೊಂಡ ಸಮಿತಿಯನ್ನು ರಚಿಸಲಾಯಿತೆಂದು ಪತ್ರಿಕಾ ಹೇಳಿಕೆ ತಿಳಿಸಿದೆ.

ಬಾದನ ಹಟ್ಟಿ (ಬಳ್ಳಾರಿ): ದಿನಾಂಕ 10.10.1993 ರಂದು ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಮುಖಂಡರಾದ ಕಾಂ. ಕೆ. ಗಾದಿಲಿಂಗಪ್ಪರವರ [illegible] ಅಧ್ಯಕ್ಷತೆಯಲ್ಲಿ ರೈತರು ಸಭೆ ಸೇರಿ ಪ್ರಾಂತ ರೈತ ಸಂಘದ ಗ್ರಾಮ ಘಟಕವನ್ನು ರಚಿಸಿಕೊಂಡರು. ಸಭೆಯನ್ನುದ್ದೇಶಿಸಿ ಗಾದಿ ಲಿಂಗಪ್ಪನವರು ಮಾತನಾಡಿ ಡಂಕೆಲ್ ಪ್ರಸ್ತಾಪದ ಅಪಾಯಗಳನ್ನು ವಿವರಿಸಿದರು. ಜಿಲ್ಲಾ ಉಪಾಧ್ಯಕ್ಷರಾದ ವಿ.ಎಸ್. ಶಿವಶಂಕರ್ ಸಭೆಯಲ್ಲಿ ಹಾಜರಿದ್ದು ಮಾರ್ಗದರ್ಶನ ನೀಡಿದರು.

ಈ ಸಭೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಯಿತು. ಅಧ್ಯಕ್ಷರಾಗಿ ಪುರಗೈ ಬಸಪ್ಪ, ಉಪಾಧ್ಯಕ್ಷರಾಗಿ ಕಾಶೀಮ್ ಸಾಬ್, ಬಾಲಿಕರ ಕರೆಪ್ಪ, ಮೇಟಿ ಧರೆಪ್ಪ, ಕಾರ್ಯದರ್ಶಿಯಾಗಿ ಎಸ್.ಕೆ. ಬಸವರಾಜ್, ಸಹ ಕಾರ್ಯದರ್ಶಿ ಗೋರುವರ ಹೊನ್ನೂರಪ್ಪ ಹಾಗೂ 13 ಜನರ ಸಮಿತಿಯನ್ನು ರಚಿಸಲಾಯಿತೆಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

ಅಂಗನವಾಡಿ ಕಾರ್ಯಕರ್ತೆಯರ ಸಭೆ

ಹಾನಗಲ್ (ಚಿತ್ರದುರ್ಗ) : ಇಲ್ಲಿನ ಅಂಗನವಾಡಿ ಕಾರ್ಯಕರ್ತೆಯರು 30.9.1993 ರಂದು ಸಭೆ ಸೇರಿ ತಮ್ಮ ಸಮಸ್ಯೆಗಳ ಪರಿಹಾರದ ಮಾರ್ಗವನ್ನು ಕಂಡುಕೊಳ್ಳುವತ್ತ ಹೆಜ್ಜೆ ಹಾಕಿದರು. ಈ ಸಭೆಗೆ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಪ್ರಾಂತ ರೈತ ಸಂಘದ ರಾಜ್ಯ ಕಾರ್ಯದರ್ಶಿಯಾದ ಯು. ಬಸವರಾಜ್ ಮಾತನಾಡಿ ಸಂಘಟನೆ ಯಾಕೆ ಬೇಕು ಎನ್ನುವುದನ್ನು ವಿವರಿಸಿ ಸಂಘಟಿತ ಹೋರಾಟದ ಫಲ ಏನು ಎನ್ನುವುದನ್ನು ವಿವರಿಸಿದರು. ಸಂಘಟಿತರಾಗಿ ಹೋರಾಟ ಮಾಡುವುದೇ ಪರಿಹಾರದ ಮಾರ್ಗ ಎಂದು ತಿಳಿಸಿದರು. ಅಂಗನವಾಡಿ ಶಿಕ್ಷಕಿಯಾದ ಲೀಲಾ ಬಾಯಿಯವರು ಮಾತನಾಡಿ ಅಂಗನವಾಡಿ ಶಿಕ್ಷಕಿಯರು ಎದುರಿಸುತ್ತಿರುವ ಹಲವಾರು ಸಮಸ್ಯೆಗಳನ್ನು ವಿವರಿಸಿ ಇದನ್ನು ಪರಿಹರಿಸಲು ಸಂಘಟನೆಯೊಡನೆ ಹೆಜ್ಜೆ ಇಡಬೇಕೆಂದರು.

17.10.19 93 ಕ್ಕೆ ಮತ್ತೊಮ್ಮೆ ಸಭೆ ಸೇರಿ ಒಂದು ಸಮಿತಿಯನ್ನು ರಚಿಸಲು ತೀರ್ಮಾನಿಸಲಾಯಿತು. ಸಂಘಟನೆಯ ತುರ್ತು ಕೆಲಸಗಳಿಗೆ ಅನುಕೂಲವಾಗುವ ರೀತಿಯಲ್ಲಿ ಸಂಘಟನಾ ಕಾರ್ಯದರ್ಶಿಗಳಾಗಿ ಮುನಿತಾಯಮ್ಮ ಹಾಗೂ ಲೀಲಾ ಬಾಯಿಯವರನ್ನು ಆಯ್ಕೆ ಮಾಡಲಾಯಿತು. ಶ್ರೀ ದೇವಿಯವರು ವಂದನಾರ್ಪಣೆ ಮಾಡಿದರು.

ಅಕ್ರಮ ಭೂಮಿಯ ಸಕ್ರಮಕ್ಕೆ ಒತ್ತಾಯ

ಕೋಟೆಕಾರು ಸರ್ಕಲ್ ರೈತ ಸಂಘದ ಆಶ್ರಯದಲ್ಲಿ ಅಕ್ಟೋಬರ್ 2 ರಂದು ಕೋಟೆಕಾರ್ ಸರ್ಕಲ್ ವ್ಯಾಪ್ತಿಯ, ಕೋಟೆಕಾರು, ಸೋಮೇಶ್ವರ, ಉಳ್ಳಾಲ, ಪೆರ್ಮನ್ನೂರು, ಕೂಣಾಜೆ, ಮಂಜೆನಾಡಿ ಹಾಗೂ 14 ಗ್ರಾಮಗಳಿಗೆ ಒಳಪಟ್ಟ ರೈತ- ಕೃಷಿಕಾರ್ಮಿಕರ, ಸರಕಾರಿ ಭೂಮಿ ಅಕ್ರಮಿಸಿಕೊಂಡಿರುವವರ ಸಮಾವೇಶವು ಕುತ್ತಾರ ಪದವಿನ ಮುನ್ನೂರು ಯುವಕ ಮಂಡಲದ ಕಚೇರಿಯಲ್ಲಿ ಜರುಗಿತು.

ಸಮಾವೇಶದ ಅಧ್ಯಕ್ಷತೆಯನ್ನು ಮಂಗಳೂರು ತಾಲೂಕು ರೈತ ಸಂಘದ ಅಧ್ಯಕ್ಷರಾದ ಪಾವಲಿ ಡಿ. ಸೋಜರು ವಹಿಸಿದ್ದರು.

ಪ್ರಾರಂಭದಲ್ಲಿ ಸಂಘದ ಕಾರ್ಯದರ್ಶಿ ಕಾಂ. ಕಟ್ಟೆಮೊರೆ ಶ್ರೀನಿವಾಸ್ ಆಳ್ವರು, ಸ್ವಾಗತಿಸುತ್ತಾ ಸಮಾವೇಶದ ಉದ್ದೇಶವನ್ನು ವಿವರಿಸಿದರು. ಬಳಿಕ ಜಿಲ್ಲಾ ರೈತ ಸಂಘದ ಉಪಾಧ್ಯಕ್ಷರಾದ ಕಾಂ. ಜನಾರ್ಧನ ನಾಯಕ್‌ರವರು ರೈತರ ಹಾಗೂ ಭೂ ಅಕ್ರಮಗಾರರ ಸಮಸ್ಯೆಗಳ ಬಗ್ಗೆ ವಿವರಿಸಿ ಮಾತನಾಡಿದರು.

ಜಿಲ್ಲಾ ರೈತ ಸಂಘದ ಅಧ್ಯಕ್ಷರಾದ ಕಾಂ. ಕೆ. ಆರ್. ಶ್ರೀಯಾನ್‌ರವರು ಮಾತನಾಡಿದ ಈ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಲು ಬೇಕಾದ ಬಲವಾದ ಚಳುವಳಿಯ ಅವಶ್ಯತೆಯನ್ನು ಒತ್ತಿ ಹೇಳಿದರು.

ಸಭೆಯಲ್ಲಿ ಅಕ್ರಮಿತ ಭೂಮಿಯನ್ನು ಯಾವುದೇ ಗಡಿಮಿತಿಇಲ್ಲದೆ ಕಾನೂನಿನ ತಿದ್ದುಪಡಿ ತಂದು ಸಕ್ರಮಗೊಳಿಸಬೇಕೆಂದು, ಭೂನ್ಯಾಯ ಮಂಡಳಿಯಿಂದ ಹಕ್ಕುದಾರರೆಂದು ಘೋಷಿಸಿದ ಭೂಮಿಯ ಮೂಲಕ ಹಕ್ಕು ಕೂಡಲೇ ಜಾರಿಗೊಳಿಸಬೇಕೆಂದು ಕರ್ನಾಟಕ ಸರಕಾರವನ್ನು ಒತ್ತಾಯಿಸುವ ನಿರ್ಣಯಗಳನ್ನು ಅಂಗೀಕರಿಸಲಾಯಿತು.

ಸಭೆಯಲ್ಲಿ ಸಂಘಟನೆಗೆ ಶುಭಕೋರಿ, ಕೃಷ್ಣಪ್ಪ ಟೈಲರ್, ಸುಕುಮಾರ್, ಬಿ. ಬಾಬು ಪೂಜಾರಿ, ರಾಜೀವ ಮೆಂಡನ್, ವಿಷ್ಣು ಮೂರ್ತಿ, ವೆಂಕಟಪ್ಪ ಶೆಟ್ಟಿ ವಿಶ್ವನಾಥ ಬಂಗೇರ, ಗಂಗಯ್ಯ ಗಟ್ಟಿ ಪಿಲಾರು, ರಾಮನಾಯಕ್, ಮಹಮ್ಮದ್ ಆಶ್ರಫ್ ಮಾತನಾಡಿದರು.

ತಾಲೂಕು ರೈತ ಸಂಘದ ಕಾರ್ಯದರ್ಶಿ ಕಾಂ. ರಾಮಚಂದ್ರ ಉಚ್ಚಿಲ್ ರೈತರ ಹಾಗೂ ಭೂ ಆಕ್ರಮಣಗಾರರ ಚಳುವಳಿಯನ್ನು ಮುಂದುವರಿಸಿ, ಕೇಳಿಕೆಗಳನ್ನು ಈಡೇರಿಸಿಕೊಡಲು ಸರಕಾರವನ್ನು ಒತ್ತಾಯಿಸುವ ಅಗತ್ಯವನ್ನು ವಿವರಿಸಿದರು.

ಕೊನೆಗೆ ಮುಂದಿನ ವರ್ಷಕ್ಕೆ 31 ಮಂದಿಯ ಹೊಸ ಸಮಿತಿಯನ್ನು ಚುನಾಯಿಸಲಾಯಿತು. ಶ್ರೀ ಪರಮೇಶ್ವರ ಶೆಟ್ಟಿ ಅಧ್ಯಕ್ಷರು, ಗಂಗಯ ಗಟ್ಟಿ ಪಿಲಾರು, ವಿಶ್ವನಾಥ ಬಂಗೇರ, ಬೆನಡಿಕ್ಟ್ ನೂರೊನ್ಹಾ ಉಪಾಧ್ಯಕ್ಷರು, ಶ್ರೀನಿವಾಸ ಆಳ್ವ ಕಾರ್ಯದರ್ಶಿ, ಜಿ.ಬಿ. ಸಂಜೀವ ಪಿಲಾರು, ಆನಂದ ಬೆಳ್ಳಾಡ, ಕೃಷ್ಣ ಶೆಟ್ಟಿ ಜೊತೆ ಕಾರ್ಯದರ್ಶಿಯಾಗಿ, ಉಗ್ಗಪ್ಪ ಶೆಟ್ಟಿ ಕೋಶಾಧಿಕಾರಿಯನ್ನಾಗಿ ಚುನಾಯಿಸಲಾಯಿತು. ಕಾರ್ಯದರ್ಶಿ ಶ್ರೀನಿವಾಸ ಆಳ್ವರ ಧನ್ಯವಾದದೊಂದಿಗೆ ಸಭೆಯ ಕೊನೆಗೊಂಡಿತು.

KRNM/BGS-405 MAG(2) PRB DECR 319-78/79

ರಷ್ಯಾದ ಸರ್ವಾಧಿಕಾರಿ ಯೆಲ್ಟ್ಸಿನ್ ಪ್ರತಿಕೃತಿ ದಹನ
ರಾಜ್ಯ ಸಮಿತಿ ಕರೆಗೆ ಸ್ಪಂದನ

ಸಿಪಿಐ(ಎಂ)ನ ರಾಜ್ಯ ಸಮಿತಿ ಕರೆಯ ಮೇರೆಗೆ ರಾಜ್ಯಾದ್ಯಂತ ಅಕ್ಟೋಬರ್ 14 ರಂದು ರಷ್ಯಾದ ಸರ್ವಾಧಿಕಾರಿ ಯೆಲ್ಟ್ಸಿನ್‌ನ ಕೃತ್ಯಗಳನ್ನು ಖಂಡಿಸಲು ಖಂಡನಾ ಮೆರವಣಿಗೆಗಳನ್ನು ನಡೆದವು. ಅದರ ಕೆಲವು ವರದಿಗಳನ್ನು ಕೊಡುತ್ತಿದ್ದೇವೆ.

ಶಿವಮೊಗ್ಗ: ಅಕ್ಟೋಬರ್ 14, ರಂದು ನಡೆದ ರಷ್ಯಾದ ಸರ್ವಾಧಿಕಾರಿ ಯೆಲ್ಟ್ಸಿನ್ ಕೃತ್ಯಗಳನ್ನು ವಿರೋಧಿಸಿ ಸ್ಥಳೀಯ ಶಾಖೆಯವರು ಮೆರವಣಿಗೆಯನ್ನು ಮಾಡಿ ಯೆಲ್ಟ್ಸಿನ್‌ನ ಪ್ರತಿಕೃತಿಯನ್ನು ದಹನ ಮಾಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾ ಕಾರ್ಯದರ್ಶಿ ಎಸ್.ಬಿ. ಶಿವಶಂಕರ್‌ರವರು ರಷ್ಯಾದ ಇತ್ತೀಚಿನ ಬೆಳವಣಿಗೆಯ ಕೇಂದ್ರ ಬಿಂದು ಹಿಟ್ಲರ್ ಪ್ರತಿಬಿಂಬವಾದ ಯೆಲ್ಟ್ಸಿನ್. ಆದ್ದರಿಂದ ಈತನ ಕೃತ್ಯವನ್ನು ಭಾರತದ ಪ್ರಜೆಗಳು ಖಂಡಿಸಬೇಕೆಂದರು. ಕಾಂ. ಎಸ್.ವಿ. ಗಜೇಂದ್ರ, ಬಿ.ಎಸ್.ದಾಸ್ ಮುಂತಾದವರು ಹಾಜರಿದ್ದು ಮೆರವಣಿಗೆಕಾರರನ್ನುದ್ದೇಶಿಸಿ ಮಾತನಾಡಿದರು. ಆನಂತರ ರಷ್ಯಾದ ರಾಯಭಾರಿಗೆ ಟೆಲಿಗ್ರಾಂ ನೀಡಲಾಯಿತು. ಇದೇ ರೀತಿ ಭದ್ರಾವತಿ ತೀರ್ಥಹಳ್ಳಿಗಳಲ್ಲಿಯು ಕಾರ್ಯಕ್ರಮ ನಡೆದಿದೆಯೆಂದು ಪತ್ರಿಕಾ ಪ್ರಕಟಣೆ ತಿಳಿಸಿವೆ.

ದಾಂಡೇಲಿ: ಅಕ್ಟೋಬರ್ 14 ರ ಸಂಜೆ ಐದು ಮೂವತ್ತಕ್ಕೆ ರಷ್ಯಾದ ಪ್ರಜಾಪ್ರಭುತ್ವ ವಿರೋಧಿ ಸರ್ವಾಧಿಕಾರಿ ಯೆಲ್ಟ್ಸಿನ್‌ನ ಪ್ರತಿಕೃತಿಯನ್ನು ನಗರದ ಬೀದಿ ಬೀದಿಯಲ್ಲಿ ಮೆರವಣಿಗೆ ನಡೆಸಿದರು. ದಾರಿಯುದ್ದಕ್ಕೂ ಯೆಲ್ಟ್ಸಿನ್‌ನ ಗೂಂಡಾಗಿರಿಯನ್ನು ವಿರೋಧಿಸಿ ಘೋಷಣೆಗಳನ್ನು ಕೂಗಿದರು. ನಂತರ ಕಿತ್ತೂರು ಚೆನ್ನಮ್ಮ ವೃತ್ತದಲ್ಲಿ ಯೆಲ್ಟ್ಸಿನ್‌ನ ಪ್ರತಿಕೃತಿಯನ್ನು ಮಾಜಿ ನಗರಸಭಾ ಅಧ್ಯಕ್ಷರಾದ ಟಿ.ಎಸ್. ನಾಯ್ಡುರವರು ಅಗ್ನಿ ಸ್ಪರ್ಶ ಮಾಡಿ ದಹಿಸಿದರು.

ಮಹಿಳಾ ಸಂಘಟನೆ ರಚನೆ

ತೆಂಕಸಿಡ್ಲೂರು : ಮಹಿಳೆಯರು ಬರೀ ಮನೆಗಷ್ಟೇ ಸೀಮಿತವಲ್ಲವೆಂದು ತಿಳಿಸಲು ಇಲ್ಲಿನ ಗ್ರಾಮದ ಮಹಿಳೆಯರು ಅಕ್ಟೋಬರ್ 10 ರಂದು ಗರಡಿಮಜಲು ಹೈಸ್ಕೂಲ್‌ನಲ್ಲಿ ಸಭೆ ಸೇರಿ ಮಹಿಳಾ ಸಂಘಟನೆಯನ್ನು ರಚಿಸಿದರು. ಈ ಸಭೆಯನ್ನು ಡಿ.ವೈ.ಎಫ್.ಐನ ಸ್ಥಳೀಯ ಘಟಕ ಏರ್ಪಡಿಸಿ ಸಭೆಯನ್ನು ಯಶಸ್ವಿಯಾಗಿ ನೆರವೇರಿಸಿತು.

ಸಭೆಯ ಅಧ್ಯಕ್ಷತೆಯನ್ನು ಶ್ರೀಮತಿ ಯಶೋಧ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಕುಮಾರಿ ಉತ್ಕಲ, ಕೆ. ಶಂಕರ್, ಉಡುಪಿ ಡಿ.ವೈ.ಎಫ್.ಐ ಘಟಕದ ಕಾರ್ಯದರ್ಶಿ ಗುರುರಾಜ ಶೆಟ್ಟಿಗಾರ, ಕೊಡವೂರ ಬೀಡಿ ಅಧ್ಯಕ್ಷರಾದ ದೋಗು ಸುವರ್ಣರು ಉಪಸ್ಥಿತರಿದ್ದರು. ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಕೊಳ್ಳಲು ಮಹಿಳೆ ಸಂಘಟನೆ ಅವಶ್ಯವೆಂದೂ ಸಭೆಯು ಅಭಿಪ್ರಾಯಪಟ್ಟು, ಈ ದಿಕ್ಕಿನಲ್ಲಿ ಮುನ್ನಡೆಯಲು ಒಂದು ಸಮಿತಿಯನ್ನು ರಚಿಸಲಾಯಿತು. ಈ ಸಮಿತಿಯಲ್ಲಿ ಅಧ್ಯಕ್ಷರಾಗಿ ಗಿರಿಜ (ಈಶ್ವರ ನಗರ) ಉಪಾಧ್ಯಕ್ಷರಾಗಿ ಪುಷ್ಪ, ಕಾರ್ಯದರ್ಶಿಯಾಗಿ ವಾರಿಜ ಕೆಳಾರ್ಕಳಬೆಟ್ಟು, ಸಹ ಕಾರ್ಯದರ್ಶಿಯಾಗಿ ದೇಬಿ, ಕೋಶಾಧಿಕಾರಿಯಾಗಿ ವಾಸಂತಿ, ಹಾಗೂ ಜನರನ್ನೊಳಗೊಂಡ 12 ಜನರನ್ನು ಆರಿಸಲಾಯಿತು.

ಕುಮಾರಿ, . ಉತ್ಕಲ, ಕೆ.ಶಂಕರ್, ಗುರುರಾಜ ಶೆಟ್ಟಿಗಾರ, ದೋಗು ಸುವರ್ಣರು ಸಭೆಯನ್ನುದ್ದೇಶಿಸಿ ಮಾತನಾಡಿದರು. ಡಿ.ವೈ.ಎಫ್.ಐನ ಉಮೇಶ್ ಕುಂದರ್ ಸ್ವಾಗತಿಸಿ ಧನ್ಯವಾದವನ್ನರ್ಪಿಸಿದರು.

ಬಸ್ಸಿನ ಸೌಕರ್ಯಕ್ಕಾಗಿ ರಸ್ತೆ ತಡೆ

ಯಲ್ಲಾಪುರ (ಬಳ್ಳಾರಿ) : ನಿಗದಿತ ಸಮಯದಲ್ಲಿ ಬಸ್ಸುಗಳನ್ನು ಓಡಿಸಿ ಸಾರ್ವಜನಿಕರ ಪ್ರಯಾಣಕ್ಕೆ ಅನುಕೂಲ ಕಲ್ಪಿಸಲು ಕೆ.ಎಸ್.ಆರ್.ಟಿ.ಸಿ.ಯು ಅಸಮರ್ಥತೆ ಎಲ್ಲರಿಗೂ ಗೊತ್ತಿರುವ ಸಂಗತಿ.

ಇದರಿಂದ ಹೆಚ್ಚು ತೊಂದರೆ ಪಡುವವರು ರೈತರು ಹಾಗೂ ವಿದ್ಯಾರ್ಥಿಗಳಾಗಿದ್ದಾರೆ. ಈ ಅನಿಯಮಿತತೆಯನ್ನು ಪ್ರತಿಭಟಿಸಿ ಈ ಗ್ರಾಮದ ವಿದ್ಯಾರ್ಥಿಗಳು ಹಾಗೂ ರೈತರು ದಿನಾಂಕ 9.10.1993 ರಂದು ಕುರುಗೋಡು ಹಾಗೂ ಕಂಪ್ಲಿ ಹೆದ್ದಾರಿಯಲ್ಲಿ ರಸ್ತೆ ತಡೆ ಚಳುವಳಿಯನ್ನು ನಡೆಸಿದರು. ಬೆಳಿಗ್ಗೆಯಿಂದ ಮಧ್ಯಾಹ್ನ ಒಂದು ಗಂಟೆಯವರೆಗೂ ಯಶಸ್ವಿ ರಸ್ತೆ ತಡೆ ಚಳುವಳಿ ನಡೆಸಿದಾಗ ಅಲ್ಲಿಗೆ ಆಗಮಿಸಿದ ಕೆ.ಎಸ್.ಆರ್.ಟಿ.ಸಿ. ಅಧಿಕಾರಿಗಳು ನಿಮ್ಮ ಬೇಡಿಕೆಗಳನ್ನು ತಕ್ಷಣವೇ ಈಡೇರಿಸಲು ಪ್ರಯತ್ನಿಸಲಾಗುವುದೆಂದು ಆಶ್ವಾಸನೆಯನ್ನು ನೀಡಿದರು. ಅಧಿಕಾರಿಗಳ ಆಶ್ವಾಸನೆಯಂತೆ ರಸ್ತೆ ತಡೆಯನ್ನು ಹಿಂತೆಗೆದುಕೊಳ್ಳಲಾಯಿತು. ಈ ಯಶಸ್ವಿ ರಸ್ತೆ ತಡೆ ಚಳುವಳಿಯ ನೇತೃತ್ವವನ್ನು ಪ್ರಾತ ರೈತ ಸಂಘದ ಉಪಾಧ್ಯಕ್ಷರಾದ ವಿ.ಎಸ್. ಶಿವಶಂಕರ, ಜಿಲ್ಲಾ ಸಮಿತಿ ಸದಸ್ಯರಾದ ಕೆ. ಗಾದಿಲಿಂಗಪ್ಪ, ಜಿಲ್ಲಾ ಕಾರ್ಯದರ್ಶಿ ಯು. ಬಸವರಾಜ್, ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಎಸ್. ಪ್ರಸನ್ನ ಕುಮಾರ್, ಎಸ್.ಎಫ್.ಐನ ನಾಗರಾಜ್, ಹಮಾಲಿ ಸಂಘದ ಎಂ.ಆರ್.ತಿಮ್ಮಪ್ಪ, ಕೂಲಿಕಾರ ಸಂಘದ ಕೆ. ರಾಮಣ್ಣ, ಎಸ್. ದಿವಾಕರ ವಹಿಸಿ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಸಾದರ-ಸ್ವೀಕಾರ

ನವಕರ್ನಾಟಕ ಪಬ್ಲಿಕೇಷನ್ಸ್ (ಪ್ರೈ) ಲಿಮಿಟೆಡ್ ಇವರು ವಿಶ್ವಾಸದಿಂದ ಐಕ್ಯರಂಗಕ್ಕೆ ಕಳುಹಿಸಿರುವ ಈ ಕೆಳಗೆ ಕಂಡ ಪುಸ್ತಕಗಳನ್ನು ಆದರದಿಂದ ಸ್ವೀಕರಿಸಲಾಗಿದೆ.

ಹಿಂದುತ್ವ ಹಿಂದೆ ಮುಂದೆ ಲೇಖಕರು -ಜಿ ರಾಮಕೃಷ್ಣ	ರೂ.3-00
ಮತಾಂಧತೆ-ದೇಶ ಎತ್ತ ಸಾಗುತ್ತಿದೆ? ಲೇಖಕರು -ಡಾ.ಕೆ.ಎಲ್. ಗೋಪಾಲಕೃಷ್ಣಯ್ಯ	ರೂ.2-00
ನವಕರ್ನಾಟಕ ವ್ಯಾಕರಣ ಕೈಗನ್ನಡಿ ಲೇಖಕರು- ಕೆ. ದಾಮೋದರ ಐತಾಳ	ರೂ.20-00
ನಿತ್ಯ ಜೀವನದಲ್ಲಿ ಕಾನೂನು ಪುಸ್ತಕ-1 ನಿತ್ಯ ಜೀವನದಲ್ಲಿ ಕಾನೂನು ಪುಸ್ತಕ-2 ಲೇಖಕರು -ಎಸ್. ಆರ್. ಗೌತಮ್	ರೂ. 25-00
ನಿಮ್ಮ ಮಾನಸಿಕ ಆರೋಗ್ಯವನ್ನು ಹೆಚ್ಚಿಸಿಕೊಳ್ಳಿ ಲೇಖಕರು -ಡಾ. ಸಿ.ಆರ್. ಚಂದ್ರಶೇಖರ್	ರೂ.30-00
ಇದೇಕೆ ಹೀಗೆ? (ಜ್ಞಾನ ವಿಜ್ಞಾನ ಮಾಲೆ) ಅನು. ಕೊಳ್ಳೆಗಾಲ ಶರ್ಮ	ರೂ.40-00
ಆಹಾರ, ಪರಿಸರ ಮತ್ತು ಆರೋಗ್ಯ ಅನು. ಡಾ. ಸಿ.ಆರ್. ಚಂದ್ರಶೇಖರ್	ರೂ.30-00

ಪ್ರಕಾಶಕರು:
ನವಕರ್ನಾಟಕ ಪಬ್ಲಿಕೇಷನ್ ಪ್ರೈವೇಟ್ ಲಿಮಿಟೆಡ್
ಎಂಬೆಸಿ, ಕ್ರೆಸೆಂಟ್ ರಸ್ತೆ, ಬೆಂಗಳೂರು-560 001

ಕಾಂ. ಸೇಸ ಅತಿಕಾರಿಯವರ ನಿಧನ

ಜಪ್ಪಿನ ಮೊಗ್ರು ಸಿಪಿಐ(ಎಂ) ಪಕ್ಷದ ಹಿರಿಯ ಸದಸ್ಯರಾದ ಕಾಂ. ಸೇಸ, ಅತಿಕಾರಿಯವರು ತಾರೀಕು 6-10-1993 ರಂದು ನಿಧನರಾಗಿದ್ದಾರೆ.

ದಿವಂಗತರಿಗೆ 70 ವರ್ಷ ವಯಸ್ಸಾಗಿತ್ತು. ಪತ್ನಿ, ಮೂರು ಗಂಡು ಹಾಗೂ ಮೂರು ಮಂದಿ ಹೆಣ್ಣು ಮಕ್ಕಳನ್ನು ಅಗಲಿರುತ್ತಾರೆ. ಇವರು ಜಪ್ಪಿನ ಮೊಗ್ರುವಿನಲ್ಲಿ ಪಕ್ಷದ ಸಂಘಟನೆಯನ್ನು ಬೆಳೆಸುವುದರಲ್ಲಿ ಶಕ್ತಿ ಮೀರಿ ದುಡಿದಿರುತ್ತಾರೆ.

ಪಕ್ಷದ ಶಾಖೆಯು ಸಭೆ ಸೇರಿ ದಿವಂಗತರಗೆ ಶ್ರದ್ಧಾಂಜಲಿಯನ್ನರ್ಪಿಸಿದೆ. ಡಿ.ವೈ.ಎಫ್.ಐ ಜಪ್ಪಿನ ಮೊಗ್ರು ಘಟಕ ತನ್ನ ತೀವ್ರ ಸಂತಾಪವನ್ನು ವ್ಯಕ್ತಪಡಿಸಿರುತ್ತದೆ. ಮಂಗಳೂರು ಮಹಾನಗರ ಪಾಲಿಕೆಯ ಸದಸ್ಯರಾದ ಕಾಂ. ಜೆ. ಸದಾಶಿವ ಶೆಟ್ಟಿಯವರು ತಮ್ಮ ಸಂತಾಪವನ್ನು ವ್ಯಕ್ತಪಡಿಸಿದ್ದಾರೆ.

ಪಾಕಿಸ್ತಾನದಲ್ಲಿನ ಚುನಾವಣೆಯಲ್ಲಿ.........

ಪುಟ 1ರಿಂದ

ಹದ ಪರಿಕಲ್ಪನೆಯನ್ನೇ ಒಡೆದಿದೆ.

ಈ ಪರಿಣಾಮಗಳು ಪಾಕಿಸ್ತಾನವೂ ಸಹ ಒಂದೇ ರಾಷ್ಟ್ರೀಯತೆಯುಳ್ಳ ದೇಶವಲ್ಲ, ಬಹುರಾಷ್ಟ್ರೀಯತೆಯ ದೇಶ ಅದು ಎಂಬುದನ್ನು ಸ್ಪಷ್ಟ ಪಡಿಸಿದೆ. ಪಂಜಾಬಿಗಳು, ಸಿಂಧಿಗಳು, ಬಲೂಚಿಯನ್ನರು ಮತ್ತು ಪಠಾಣರ ನಡುವಿನ ಘರ್ಷಣೆ ಇದನ್ನು ಬಲವಾಗಿ ಪ್ರತಿಪಾದಿಸಿದೆ. ಪಾಕಿಸ್ತಾನದ ಬಹುತೇಕ ಜನ ಮುಸ್ಲಿಮರಾದ ಮಾತ್ರಕ್ಕೆ ಅವರೆಲ್ಲ ಒಂದೇ ರಾಷ್ಟ್ರೀಯತೆಗೆ ಸೇರಿದವರೆನ್ನುವುದು ತಪ್ಪಾಗುತ್ತದೆ. ಒಮ್ಮೆ ಅದು ಹಾಗಿದ್ದರೆ ಮುಸ್ಲಿಮರ ರಂಗವೊಂದು ಚುನಾವಣೆಯನ್ನು ಪೂರ್ಣವಾಗಿ ಗೆಲ್ಲುತ್ತಿತ್ತು. ಬೇರೆ ಬೇರೆ ಭಾಷೆ ಮಾತನಾಡುವ ಬೇರೆ ಬೇರೆ ಸಂಸ್ಕೃತಿಯ ಜನ ಬೇರೆ ಬೇರೆ ರಾಷ್ಟ್ರೀಯತೆಯ ಜನ ಅಲ್ಲಿದ್ದಾರೆ.

ಶ್ರೀಮತಿ ಬೆನಜಿರ್ ಭುಟ್ಟೋ ಹಿಂದೆ ಪ್ರಧಾನ ಮಂತ್ರಿಯಾಗಿದ್ದಾಗ ಭಾರತ ಮತ್ತು ಪಾಕಿಸ್ತಾನಗಳೆರಡಲ್ಲೂ ಅವರು ಸದ್ಭಾವನೆಯನ್ನು ಗಿದ್ದಿದ್ದರು. ಆದರೆ ಅದನ್ನು ಅವರು ಸರಿಯಾಗಿ ಬಳಸಿಕೊಳ್ಳಲಿಲ್ಲ. ಪ್ರಜಾಪ್ರಭುತ್ವದ ಪುನರ್ ಸ್ಥಾಪನೆಗಾಗಿ ಆಕೆ ಹೋರಾಡಿದ್ದರಿಂದ ಇಂದಿಗೂ ಆಕೆಯ ಬಗೆಗೆ ಒಳ್ಳೆಯ ಭಾವನೆ ಇದೆ. ಆದರೆ ನವಾಜ್ ಶರೀಫರ ಸರ್ಕಾರ ವಜಾ ಮಾಡಲು ಅವರು ಸೇನೆಯ ಜೊತೆ ಶಾಮೀಲಾಗಿದ್ದರು ಎಂಬ ಭಾವನೆಯೂ ಇದ್ದು ಅದು ಅವರ ಹೆಸರನ್ನು ಸ್ವಲ್ಪ ಕೆಡಿಸಿದೆ. ಈಗ ಮತ್ತೆ ಪ್ರಧಾನಿಯಾಗಿರುವ ಅವರು ಭಾರತ-ಪಾಕಿಸ್ತಾನಗಳ ನಡುವಿನ ವೈಷಮ್ಯವನ್ನು ಹೆಚ್ಚಿಸುವ ಪ್ರಯತ್ನ ಮಾಡದೆ ಪಾಕಿಸ್ತಾನದ ಜನತೆಯ ಒಳಿತಿಗಾಗಿ ಶ್ರಮಿಸುತ್ತಾರೆಂದು ಹಾರೈಸೋಣ.

ಇನ್ನೊಂದು ದುರದೃಷ್ಟಕರ ಬೆಳವಣಿಗೆಯೆಂದರೆ ಪಾಕಿಸ್ತಾನದ ಉತ್ತರದಲ್ಲಿ ಗಡಿನಾಡ ಗಾಂಧಿ ಎಂದೇ ಖ್ಯಾತರಾದ ಖಾನ್ ಅಬ್ದುಲ್ ಗಫಾರ್ ಖಾನರ ಪುತ್ರ ವಲಿಖಾನ ನವಾಜ್ ಶರೀಫರ ಜೊತೆ ಸೇರಿದ್ದು.

ಪಾಕಿಸ್ತಾನದ ಸೇನೆಯ ಮನಸ್ಸು ಒಗಟೇ ಆಗಿದೆ. ಈಗ ಮುಕ್ತ ಚುನಾವಣೆ ನಡೆಸಿದರೂ ಅದು ಅವಕಾಶಕ್ಕಾಗಿ ಹೊಂಚು ಹಾಕಿ ಕಾಯುತ್ತಿದೆ. ಸರ್ಕಾರದ ಮೇಲೆ ನಿಗಾ ಇಡುವ ಅದು ವಿರೋಧ ಪಕ್ಷದಿಂದ ತನಗೆ ಬೇಕಾದುದನ್ನು ಮಾಡಿಸುತ್ತದೆ.

ಭಾರತ-ಪಾಕಿಸ್ತಾನದ ಸಂಬಂಧದಲ್ಲಿ ಇರುವ ತೊಡಕುಗಳನ್ನು ತೆಗೆದುಹಾಕುವ ಪ್ರಯತ್ನವನ್ನು ಬೆನಜಿರ್‌ರ ಹೊಸ ಸರ್ಕಾರ ಮಾಡಿತೆ? ನಮ್ಮ ಗಡಿ ರಾಜ್ಯಗಳಲ್ಲಿ ಸಮಸ್ಯೆ ಸೃಷ್ಟಿಸುತ್ತಿರುವ ಐ.ಎಸ್.ಐ ಮೇಲೆ ಕಡಿವಾಣವನ್ನು ಅದು ಹಾಕುತ್ತದೆಯೇ?

ಸಿ.ಐಟಿಯು ರಾಜ್ಯ ಮಂಡಳಿ ಸಭೆ

ಸಿಐಟಿಯು ಕರ್ನಾಟಕ ರಾಜ್ಯ ಮಂಡಳಿ ಸಭೆ ಎರಡು ದಿನಗಳ ಸಭೆ ಅಕ್ಟೋಬರ್ 30 ಮತ್ತು 31 ರಂದು ಬೆಳಗಾಂನಲ್ಲಿ ನಡೆಯಲಿದೆ. ಸಭೆಗೆ ಆಗಮಿಸುವ ಸದಸ್ಯರನ್ನು ಬೆಳಗಾವಿ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದಲ್ಲಿ ಸ್ವಯಂ ಸೇವಕರು ಎದುರುಗೊಂಡು ಸಭೆ ನಡೆಯುವ ಸ್ಥಳಕ್ಕೆ ಕರೆದೊಯ್ಯುವರು. ಆದರೆ ಪ್ರತಿಯೊಂದು ಜಿಲ್ಲೆಯಿಂದ ಎಷ್ಟು ಜನ ಸದಸ್ಯರು ಸಭೆಗೆ ಬರುತ್ತಾರೆ ಯಾವ ಮಾರ್ಗವಾಗಿ ಬರುತ್ತಾರೆ ಎಂಬುದನ್ನು ಸ್ವಾಗತ ಸಮಿತಿಗೆ ಪೂರ್ವಭಾವಿಯಾಗಿ ಬರೆದು ತಿಳಿಸಬೇಕು. ಸಭೆಯು 30 ರಂದು ಬೆಳಿಗ್ಗೆ 11 ಗಂಟೆಗೆ ಆರಂಭವಾಗುವುದು.

ವಿಳಾಸ:
ಕಾರ್ಯದರ್ಶಿ, ಇಂಡಿಯನ್ ಅಲ್ಯೂಮಿನಿಯಂ ಕಂಪನಿ ವರ್ಕರ್ಸ್ ಯೂನಿಯನ್, ನಂ. ಜಿ-5, ಇಂಡಾಲ್ ಕಾಲೋನಿ, ಬೆಳಗಾಂ-590 010.

ಜನವಿರೋಧಿ ಕಾಂಗ್ರೆ ಕೋಮುವಾದಿ ಬಿಜೆಪಿಗಳನ್ನು ಸೋಲಿಸಿ
ಸಿಪಿಐ(ಎಂ), ಸಿಪಿಐ ದೆಹಲಿ ರಾಜ್ಯ ಸಮಿತಿಗಳ ಕರೆ

ಸಿಪಿಐ(ಎಂ) ಮತ್ತು ಸಿಪಿಐಗಳು ಜಂಟಿಯಾಗಿ ದೆಹಲಿ ವಿಧಾನಸಭಾ ಕ್ಷೇತ್ರಗಳಲ್ಲಿ 17 ಸ್ಥಾನಗಳಲ್ಲಿ ತನ್ನ ಅಭ್ಯರ್ಥಿಗಳನ್ನು ನಿಲ್ಲಿಸಿ ಚುನಾವಣೆಯನ್ನು ಎದುರಿಸುತ್ತಿವೆ. ಈ ಚುನಾವಣೆಗಳು ಬಡವರ ಹಾಗೂ ನಿರ್ಲಕ್ಷ್ಯಕ್ಕೊಳಗಾದ ಜನರ ಹಿತವನ್ನು ನಿರ್ಲಕ್ಷಿಸಿರುವ ಎರಡು ಪ್ರಮುಖ ಪಕ್ಷಗಳಾದ ಕಾಂಗ್ರೆ ಹಾಗೂ ಬಿಜೆಪಿಗಳ ಬಣ್ಣವನ್ನು ಬಯಲು ಮಾಡಲು ತನ್ನ ಅಭ್ಯರ್ಥಿಗಳನ್ನು ಬೆಂಬಲಿಸಬೇಕೆಂದು ಈ ಎರಡು ಪಕ್ಷಗಳ ಜಂಟಿ ಪತ್ರಿಕಾ ಹೇಳಿಕೆ ಮನವಿ ಮಾಡಿದೆ.

ಈ ಚುನಾವಣೆಯಲ್ಲಿ ಸಾರ್ವಜನಿಕ ಹಕ್ಕುಗಳನ್ನು ರಕ್ಷಿಸಲು, ಶಾಂತಿ ಮತ್ತು ಕಾನೂನು ವ್ಯವಸ್ಥೆಯನ್ನು ಸರಿಪಡಿಸಲು ಮುಖ್ಯವಾಗಿ ಹೆಚ್ಚುತ್ತಿರುವ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ, ನಿರುದ್ಯೋಗ, ಕಾರ್ಮಿಕ ಕಾನೂನುಗಳನ್ನು ಸರಿಯಾಗಿ ಅಳವಡಿಸುವಲ್ಲಿನ ಲೋಪದೋಷಗಳು ಇತ್ಯಾದಿ ಇತ್ಯಾದಿ ಸಮಸ್ಯೆಗಳು ಬಹುಮುಖ್ಯ ಅಂಶವಾಗಿದೆ. ದೆಹಲಿ ವಿಧಾನಸಭೆಯಲ್ಲಿ ಬಡವರ ದನಿಯನ್ನು ಸರಿಯಾಗಿ ಪ್ರತಿಧ್ವನಿಸಲು ಎಡ ಪಕ್ಷಗಳ ಪ್ರಾತಿನಿಧ್ಯ ಅಗತ್ಯವೆಂದಿದೆ ಈ ಪತ್ರಿಕಾ ಹೇಳಿಕೆ.

ಈ ಹೇಳಿಕೆಯು ಕಳೆದ ಮೂರು ವರ್ಷಗಳಲ್ಲಿ ದೆಹಲಿ ಕಂಡ ಅತ್ಯಂತ ಅಮಾನವೀಯ ಕೋಮು ಗಲಭೆಗಳು ಇದನ್ನು ಬಹಳ ನಾಜೂಕಾಗಿ ಬಳಸಿದ ಬಿಜೆಪಿಯು ಸುಳ್ಳುಗಳನ್ನು ಸೃಷ್ಟಿಸಿ ಅದನ್ನು ಹೆಣೆದು ಜನಗಳನ್ನು ಉದ್ರೇಕಿಸುತ್ತಿರುವುದರತ್ತ ಗಮನ ಸೆಳೆದಿದೆ. ಈ ಚುನಾವಣೆಯಲ್ಲಿ ಎಡಪಕ್ಷಗಳ ಪ್ರಚಾರವು ನೇರವಾಗಿ ಬಿಜೆಪಿಯ ಒಂದು ಅಂಶದ ಕಾರ್ಯಕ್ರಮವಾದ ಕೋಮುವಾದವನ್ನು ಹರಡುವುದು, ಧರ್ಮವೆಂಬ ಸೂಕ್ಷ್ಮತಮವಾದ ವಿಷಯವನ್ನು ಕೋಮುವಾದದೆಡೆಗೆ ತಿರುಗಿಸುವುದು, ನಿಜವಾದ ಸಮಸ್ಯೆಗಳಿಂದ ಜನರ ಗಮನವನ್ನು ಬೇರೆಡೆಗೆ ಸೆಳೆಯುವುದನ್ನು ಸಮರ್ಥವಾಗಿ ಎದುರಿಸಿ ಜನರನ್ನು ಎಚ್ಚರಿಸುವುದೇ ಆಗಿದೆ. ಹಾಗೆಯೇ ಈ ಪಕ್ಷವು ಜನವಿರೋಧಿ ಆರ್ಥಿಕ ನೀತಿಗಳನ್ನು ತರುತ್ತಿರುವ ಕಾಂಗ್ರೆಗೆ ಗುಪ್ತ ಬೆಂಬಲವನ್ನು ಕೊಡುತ್ತಿರುವುದನ್ನು ಬಯಲಿಗೆಳೆಯುವುದೇ ಪ್ರಚಾರದ ಒಂದು ಮುಖ್ಯ ವಿಷಯವಾಗಿದೆ ಎಂದು ಈ ಜಂಟಿ ಹೇಳಿಕೆ ತಿಳಿಸಿದೆ.

ಕಾಂಗ್ರೆ ಭ್ರಷ್ಟಾಚಾರದಿಂದ ತುಂಬಿರುವ ಆಡಳಿತ, ಕೋಮುವಾದಿಗಳೊಂದಿಗಿನ ನಾಚಿಕೆಗೆಟ್ಟ ಮೈತ್ರಿ, ಒಂದು ಕಡೆಗಾದರೆ ಇನ್ನೊಂದು ಕಡೆ ಹೊಸ ಆರ್ಥಿಕ ನೀತಿ, ಕೈಗಾರಿಕಾ ನೀತಿಗಳನ್ನು ತಂದು ಬೆಲೆ ಏರಿಕೆಗೆ, ನಿರುದ್ಯೋಗಕ್ಕೆ, ನಿರ್ವಸತಿತನಕ್ಕೆ, ಸಬ್ಸಿಡಿಗಳನ್ನು ನಿಲ್ಲಿಸಿ ಜೀವನಾವಶ್ಯಕ ವಸ್ತುಗಳ ಬೆಲೆಗಳನ್ನು ಗಗನಕ್ಕೇರಿಸುವುದರ ವಿರುದ್ಧ ಇತ್ಯಾದಿ ಇತ್ಯಾದಿಗಳ ವಿರುದ್ಧ ಜನರನ್ನು ಎಚ್ಚರಿಸಿ, ಅವುಗಳ ನಿಜ ಸ್ವರೂಪವನ್ನು ಬಿಚ್ಚಿಡುವುದೇ ಚುನಾವಣಾ ಪ್ರಚಾರದ ಪ್ರಥಮ ಆದ್ಯತೆಯ ವಿಷಯವಾಗಿದೆ.

ಪ್ರಜಾಪ್ರಭುತ್ವವಾದಿ, ಧರ್ಮ ನಿರಪೇಕ್ಷಿತ ಪರ್ಯಾಯಕ್ಕಾಗಿ ನಡೆಯುವ ಈ ಚುನಾವಣಾ ಹೋರಾಟದಲ್ಲಿ ದೆಹಲಿಯ ಜನತಾದಳ ಸ್ಪಂದಿಸದೇ ಇರುವುದನ್ನು ಈ ಹೇಳಿಕೆ ಖೇದ ವ್ಯಕ್ತ ಪಡಿಸಿದೆ. ಹಾಗಿದ್ದರೂ ಇನ್ನೊಮ್ಮೆ ಆ ಪಕ್ಷದ ನಾಯಕರುಗಳಿಗೆ ಕಾಂಗ್ರೆ ಮತ್ತು ಬಿಜೆಪಿಗಳ ವಿರುದ್ಧದ ಹೋರಾಟವನ್ನು ಏಕಮುಖಗೊಳಿಸಲು ಕರೆಯಿತ್ತಿದೆ.

ಎಡಪಕ್ಷಗಳು ಈಗಾಗಲೇ ತನ್ನ ಅಭ್ಯರ್ಥಿಗಳನ್ನು ನಿಲ್ಲಿಸದಿದ್ದ ಕ್ಷೇತ್ರಗಳಲ್ಲಿ ತನ್ನೆಲ್ಲಾ ಘಟಕಗಳಿಗೆ ಪ್ರಜಾಪ್ರಭುತ್ವವನ್ನು ಹಾಗೂ ಧರ್ಮನಿರಪೇಕ್ಷತೆಯನ್ನು ಎತ್ತಿ ಹಿಡಿಯುವ ಪಕ್ಷಗಳಿಗೆ ಮತ ನೀಡಲು ಆದೇಶಿಸಿದೆ.

ಸಿಪಿಐ(ಎಂ) 6 ಸ್ಥಾನಗಳಲ್ಲಿ ಸ್ಪರ್ಧಿಸುತ್ತಿದೆ. ಅವುಗಳೆಂದರೆ:- ರಾಮನಗರ್-ನಾಥುಪ್ರಸಾದ್, ಶಾಕೂರ್ ಬಸ್ತಿ-ವಿಜಯ್ ಭಾಟಿಯಾ, ಮಂಗೋಲ್ ಪುರಿ-ಕಾನೇಶ್ವರ್ ಪ್ರಸಾದ್, ಅಂಬೇಡ್ಕರ್ ನಗರ್- ರಜ್‌ಬೀರ್, ಬಾದರ್ ಪುರ್-ಜಗದೀಶ್ ಚಾಂದ್, ಮತ್ತು ನಂದನಗರಿ-ರಾಮಕುಮಾರ್. ಸಿಪಿಐ 11 ಸ್ಥಾನಗಳಲ್ಲಿ ಸ್ಪರ್ಧಿಸುತ್ತಿದೆ.

47 ವರ್ಷಗಳ ನಂತರ ಮರಳಿದ ಫೌಂಟೇನ್ ಪೆನ್

47 ವರ್ಷಗಳ ಹಿಂದೆ ಕಳೆದುಕೊಂಡ ಫಾಂಟೇನ್ ಪೆನ್ ಅಕ್ಟೋಬರ್ 8 ರಂದು ಒಂದು ಸಾರ್ವಜನಿಕ ಸಮಾರಂಭವೊಂದರಲ್ಲಿ ಅದರ ಮಾಲಿಕರಿಗೆ ಹಿಂತಿರುಗಿದ ಘಟನೆ ವರದಿಯಾಗಿದೆ.

ಇ.ಎಂ.ಎಸ್. ನಂಬೂದರಿಪ್ಪಾಡ್‌ರವರು 1946 ರಲ್ಲಿ ದೇಶಾಭಿಮಾನಿ ಪತ್ರಿಕೆಯ ಕೋಳಿಕ್ಕೋಡ್ ಆಫೀಸಿನಲ್ಲಿದ್ದಾಗ ಪೋಲೀಸರು ಅವರನ್ನು ಬಂಧಿಸಿದಾಗ ಅವರು ಫೌಂಟೇನ್ ಪೆನ್ನನ್ನು ಅಲ್ಲೇ ಬಿಟ್ಟು ಹೋಗಿದ್ದರು. ಇ.ಎಂ.ಎಸ್. ಜೊತೆ ಸಮಾಲೋಚಿಸಲು ಅಲ್ಲಿಗೆ ಬಂದಿದ್ದ ಒಂದು ಪ್ರಕಾಶನದ ಸಂಪಾದಕ ಹಾಗೂ ಕವಿ ಡಿ.ಎಂ.ಪೊಟ್ಟೆಕ್ಕಾಡ್ ರವರು ಆ ಪೆನ್ನನ್ನು ತೆಗೆದುಕೊಂಡಿದ್ದರು. ಅವರು 1971ರಲ್ಲಿ ನಿಧನಹೊಂದುವಾಗ ಈ ಪೆನ್ನನ್ನು ಅವರ ತಮ್ಮನಾದ ರಾಮನುನ್ನಿಗೆ ಒಪ್ಪಿಸಿ ಈ ಪೆನ್ನನ್ನು ಇ.ಎಂ.ಎಸ್‌ಗೆ ಹೇಗಾದರೂ ಮರಳಿಸಬೇಕೆಂದು ಹೇಳಿದ್ದರು.

ಆ ರಾಮಾನುನ್ನಿಗೆ ಪೆನ್ನನ್ನು ಮರಳಿಸಲು ಇದುವರೆವಿಗೂ ಆಗಿರಲಿಲ್ಲ. ಮೊನ್ನೆ ರಾಮನುನ್ನಿ ಹಳ್ಳಿಯಾದ ತ್ರಿಸ್ಸೂರು ಜಿಲ್ಲೆಯ ತ್ರಿಪ್ರಯಾರಿನ ಪಕ್ಷದ ಕಛೇರಿಯನ್ನು ಉದ್ಘಾಟಿಸಲು ಇ.ಎಂ.ಎಸ್. ಅಲ್ಲಿಗೆ ಆಗಮಿಸಿದ್ದರು. ಆಗ ನಡೆಯುತ್ತಿದ್ದ ಸಮಾರಂಭದಲ್ಲಿ ರಾಮನುನ್ನಿ ಆ ಪೆನ್ನನ್ನು ಇ.ಎಂ.ಎಸ್.ಗೆ ವಾಪಸು ನೀಡಿದರು.

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಪರವಾಗಿ ಮುದ್ರಕ ಮತ್ತು ಪ್ರಕಾಶಕ ಪಿ.ರಾಮಚಂದ್ರರಾವ್, ಸಂಪಾದಕೀಯ ಕಚೇರಿ : 12, 18ನೇ ...